UNIVERSAL
LIBRARY
OU_200464
UNIVERSAL
LIBRARY

# ಅಬಲಾ

(ಸಾಮಾಜಿಕ ಕಾದಂಬರಿ)


ಬರೆದವರು :

**ಶಾ. ಭೀ. ಮನಸಬ್ದಾರ**



ಪ್ರಕಾಶಕರು :

ಸತ್ಯಶೋಧನ ಪ್ರಕಟನ ಮಂದಿರ

**ಬೆಂಗಳೂರು**

ಪ್ರಥಮ ಮುದ್ರಣ ೧೯೪೬

ಬೆಲೆ : ೦—೧೨—೦

ಮುದ್ರಕರು :
ಆರ್ ಎಸ್. ಹಬ್ಬು,
ಉಷಾ ಪ್ರೆಸ್, ನೀಲಗಿರಿ ರೋಡ್,
ಮೈಸೂರು

# ಮೊದಲ ಮಾತು

ರವಿಪುರವು ಅಂದಿನ ಕರ್ನಾಟಕದಲ್ಲಿ ಮಾದರಿಯ ರಾಜಧಾನಿ; ಇಂದು ಅದು ತಾಲೂಕಿನ ಊರು; ಅದರ ಆಗಿನ ಕಳೆಯೇ ಬೇರೆ; ಈಗಿನದು ಬೇರೆ

"Ill fares the land to hastening ills a pray
Where wealth accumulates men decay."

GOLDSMITH

ಇದು ನಿಷ್ಠುರ ಸತ್ಯ; ಇದು ವಸ್ತುಸ್ಥಿತಿ. ಇಂದಿನ ಸ್ಥಿತಿಯನ್ನು ಕುರಿತು ಬರೆದಿರುವ ಈ ಕಥಾವಸ್ತುವಾದರೂ ಅಂಥ ಕಠೋರ ಸತ್ಯವನ್ನೆ ಕುರಿತು ಇರುವಾಗ, ಯಾವ ವಿಶಿಷ್ಟ ಜಾತಿಯೂ ಹಾರಿ ಬೀಳುವುದು ಬೇಡ; ಯಾವ ಜನಾಂಗವಾದರೇನು? ಅದರ ಅವನತಿಯ ಚಿತ್ರ ಒಡೆದು ಕಾಣುವಾಗ, ನಾವು ಅದನ್ನು ಕಂಡೂ ಕಾಣದವರಾಗಿರಬೇಕೆ ?

ಸಾಕಷ್ಟು ಬಲವಿದ್ದರೂ ಜೀವನದ ಸರಿಯಾದ ಹಾದಿ ಹೊಳೆಯದೆ ಭ್ರಮಿಷ್ಟರಾಗಿ ಅಲೆಯುವ ಯುವಕರನ್ನು ನಾವೆಷ್ಟು ಸಲ ಕಾಣುವುದಿಲ್ಲ? ಹಾಗಂತೂ ಪ್ರಪಂಚಕ್ಕೆ ಇಂಥವರನ್ನೂ ಪೋಕರಿಗಳ ಸಾಲಿಗೆ ಸೇರಿಸುವುದು ಸಹಜವಾದ ಮಾತು ಆದರೆ ಅವರು ಈ ವ್ಯವಹಾರಿಕರ ನೀತಿ-ನಿಯಮಗಳಿಗೆ ಸಗ್ಗದೆ, ತಮ್ಮ ಹೆಣಗಾಟದಲ್ಲಿ ಬೀದಿಹೆಣಗಳಾಗಲಿಕ್ಕೂ ಹೆದರುವುದಿಲ್ಲ ಈ ತಿಮಿರದ ಸಮಯವಷ್ಟು ದಾಟಿ ಧಿಗ್ ಧಿಗ್ ಎಂದು ಅವರು ತಲೆಯೆತ್ತಿದರೆ ಈ ವ್ಯವಹಾರಿಕರೇ ಅವರ ಅನುಯಾಯಿಗಳು. ಇದು ಪುರುಷ ಜೀವನದ ಬಗೆ. ಆದರೆ ಯುವತಿಯರಾದ ನಮ್ಮ ಅಕ್ಕ ತಂಗಿಯರಿಗೆ ಒದಗಬಾರದ ಸಂಕಟವೊದಗಿದರೆ ವ್ಯವಹಾರಿಕರ ಈ ನೀತಿ ನಿಯಮಗಳಿಗೆ ತುತ್ತಾಗುವ ಅವರ ಬಾಳು ಗೋಳಿನಲ್ಲಿ ಆರಂಭವಾಗಿ ಹಾಳಿನಲ್ಲಿ ಕೊನೆಯಾಗುವುದನ್ನು ನಿತ್ಯವೂ ಕಾಣುವೆವಷ್ಟೆ; ಅಂತೇ ಅವರು ಅಬಲೆಯರೆಂದು ಹೇಳುವುದು ನಮ್ಮ ರೂಢಿಯ ಮಾತು.

ಇಂಥ ಅಬಲೆಯೆ ಈ ವಸ್ತುವಿನ ನಾಯಕಿ. ಅವಳೀಗ ಅಬಲೆಯೋ? ನಿರ್ಬಲೆಯೊ? ದುರ್ಬಲೆಯೊ? ಸಬಲೆಯೊ? ಯಾವುದೂ ತಿಳಿಯದೆ,

ಇದ್ದಕ್ಕಿದ್ದ ಹಾಗೆ ಅವಳ ಬಗೆಯನ್ನು ಚಿತ್ರಿಸುವ ಯತ್ನವಿದು; ಇದು ಸಫಲವೊ ವಿಫಲವೊ, ಓದುಗರೇ ಹೇಳಬೇಕು.

ಇಂದಿನ ಕನ್ನಡ ಸಾಹಿತ್ಯದಲ್ಲಿ ಹೆಸರಾಗಿರುವ ಶ್ರೀ ರಾ ರಾ ಕೆ. ಗೋಪಾಲಕೃಷ್ಣರಾಯರು, ಬಿ. ಎ, ಇವರು ತಮ್ಮ ಅಮೂಲ್ಯವಾದ ಸೂಚನೆಗಳಿಂದ ಸಹಾಯವಾಗಿರದಿದ್ದರೆ, ಇಷ್ಟರವುಟ್ಟಿಗಾದರೂ ನಾನು ಬರೆಯುತ್ತಿರಲಿಲ್ಲ; ಪ್ರಯತ್ನಕ್ಕೆ ಇರುವ ಯಶಸ್ಸಿನ ಶ್ರೇಯವೆಲ್ಲವೂ ಅವರಿಗೆ

ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದವರು ಪುಸ್ತಕವನ್ನು ಪ್ರಸಿದ್ಧ ಮಾಡುವುದರಲ್ಲಿ ತೋರಿದ ಬಂಧುಪ್ರೇಮವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೆ!

ರಾ. ಭೀ. ಮುನಸಬ್ದಾರ

# ಅಬಲಾ

## ೧

## ಶುಭಸ್ಯ ಶೀಘ್ರಂ

ತಂದೆ ವಿಠಲಾ । ತಾಯಿ ವಿಠಲಾ । ತಂದೆ ತಾಯಿ ವಿಠಲಾ ॥
ಹಿಂದೆ ವಿಠಲಾ । ಮುಂದೆ ವಿಠಲಾ । ಹಿಂದೆ ಮುಂದೆ ವಿಠಲಾ ॥

ಎಂದು ಹೇಳುವಾಗ ಸ್ವಾಮಿರಾಯಾಚಾರ್ಯರ ಕುಣಿತಕ್ಕೆ ಇತಿಮಿತಿಗಳೇ ಇರಲಿಲ್ಲ. ಆ ದಿವಸ ನರಸಿಂಹ ದೇವರ ಗುಡಿಯಲ್ಲಿ ರಥೋತ್ಸವ: ಚಿಳ್ಳಿಪಿಳ್ಳಿ ಮೊದಲು ಮಾಡಿ ಊರ ಜನ ಸಂದಣಿ. ಅರ್ಧ ಮುಕ್ಕಾಲು ಜನ ಆಚಾರ್ಯರ ಭಜನೆ ನಡೆದಲ್ಲಿ. ದೇವರ ನಾಮದಲ್ಲಿ ಆಚಾರ್ಯರು ದೇಹಭಾವವನ್ನೇ ಮರೆತುಬಿಟ್ಟಿದ್ದರು. ಹಣೆಯಿಂದ ಹರಿದ ಬೆವರು ಕಣ್ಣಿಂದ ಹರಿದ ಹನಿಗಳನ್ನು ಕೂಡಿತು; ಅದೇಕೊ ಮಧ್ಯದಲ್ಲೇ ಆಚಾರ್ಯರು ಕಣ್ಣು ತೆರೆದರು; ಕಣ್ಣೀರು ಮತ್ತಷ್ಟು ಕೊಚ್ಚಿ ಹರಿದವು ಒಳಗೊಳಗೇ ನೊಂದು ಯಾವ ಭಾವವನ್ನೂ ತೋರಗೊಡದೆ ಇನ್ನಷ್ಟು ಒತ್ತರದಿಂದ ಕುಣಿಯ ತೊಡಗಿದರು.

ರಥವು ಕ್ರಮೇಣ ಮರಳಿ ತನ್ನ ಸ್ಥಾನಕ್ಕೆ ಬಂತು; ಎಲ್ಲರೂ ತಮ್ಮ ತಮ್ಮ ಮನೆಗೆ ತೆರಳುವ ತವಕದಲ್ಲಿದ್ದರು; ಎಲ್ಲಿ ಕುಳಿತರೂ ಸಮಾಧಾನವಿಲ್ಲದೆ ಆಚಾರ್ಯರು ಗುಡಿಯಂಗಳದಲ್ಲೇ ಇರುವ ಬಾವಿಯ ಕಟ್ಟೆಯ ಮೇಲೆ ಕುಳಿತರು. ಊರಿಗೆ ಹೆಸರಾದ ಬಂಗಾರಸಾನಿಯು ತಮ್ಮೆಡೆಗೇ ಬರುವುದನ್ನು ಕಂಡು ಅವರ ದುಃಖವು ಉಕ್ಕಿತು.

"ಅಯ್ಯೋ ಸ್ವಾಮಿ! ಅನ್ಯಥಾ ಭಾವಿಸಬೇಡಿ; ಕುಲದಿಂದ ನಾನು ನರ್ತಕಿ ಹೌದು; ಆದರೂ ದೇವರು ಬ್ರಾಹ್ಮಣರಲ್ಲಿನ ನನ್ನ ವಿಶ್ವಾಸಕ್ಕೆ ಕೊರತೆಯಿಲ್ಲ. ನೀವು ಕಂಡದನ್ನೇ ನಾನೂ ಕಂಡವಳೆಂದು ನಿಮಗೆ ತಲ್ಲಣವಷ್ಟೆ. ಊರವರು ಅದನ್ನು ತಿಳಿದರೆ ನಿಮಗೆ ಅದೆಂಥ ಕಲಂಕವೆಂಬುದನ್ನು ನಾನು ಅರಿಯೆನೇ? ಜೊತೆಗೆ ನಾನೂ ಹೆಂಗಸು; ಇನ್ನೂ ಮದುವೆಯಾಗಲಿರುವ ನಿಮ್ಮ ಮಗಳ ಮರ್ಯಾದೆಯನ್ನು ಬೀದಿಗೆಳೆದು ನಾನು ಯಾವ ನರಕಕ್ಕೆ

ಗುರಿಯಾಗಲಿ!" ಎಂದು ಆಕೆ ನುಡಿದಾಗ ಆಚಾರ್ಯರ ಕಣ್ಣಲ್ಲಿ ನೀರು ತುಳುಕಿದುವು.

"ನನ್ನ ಕೊರಳಾಣೆ, ಆಚಾರ್ಯರೇ! ಎಲ್ಲಿಯೂ ಇದನ್ನು ಉಸಿರುವುದಿಲ್ಲ, ಎಂತ ತಿಳಿಸಲಿಕ್ಕೆಂದೇ ಈಗ ಬಂದೆ, ಕಣ್ಣೊರಿಸಿಕೊಳ್ಳಿ," ಎಂದು ಮತ್ತೆ ಸಮಾಧಾನ ಪಡಿಸಿದಳು.

"ನರಸಿಂಹ ದೇವರೇ ನಿನ್ನ ಹೊಟ್ಟೆ ಹೊಕ್ಕಿರುವನಮ್ಮಾ!" ಎಂದಷ್ಟೆ ನುಡಿದರು ಆಚಾರ್ಯರು.

"ಅದೂ ಹಾಗಿರಲಿ, ಆದರೆ ಸ್ವಾಮೀ! ಇನ್ನು ಬೇಗ ಅವಳ ಮದುವೆಗೊತ್ತು ಮಾಡುವುದು ಒಳಿತು."

ಆಚಾರ್ಯರು ನಿಟ್ಟುಸಿರು ಬಿಟ್ಟರಷ್ಟೆ.

ಆಗ ತಾನೇ ಯುವಕನೊಬ್ಬನು ಬಳಿಯಿಂದ ಹಾದು ಹೋದನು. ಆಚಾರ್ಯರ ಕಣ್ಣು ಅರಳಿ ಕೆಂಪೇರಿದುವು; ಹೊಟ್ಟೆಯಲ್ಲಿನ ಬೆಂಕಿ ಹೊರ ಬೀಳದಂತೆ ಕೆಳತುಟಿಯನ್ನು ಹಲ್ಲಿನಿಂದ ಒತ್ತಿ ಹಿಡಿದರು. ಹಾಗೇ ಮನೆಗೆ ನುಗ್ಗಿ ಮಗಳನ್ನೆ ಸೀಳಬೇಕೆಂದರು; ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡುವುದು ಬೇಡವೆಂದು ವ್ಯಾಕುಲಚಿತ್ತರಾದರು. ಬಂಗಾರಸಾನಿಯೂ ತನ್ನ ಮನೆಯ ಹಾದಿ ಹಿಡಿದಳು.

ಬಾವಿ ಕಟ್ಟೆಯ ಮರೆಯಲ್ಲಿ ಬಿಟ್ಟಿದ್ದ ಜೋಡು ಹಾಕಿಕೊಂಡು ಹೋಗಬೇಕೆಂದು ವಕೀಲ ಅಪ್ಪಾರಾಯರು ಬಂದರು.

"ಅದೇನು ಆಚಾರ್ಯರೇ! ಭಜನೆಯ ದಣಿವನ್ನು ಆರಿಸಿಕೊಳ್ಳುತ್ತಿರುವಿರೇನು?" ಎಂದು ಕೇಳಿದರು.

ದೊಡ್ಡ ವಕೀಲರು ಮಾತಾಡಿಸಿದಾಗ ಬಡವರ ಉತ್ತರಕ್ಕೆ ತಡವಾಗುವುದುಂಟೇ? ಜೊತೆಗೆ ರಾಯರು ಆಚಾರ್ಯರ ಯಜಮಾನರು; ಅವರ ಮನೆಯಲ್ಲಿ ಗಂಟೆ ಬಾರಿಸಿ ತಾನೇ ಇವರಿಗೆ ಮಧ್ಯಾಹ್ನದ ಊಟ. ಅಂತೂ ಚಿತ್ತವ್ಯಾಕುಲತೆಯ ಮೂಲಕ ಆಗಬಾರದ ತಡವು ಕೊಂಚ ಆಗಿಯೇ ತೀರಿತು. "ಇಲ್ಲ ರಾಯರೇ! ಹಾಗೇನಿಲ್ಲ," ಎಂದು ಹುಚ್ಚು ನಗೆಯನ್ನು ತೋರಿದರು. ಅದನ್ನು ಕೇಳಲಿಕ್ಕೆ ರಾಯರು ಅಲ್ಲೇ ಸ್ವಲ್ಪ ನಿಂತಿದ್ದರು] "ಸರಿ" ಎನ್ನುತ್ತಲೆ

ಸಾಗಿಯೇ ಬಿಟ್ಟರು ಇಷ್ಟು ಸಂಕ್ಷಿಪ್ತವಾದ ಉತ್ತರಕ್ಕೆ ಆಚಾರ್ಯರು ಭುಗಿಲುಗೊಂಡರು; ಥಕ್ಕನೆ ಎದ್ದರು; ಅಡಿ ಎರಡು ಮಾಡಿ ರಾಯರ ಪಕ್ಕಕ್ಕೊ ಬಂದರು.

"ಬಂದೇ ಬಿಟ್ಟಿರಲ್ಲಾ!" ಎಂದರು ರಾಯರು.

"ಅಲ್ಲಾ! ತಾವು—ಒಬ್ಬರೇ ಹೊರಟಿರಿ; ಮನೆ ತನಕ ಜೊತೆಯಾಗ ಬೇಕೆಂದು ಬಂದನಷ್ಟೆ," ಎಂದೆನ್ನುವಾಗ ರಾಯರ ಮುಖಭಾವವನ್ನು ನಿರುಕಿಸಿದರ; ತಾವು ಯೋಚಿಸಿದಂತೆ ಯಾವ ಅನರ್ಥವೂ ಇಲ್ಲವೆಂದು ಎದೆಗೊಂಡರು

ಆ ಮಾತು ಈ ಮಾತು ಆಡುವಷ್ಟರಲ್ಲಿ ರಾಯರ ಮನೆಯೇ ಒಂತು. ಮನೆಯಾಳು ಮಲ್ಲನು ಔಷಧದ ಬಾಟಲಿ ಹಿಡಿದು ಹೊಸ್ತಿಲ್ಲಲ್ಲೆ ಎದರಾದನು.

"ಮಾಧೂರಾಯರಿಗೆ ದವಾಖಾನೆಯ ಔಷಧ ನಡೆದಿದೆಯೇನು?"

"ಏನೋ, ಸ್ವಾಮೀ! ವೈದ್ಯರೂ ಆದರು; ಹಕೀಮರೂ ಆದರು. ಯಾವ ಬಗೆಯೂ ಅರಿಯಲಿಲ್ಲ. ಡಾ. ಮುಕುಂದಲಾಲಜಿಯವರು ಒಳ್ಳೇ ಅನುಭವಿಕರು; ಅವರ ಉಪಚಾರ ಇಷ್ಟು ನೋಡೋಣ ಎಂತ ನಿನ್ನಿಂದ ದವಾಖಾನೆಯ ಔಷಧ. ಬನ್ನಿ; ಕೊಂಚ ಕುಳಿತು ಹೋಗುವಿರಂತೆ."

"ಅಲ್ಲ ರಾಯರೇ! ಬೇನೆಯಾದರೂ ಏನು? ಪಾಪ, ಮಾಧೂರಾಯರನ್ನು ಒಂದೇ ಸವನೆ ಕಾಡುತಿದೆ."

"ಈಗಿನ ತರುಣರಿಗೆ ಬೇರೆ ಯಾವ ರೋಗ? ಅದು ಔಷಧಗಿವುಷಧಕ್ಕೆ ಹಣಿಯುವುದಿಲ್ಲ, ಬೇಗ ಲಗ್ನ ಮಾಡಿದರೆ ಅವನು ವಾಸಿಯಾಗುವನು, ಎಂದು ನಮ್ಮ ಗಣಿಕಾರ ಗಂಗಪ್ಪ ವೈದ್ಯನು ಖಂಡಿತವಾಗಿ ಹೇಳಿರುವನು. ನಾನೂ ಅಂಥ ಮನೆತನೆಸ್ಥರ ಹುಡುಗಿ ನೋಡಿ ಅದಿಷ್ಟು ಮಾಡಿಬಿಡಬೇಕೆಂಬ ಯೋಚನೆಯಲ್ಲಿ' ಇದ್ದೇನೆ."

ಆಚಾರ್ಯರು ಒಳಗಿನ ಯಾವುದೋ ಕಗ್ಗಂಟನ್ನು ಬಿಡಿಸುತ್ತಿದ್ದರು.

"ಯಾಕೆ, ಅದೇನೋ ಆಲೋಚನೆ?" ಎಂದರು ಅಪ್ಪಾರಾಯರು.

"ಅಲ್ಲಾ–ಸರಿ—ಹುಂ; ಅದಲ್ಲಾ! ನಿಮ್ಮಂಥವರಿಗೂ ಈ ವಿಷಯವಾಗಿ ಯೋಚನೆಯೇ ಎಂದೆ. ರೋಗವೇನು ಇಂದಿಲ್ಲ ನಾಳೆ ಹೋಗದೆ ಇದ್ದೀತೆ? ತಮ್ಮ ಸರಿಸಮಾನಸ್ಕರ ಯಾರ ಕನ್ಯೆಯನ್ನಾದರೂ ತಂದು ಮಾಧೂರಾಯ

ರಿಗೆ ಗಂಟು ಹಾಕಬಹುದು.” ಇನ್ನೂ ಏನೇನೋ ನುಡಿಯಬೇಕೆಂದ ಆಚಾರ್ಯರು ಅದೆನ್ನೆಲ್ಲ ಬಹು ಪ್ರಯಾಸದಿಂದ ನುಂಗಿದರು.

ಮಾತು ಬಲ್ಲ ವಕೀಲ ಅಪ್ಪಾರಾಯರಿಗೆ ಆಚಾರ್ಯರ ಕದಲಿದ ಮನಸ್ಸು ಹೊಳೆಯದೆ ಇದ್ದೀತೆ? ‘ಲಗ್ನದಿಂದ ಮಗನ ರೋಗ ಪರಿಹಾರ’ ಎಂಬ ಆಸೆಯಿದ್ದರೂ ಸರಿಸಮಾನಸ್ಕರೊಂದಿಗೆ ಬೀಗಸ್ತನ ಬೆಳೆಸಿದರೆ ದುಡ್ಡು ಕೈ ಬಿಡುವದೆಂಬ ಭಯವೂ ಇದ್ದಿತು.

“ಅದೇನೋ ಸ್ವಾಮೀ! ಮಗಳ ಲಗ್ನ ಮಾಡುವಾಗ ತಮಗಿಂತ ಧನಿಕರ ಮನೆ ಹುಡುಕಬೇಕು. ನಮ್ಮದು ಮೊಗಲಾಯಿ ಠೀವಿ. ಶ್ರೀಮಂತರ ಬಣ್ಣದ ಬೀಸಣಿಕೆ ನಮಗೆ ಬೇಡ.

ಆಚಾರ್ಯರಿಗೆ ಮುಗಿಲು ಮೂರು ಬೆರಳಿನಂತರದಲ್ಲಿ.

“ಇವೆಲ್ಲ ಬರಿ ಆಡುವ ಮಾತು ರಾಯರೇ! ಪ್ರಪಂಚವಾದರೂ ಒಪ್ಪಬೇಕಲ್ಲ?—”

“ನಾಳೆ ನಾನು ಸಾಲಗಾರನಾದರೆ ಇದೇ ಪ್ರಪಂಚವು ಮಾತು ಕೂಡ ಆಡುವುದಿಲ್ಲ ಅಲ್ಲದೆ ನನಗೆ ಇದೊಂದೇ ಲಗ್ನವಲ್ಲ; ಇನ್ನೂ ಎರಡು ಹೆಣ್ಣು, ಒಂದು ಗಂಡು ನನ್ನ ಹೊಣೆಗಾಗಿ ಕಾದಿವೆ. ಬಡಬ್ರಾಹ್ಮಣನ ಹುಡುಗಿಯಾದರೂ ಸಾಕು, ತಾಳಿ ಕಟ್ಟಿ ಬಿಡುವೆನು.”

“ತಮ್ಮ ಮಾತು ನಂಬುವದಾದರೆ ಅಷ್ಟು ದೂರದ ವಿಚಾರವೇಕೆ? ನಾನೂ ಬಡಬ್ರಾಹ್ಮಣ. ಮದುವೆಯಿಂದಲೇ ಮಾಧೂರಾಯರು ಶೀಘ್ರ ಗುಣಹೊಂದುವರಾದರೆ ನಮ್ಮ ಸುಶೀಲೆಯು ಪ್ರಬುದ್ಧಳಾಗಿದ್ದಾಳೆ; ಆದರೆ ಅಂಥ ಸುಸ್ವರೂಪಿ————”

“ಅಯ್ಯೋ! ಬಿಡಿ ಸ್ವಾಮೀ! ನಮ್ಮ ಹೆಣ್ಣೇನು ಪಾತರ ಕುಣಿಸುವುದೆ? ಮನೆಗೆಲಸ ನೋಡಿಕೊಳ್ಳುವಂತೆ ಗಟ್ಟಿಮುಟ್ಟ ಇದ್ದರಾಯಿತು.”

“ಇದೂ ನಿಜ. ಭಾರ್ಯಾ ರೂಪವತೀ ಶತ್ರುಃ ಎಂದು ನಮ್ಮ ಪೂರ್ವಜರೇ ಹೇಳಿರುವರು.”

ರಾಯರು ಗಂಭೀರವಾಗಿ ತಲೆದೂಗಿದರು.

ಇಬ್ಬರೂ ‘ಶುಭಸ್ಯ ಶೀಘ್ರಂ’ ಎಂಬ ನಿರ್ಣಯಕ್ಕೂ ಬಂದರು.

೨

## ಆ ರಾತ್ರಿ

"ಖಂಡಿತ, ನಾನೇ ಸುಶೀಲೆಯ ತಂದೆಯಾಗಿದ್ದರೆ ನಿನ್ನ ಕಣ್ಣುಗಳನ್ನೆ ಕೀಳುತಿದ್ದೆ" ಎಂದು ಬಂಗಾರಸಾನಿಯು ಸಿಟ್ಟಿನಿಂದಲೇ ನುಡಿದಳು.

ಕಲ್ಲಪ್ಪಾಚಾರ್ಯನು ಹೀಹೀ ಎಂದು ನಕ್ಕನಷ್ಟೆ.

ಅವಳಿಗೆ ಸಿಟ್ಟು ತಡೆಯದಾಗಿ ಹತ್ತಿರವಿದ್ದ ಪೀಕದಾನಿ (ಉಗಳಲಿಕ್ಕೆಂದು ಇಟ್ಟ ಪಾತ್ರೆ) ಸರಿಸಿಕೊಳ್ಳುತ್ತ "ಥೂ ನಿನ್ನ ನಾಚಿಕೆಗೇಡಿ ಬಾಳಿಗೆಬೆಂಕಿ ಇಡಲಿ," ಎಂದಳು.

"ಕಂಡಿದ್ದೇನೆ ಬಿಡೇ! ಅಂಥ ತಪ್ಪನ್ನೇನು ಮಾಡಿದೆ? ಅವಳೂ ನನ್ನ ಕಡೆಗೆ ನೋಡಿದಳು: ನಾನೂ ಅವಳನ್ನು ನೋಡಿದೆ"

"ಅಷ್ಟು ಮಂದಿಯಲ್ಲಿ ಕಣ್ಣು ಚಿವುಟಲಿಕ್ಕೆ ಏನು ಧಾಡಿಯಾಗಿತ್ತು ನಿನಗೆ? ಅದನ್ನು ನೋಡಿ, ಪಾಪ, ಬಡಬ್ರಾಹ್ಮಣನು ಅದೆಷ್ಟು ನೊಂದನು."

ಪಕ್ಕದ ಮನೆಯಲ್ಲಿ ಅಳುವಿನ ಸದ್ದು ಕೇಳಿ ಇಬ್ಬರೂ ಬೆಚ್ಚಿದರು; ಒಡನೆ ಮಾಳಿಗೆಯೇರಿದರು.

"ಹೇಳು, ನಿಜವಾಗಿ ಹೇಳು, ಇಲ್ಲವಾದರೆ ನಿನ್ನನ್ನು ಇಲ್ಲೇ ಹುಗಿದು ಬಿಡುವೆನು," ಎಂದು ಸ್ವಾಮಿರಾಚಾರ್ಯರು ಗದರಿಸಿದರು. ಕೈಯಲ್ಲಿನ ಕೋಲಿನಿಂದ ಮಗಳನ್ನು ಥಳಿಸಿದರು.

"ನಂಗೇನೂ ಗೊತ್ತಿಲ್ಲಪ್ಪಾ!" ಎಂದಷ್ಟೆ ಸುಶೀಲೆಯು ಅಳುತ್ತ ಹೇಳಿದಳು.

ಜಾನಕಮ್ಮನು ಮಗಳನ್ನು ಬಿಡಿಸಲಾಗದೆ ಈ ರಾದ್ಧಾಂತವು ಇನ್ನೊಬ್ಬರ ಕಿವಿಗೆ ಬಿದ್ದೀತೆಂಬ ಭಯದಲ್ಲಿ ಕತ್ತೊತ್ತಿ ಅಳುತ್ತಿದ್ದಳು.

ಇತ್ತ ಬಂಗಾರಸಾನಿಯು "ನೋಡಿದೆಯಾ?" ಎಂದು ಕಲ್ಲಪ್ಪನೆಡೆಗೆ ಕಿಡಿ ಕಾರಿದಳು.

ಪಿಶಾಚಿಯಂತೆ ನಕ್ಕ ಕಲ್ಲಪ್ಪನ ಸಾನ್ನಿಧ್ಯಕ್ಕೂ ಹೇಸಿದಳು; ಅವನನ್ನು ಪಾವಟಿಗೆಯಲ್ಲಿ ನೂಕಿದಳು; ಸರಸರ ಇಳಿದಳು.

"ಆಚಾರಸ್ವಾಮೀ! ಆಚಾರಸ್ವಾಮೀ!" ಎಂನು ಹಗುರಾಗಿ ಬಾಗಿಲ ತಟ್ಟಿದಳು. ಬಾಗಿಲು ತೆರೆದಿತು.

ಆಚಾರ್ಯರು ಅದೇ ಕೋಲಿನಿಂದ ತಮ್ಮನ್ನು ತಾವೇ ಹೊಡೆದುಕೊಂಡರು; ಜಾನಕಮ್ಮನು ಪತಿಯ ಕಾಲಿಗೆ ಬಿದ್ದಳು. ಸುಶೀಲೆಯು ನಡುಗುತ್ತಿದ್ದಳು; ಅವಳಣ್ಣ ಸುಬ್ಬು "ಅಪ್ಪಾ, ಅಪ್ಪಾ!" ಎಂದು ಬಾಯಿಬಿಟ್ಟನು. ಎಣ್ಣೆ ಸರಿದಿತ್ತೆಂದು ದೀಪವು ನಂದುತ್ತಲಿತ್ತು. ಆಚಾರ್ಯರ ಕೈ ಹಿಡಿದು ಬಂಗಾರಸಾನಿಯು ತನ್ನ ಮನೆಯೊಳಕ್ಕೆ ಬಂದಳು. ಎರಡೂ ಮನೆ ಬಾಗಿಲುಗಳು ಮುಚ್ಚಿದುವು. ಹೊರಗೆ ಕತ್ತಲೆ ಮುಸುಕಿತು.

---

೩

## ಉರುಟಣೆ

ಸುಶೀಲೆ ನವಯುವತಿ, ಚೆಲುವೆಯೆನಿಸದಿದ್ದರೂ ಕಳೆತುಂಬಿ ಬೆಳೆದವಳು. ಬಣ್ಣ ಸಾದುಕಪ್ಪು, ಅಷ್ಟೇ ಹೊರತು ಕಣ್ಣು ಮೂಗು ತುಂಬುಗೆಂಪಿನ ಕೆನ್ನೆ, ಇವು ಯಾವುದಕ್ಕೂ ಕೊರತೆಯಿಲ್ಲ ಮುದ್ದುಮಾಟದ ಅವಯವಗಳಿಂದ ಎದ್ದು ಕಂಡಳ; ಉಟ್ಟ ಪೀತಾಂಬರ, ತೊಟ್ಟ ಆಭರಣ, ಇವುಗಳಿಂದ ಇನ್ನಿಷ್ಟು ಕಳೆವಂತೆಯಾಗಿದ್ದಳು.

ಪಕ್ಕದಲ್ಲೇ ಮಾಧೂರಾಯ; ಅವನೂ ಯುವಕನೇ! ಆದರೆ ಈ ಮೊದಲೇ ಯೌವನಾವಸ್ಥೆಯ ಎಲ್ಲಾ ದಿಕ್ಕುದೆಸೆಗಳನ್ನು ಕಂಡು ಈಗ ಆರು ತಿಂಗಳಿಂದ ಮುದುಕರ ಹಾಸಿಗೆಯನ್ನು ಕದ್ದವನು ಮೇಲೆತ್ತರ ಮೈಕಟ್ಟಿನ ಆಳು. ಆದರೆ ಅದೇ ಬೆನ್ನು ಮೂಳೆಗೆ ಭಾರವಾಗಿ ಬೆಳೆದ ಡೂಗಿನಿಂದ ಬಾಗಿ ಕುಳಿತಿದ್ದನು.

ಪಡಸಾಲೆಯು ತುಂಬಾ ಹೆಂಗಸರು; ವರನೊಬ್ಬನೇ ಗಂಡಸು

"ಅಂತೂ ಮಗನ ಮದುವೆ ಕಂಡೆನಲ್ಲ!" ಎಂದು ಸಮಾಧಾನ ಮಾಡಿಕೊಂಡ ಅಪ್ಪಾರಾಯರು ಎದುರಿನ ಅಟ್ಟದ ಕಿಟಕಿಯಲ್ಲಿ; ಎಷ್ಟೋ ದಿನಗಳ ತರುವಾಯ ಮನೆಯಲ್ಲಿ ಮದುವೆಯ ಸಡಗರ" ಎಂದು ಬೀಗಿತ್ತಿ ಸೀತಮ್ಮನಿಗೆ ಹಿಡಿಸದ ಹಿಗ್ಗು; ಮತ್ತೊಮ್ಮೆ ಮತ್ತೊಮ್ಮೆ ಮಗಳನ್ನು ನೋಡಬೇಕೆನಿ

ಸಿದರೂ ಅಳಿಯನನ್ನು ನೋಡಲಾಗದೆ ಜಾನಕಮ್ಮನು ಯಾರನ್ನೂ ನೋಡುವ ಗೊಡವೆಗೇ ಹೋಗಲಿಲ್ಲ. ನೆರೆದ ನೆರೆಹೊರೆಯ ಹೆಂಗಸರಲ್ಲಿ ಎರಡು ಪಕ್ಷಗಳು.

"ಮುತ್ತಿನಂಥ ಮಗಳನ್ನು ದುಮ್ಮಾನಕ್ಕೀಡು ಮಾಡಿದರಮ್ಮಾ!" ಎನ್ನುವವರು ಕೆಲವರು.

"ಹೌದಮ್ಮ! ಹುಡುಗಿಯ ಬುದ್ಧಿ ಕೂಡ ಬಹಳ ಚುರುಕು. ಇದೇ ವರ್ಷ ನಮ್ಮ ಶಾಲೆಯಿಂದಲೇ ಸ್ಪೆಶಲ್ ಪಾಸು ಮಾಡಿದಳು. ಇನ್ನೂ ಕೆಲವೊಂದು ದಿವಸ ಓದಿಸಿದ್ದರೆ ಲೇಸಾಗಿತ್ತು," ಎಂದು ಕನ್ಯಾಶಾಲೆಯ ಮಾಸ್ತರತಿಯು ನುಡಿದಳು.

"ಅದೇನು ಬಿಡಿರೇ! ಭಾಗ್ಯವಿದ್ದರೆ ಅವಳೇ ನಾಲ್ಕು ಮಕ್ಕಳ ತಾಯಿಯಾಗುವಳು," ಎಂದೂ ಹಲವರು ಹೇಳಿದರು.

ತಮಗೆ ಏನೆನಿಸಿದರೂ ಸುಶೀಲೆಯ ಓರಿಗೆಯ ಹುಡುಗಿಯರು ಏನೇನೋ ನುಡಿದು ಗೆಳತಿಯನ್ನು ನಗಿಸಿದರು

ವಯಸ್ಸಿಗೆ ತಕ್ಕಂತೆ ಅವಳ ಅಧರದಲ್ಲಿ ನಗೆಯುಮನೆ ಮಾಡಿತ್ತಾದರೂ ಪಕ್ಕದಲ್ಲಿನ ಮಾಧೂರಾಯನನ್ನು ನೆನೆದು ನಗೆ ಊರಿದ ತುಟಿಯಲ್ಲೆ ಒಳಗಿಂದ ಹೊಗೆ ಹಾಯುತ್ತಿತ್ತು.

ಇಂಥ ಎಷ್ಟೋ ನವಯುವತಿಯರೊಂದಿಗೆ ಚಕ್ಕಂದ ಆಡಿದ ಮಾಧೂರಾಯನಿಗೆ ಸುಶೀಲೆಯನ್ನು ಕಂಡು ಅಷ್ಟು ಹರುಷವಿದ್ದಿಲ್ಲವಾದರೂ "ಅಂತೂ ಮದುವೆಯ ಸಂಭ್ರಮ ಉಂಟು," ಎಂದು ಹಿಗ್ಗಿದನಷ್ಟೆ. ಮಾತ್ರ ನಕ್ಕೇನೆಂದರೂ ಉಸಿರು ಸಾಲದೆ ಅವನು ಮುಗ್ಧನಾಗಿಯೇ ಕಂಡನು.

"ನೀ ಹೇಳು—ನೀನು ಹೇಳು" ಎಂದು ಹಾಡಿದ ಹೆಂಗಸರು ದಣಿದರು. ಮದುಮಗಳು ಹೂವಿನ ಹಾರ ಹಿಡಿದು ಎದ್ದು ನಿಂತಳು.

"ಒಗಟವಿಲ್ಲದೆ ಹಾರ ಹಾಕುವಿಯೇನು?" ಎಂದು ಹೆಂಗಸರು ಗಲಾಟೆಯೆಬ್ಬಿಸಿದರು. ಬಾಗಿಕುಳಿತ ವರನ ಡೂಗು ತಾನೇ ಎದ್ದು ಕಂಡು ಹಾರ ಹೇಗೆ ಹಾಕಬೇಕೆಂಬ ಒಗಟವೂ ವಧುವಿಗಿದ್ದಿತು.

ಹಾರವು ಹೇಗೋ ಅವನ ಕೊರಳು ಕಂಡಿತು.

ಗಂಧವನ್ನು ಸೂಸಲೆಂದು ಅವನ ತೋಳು ತಟ್ಟಿದಾಗ ಸುಶೀಲೆಗೆ ಸಹಸ್ರಾರು ವೇದನೆಗಳು. "ವಿಧಿ" ಎಂದು ಉರುಟಣೆಯ ವಿಧಿಯನ್ನು ಮುಗಿಸಿದಳು; ಪಡಸಾಲೆಯು ಬರಿದಾಯಿತು. ಎಷ್ಟಾದರೂ ಲಗ್ನದ ಮನೆ. ಬಿಜಲಿಯ ಬತ್ತಿಗಳು ಉರಿಯುತ್ತಿದ್ದವು; ಅಪ್ಪಾರಾಯರು ಕೆಳಗಿನ ಅಂಗಳದಲ್ಲಿನ ಅಡಿಗೆ ಎಲ್ಲಿಗೆ ಸಾಗಿದೆ ಎಂದು ನೋಡಿದರು.

"ಓಹೋ! ಇದಿಷ್ಟು ಹಪ್ಪಳ ಸುಟ್ಟರೆ ತೀರಿತು" ಎಂದು ದೊಡ್ಡದೊಂದು ಕಬ್ಬಿಣದ ಸವುಟನ್ನು ಅನ್ನದ ಹಂಡೆಯಲ್ಲಿ ಆಡಿಸುತ್ತ ಅಡಿಗೆಯ ಗುಂಡಪ್ಪನು ನುಡಿದನು.

ಒಂದೇ ಠಾವಿನಲ್ಲಿ ಬಹಳ ಹೊತ್ತು ಕುಳಿತು ದಣಿದ ಮಾಧೂರಾಯನು ಹಾಸಿಗೆ ಬಯಸಿದನು.

ತಾಯಿಯ ಜೊತೆಯಿಲ್ಲದೆ ಹೊಸ ಮನೆಯಲ್ಲಿ ದಿಕ್ಕು ತಪ್ಪಿದವಳಾದ ಸುಶೀಲೆಯು ಕೋಣೆಯ ಜಂತೆಗೆ ದಿಟ್ಟಿಯನ್ನು ನೆಟ್ಟಳು.

---

೪

## ಮಿಂದೂಟ

ಸುಶೀಲೆ ಇಂದು ತವರುಮನೆಯಲ್ಲಿ; ಅವಳು ಕುಳಿತಲ್ಲಿನ ಗೋಡೆಗೆ ಕುಂಕುಮದ ಕೈ ಚಟ್ಟುಗಳು; ಅವಳ ಮೊಗದಲ್ಲಿ ಅರಿಸಿನದ ಕಾಂತಿ; ಇದಕ್ಕೆ ತಕ್ಕಂತೆ ಒಳಗೆ ಶಾಂತಿಯಿದ್ದಲ್ಲವೆಂದೋ ಬಣ್ಣ ಬಡಿದು ಕೂಡಿಸಿದ ಕಿಟ್ಟದ ಗೊಂಬೆಯಂತೆ ಕಂಡಳು. ನೆರೆತ ಯುವತಿಯ ಮನೆಯೆಂದರೆ ಅದೊಂದು 'ಹೌಸಿ'ನ ಬೀಡು ಕಾಣಬೇಕು; ಆದರೆ ಇಲ್ಲಿ ಮನೆಯವಳೆ ಆದ ಜಾನಕಮ್ಮನು ತನ್ನ ಮನೆಯಿಂದ ಬೀಗರಲ್ಲಿಗೆ, ಅಲ್ಲಿಂದ ಇಲ್ಲಿಗೆ ಓಡಾಡಿ ದಣಿದಿರುವಳು. ಮಧ್ಯಮಧ್ಯದಲ್ಲಿ ಅವಳ ಗೆಳತಿಯರು ಸುಳಿಯುತ್ತಿದ್ದರಾದರೂ ಬಳಕೆಯ ಯಾವ ಮಾತೂ ವಿಶೇಷವಾಗಿ ನಡೆಯಲಿಲ್ಲ. ಆಚಾರ್ಯರಂತೂ ನಿನ್ನೆನಿಂದ ಮನೆಯಲ್ಲೇ ಇಲ್ಲ. ಅವಳಣ್ಣ ಸುಬ್ಬು ಡಾಕ್ಟರನಿಂದ ವೈದ್ಯನಲ್ಲಿಗೆ, ವೈದ್ಯ

ನಿಂದ ಹಕೀಂನಲ್ಲಿಗೆ ಎಡತಾಕುವುದರಲ್ಲಿ ತೊಡಗಿದ್ದನು. ಮೂರನೆ ದಿನ ತಾನೇ ಮಿಂದೂಟವೆಂದು ಜಾನಕಮ್ಮನೇ "ಹೀಗೆ ಕೈ ಬಿಟ್ಟು ಕೂತರೆ ಹೇಗೆ?" ಎಂದುಕೊಂಡಳು; ದೇವರೇನು ಇಷ್ಟು ನಿಷ್ಠುರನೇ! ಪಾಂಡುರಂಗಾ! ಹೇಗಾದರೂ ಮಾಡಿ ನನ್ನ ಮಗಳನ್ನು ನಾಲ್ಕು ಮಕ್ಕಳ ತಾಯಿಯನ್ನಾಗಿ ಮಾಡಪ್ಪಾ!" ಎಂದೂ ಸಮಾಧಾನ ಮಾಡಿಕೊಂಡಳು. ಮುನ್ನ ದಿವಸ ಗೋಸಿಗೆ ತಂದ ಓಣಿಕೇರಿಯ ಹೆಂಗಸರಿಗೆ ಔತಣ ಕೊಡಲೆಂದು ಹೊರಬಿದ್ದಳು.

ಇಂದು ಸುಶೀಲೆಗೆ ನೀರೆರೆಯುವ ಬೆಳಗು; ಬಳಗದ ನಾಲ್ಕಾರು ಮುತ್ತೈದೆಯರು ಬಂದಿರುವರು. ಹೂಗಾರ ಬಸ್ಸಣ್ಣನು ಸನಾಯಿ ನುಡಿಸುತ್ತಿದ್ದಾನೆ. ಒಳಗಿನಿಂದ ಹೊರಕ್ಕೆ ಹೊರಗಿನಿಂದ ಒಳಕ್ಕೆ ಜಾನಕಮ್ಮನ ಓಡಾಟವಿದ್ದರೂ ಯಾವಾಗ ಏನು ಸುದ್ದಿ ಬರುವುದೋ ಎಂದೂ ಕಾತುರಳು. ಅವಳು ಬಹಳ ಯಥಾರ್ಥ ಸ್ವಭಾವದಳು; ಎಲ್ಲವನ್ನೂ ಮರೆಯಲೆಣಿಸಿ, 'ಇದು ಬಿಸಿನೀರಿನ ಕೊಡ, ಇದು ತಣ್ಣೀರಿನ ಗಂಗಾಳ" ಎಂದು ಅವನ್ನು ಹೊತ್ತು ತಟ್ಟೆಯಲ್ಲಿಟ್ಟಳು.

ನೆರೆಹೊರೆಯವರು ಇದನ್ನು ಕಂಡು ಏನೂ ನುಡಿಯಲಾಗದೆ "ಅಯ್ಯೋ! ಹುಚ್ಚೀ!" ಎಂತಲೂ ತಮ್ಮ ತಮ್ಮ ಮುಟ್ಟಿಗೇ ಕಳವಳಗೊಂಡರು.

"ಹೂ! ತೆಪ್ಪಗೇನು ಕುಳಿತಿರುವೆ! ಏಳು, ಸುಶೀಲಾ! ಸುಶೀಲಮ್ಮಾ! ಏಳಮ್ಮಾ! ಎಂದು ಅದೆಷ್ಟು ಉಲ್ಲಾಸ ಮಾಡಿಕೊಂಡು ನುಡಿಯಲೆತ್ನಿಸಿದರೂ ತಾಯಿಯ ಕಂಠವು ಬಿಗಿದು ಬಂತು; ಉಮ್ಮಳದ ಭರದಲ್ಲಿ ಏನು ಮಾಡಿದ ಳೆಂಬ ಅರಿವೂ ಇಲ್ಲದೆ ಮಗಳನ್ನು ಮುಟ್ಟಿಯೇ ಬಿಟ್ಟಳು; ಅಪ್ಪಿ ಅವಚಿ ಕೊಂಡಳು. "ನೆರೆತ ಮಗಳ ಬೆಡಗು ಕಂಡೇನೆಂದರೆ ಇದೆಂಥ ದುಗುಡವಮ್ಮಾ!" ಎಂದು ಮಗಳನ್ನು ಕಣ್ಣೀರಿಂದಲೇ ಎರೆದಳು. ಹೊರಗಿಂದ ಸುಬ್ಬು ಆಗ ತಾನೇ ಒಳನುಗ್ಗಿದನು; ತಂಗಿಯನ್ನು ಬಿಗಿದಪ್ಪಿ ಹಾಹಾಕಾರವನ್ನೆಬ್ಬಿಸಿದನು. ನಿಮಿಷೊಂದರಲ್ಲಿ ಅಲ್ಲಿಗೆ ಬಂದವರೆಷ್ಟೊ! ಹೋದವರೆಷ್ಟೊ! ಎಲ್ಲರೂ ತಮ್ಮ ತಮ್ಮ ರೀತಿಯಲ್ಲಿ 'ಹಾಯ್ ಹಾಯ್' ಎಂದರು.

## ೫

## ಮುಡಿವಂತಿ

ಜನಜೀವನಕ್ಕೆ ಈ ಬೆಳಗು, ಈ ಸಂಜೆ, ಇವು ಯಾವುವೂ ಹೊಸವಲ್ಲ; ಕೈಗೆ ಬಂದ ಮಗನು ಕೈಬಿಟ್ಟನೆಂದು ಮನೆ ಬೀಳುವಂತೆ ಕೂಗಿದ ಅಪ್ಪಾರಾಯರು ಈಗ ಕೋರ್ಟು ಕಛೇರಿಗಳಲ್ಲಿ ದೊಡ್ಡ ಮೊಖದ್ದಮೆಗಳನ್ನು ಗೆಲ್ಲುವುದಕ್ಕೆ ಹೆಣಗುತ್ತಿದ್ದಾರೆ. 'ಕ್ರಿಮಿನಲ್ ಕೋಡಿ'ನ ಪುಟಗಳನ್ನು ಸರಭರನೆ ತಿರುವಿ ವಾದತಾಂಡವದಲ್ಲಿ ಮಗ್ನರಾದರು. ಅಂದು ಮೂರು ಬೆರಳಿನ ಅಂತರದಲ್ಲಿದ್ದ ಮುಗಿಲು ಕಡಿದು ಬಿದ್ದಿತೆಂದು ಕಂದಿಕುಂದಿದ್ದ ಸ್ವಾಮಿರಾಯಾಚಾರ್ಯರು ಮತ್ತು ಕಾಲ್ಗೆಜ್ಜೆಯ ನಾದಕ್ಕೆ ಮನದಣಿ ಕುಣಿದರು.

ಜರುಗಿದ ಘಟನೆಗೆ ಸಂಬಂಧವಿದ್ದವರೇ ಹೀಗಿದ್ದಾಗ ಊರವರಿಗೂ ಅದರ ಮರೆವುಂಟಾದರೆ ಸೋಜಿಗವೇನು?

ರವಿಪುರವು ಬ್ರಾಹ್ಮಣಿಕೆಯ ಊರು. ವರ್ಷದ ಹನ್ನೆರಡು ತಿಂಗಳಲ್ಲಿಯೂ ಒಂದೊಂದು ಧಾರ್ಮಿಕ ಕಾರ್ಯಗಳು. ಈ ತಿಂಗಳಲ್ಲಿ ವೆಂಕಟರಮಣ ಗುಡಿಯಲ್ಲಿ ತೇರು. ನಮ್ಮ ಸ್ವಾಮಿರಾಯಾಚಾರ್ಯರಿಗೆ ಇಂಥ ಯಾವ ಪ್ರಸಂಗದಲ್ಲಿಯೂ ಪ್ರತಿಷ್ಠೆಯ ಸ್ಥಾನ. ಭಜನೆಗೆ ಇವರೇ ಮುಂದು ಊಟ ನಡೆದಾಗ ಬಡಿಸಲಿಕ್ಕೂ ಇವರೇ ಮುಂದು; ಒಟ್ಟಿಗೆ ಬ್ರಾಹ್ಮಣ ಕೂಟವಿರುವಲ್ಲಿ ಇವರ ಓಡಾಟವೇ ಓಡಾಟ. ಅಂತೂ ಯಾವ ವಿಧವಾಗಿಯೋ ಹೋರಾಡಿ ತಮ್ಮ ಸಂಸಾರವನ್ನು ಸಾಗಿಸಿದ್ದರು.

ಹೋರಾಟದ ಬಾಳು ಇರುವಲ್ಲಿ ಪ್ರತಿಸ್ಪರ್ಧಿಗಳು ಇಲ್ಲವೆಂದರೆ ಹೇಗೆ? ಇವರಂತೆ ಭಿಕ್ಷುಕ ಜೀವಿಯಾದ ಭೂಶಾಳದಾಸರಲ್ಲಿ ಕಲಿ ಪ್ರವೇಶವಾಯಿತು.

ನಾಳೆ ತಾನೆ ವೆಂಕಟರಮಣ ಗುಡಿಯಲ್ಲಿ ನೂರಾರು ಜನರಿಗೆ ಭೋಜನ: ಗುಡಿಯ ಪೂಜಾರಿ ಈ ಭೂಶಾಳದಾಸನ ಭಾವ.

“ನೀನೇನೇ ಹೇಳು ಭಾವ! ತುಂಬಾ ಹೊಲೆತನಕ್ಕಿಟ್ಟದೆ ಅವನ ಸಂಸಾರ; ಮಗಳ ಮುದ್ದಾದರೆ ಪೈಲಿಗೆ ಮುದ್ದೆ?” ಎಂದು ಅವನು ನುಡಿಯುತ್ತಿರುವಾಗಲೇ ಮುಖಂಡ ಬ್ರಾಹ್ಮಣರ ಗುಂಪು ಮರುದಿವಸ ಕಾರ್ಯಕ್ಕೆ ಸಹಾ

ಯಾರ್ಥ ಬಂತು. ಅವರೊಂದು ಇವರೊಂದು ಆಡಿದ ಮಾತು ಬೆಳೆದು ಕೊನೆಗೆ ನಿರ್ಧಾರವೂ ಆಯಿತು.

ಅಂದು ಊರಲ್ಲಿ ಯಾರ ಮನೆಯಲ್ಲಿಯೂ ಒಲೆ ಹೊತ್ತಿದ್ದಿಲ್ಲವಾದರೂ ಸ್ವಾಮಿರಾಯಾಚಾರ್ಯರ ಮನೆಯಲ್ಲಿ ಕುಳ್ಳಿತಾಳಿಯಲ್ಲಿ ಅನ್ನವು ಕುದಿಯುತ್ತಿತ್ತು.

ಹೊತ್ತಿದ ಕುಳ್ಳು ಬೆಂಕಿಯು ಹೊಗೆಯೋ ಮನೆಯವರು ಬಿಟ್ಟ ಬಿಸಿಯುಸಿರೋ ಹೊರಗಿನವರಿಗೆ ತಿಳಿಯುವಂತಿಲ್ಲ.

ಸ್ವಾಮಿರಾಯಾಚಾರ್ಯರು ದೇವರ ಜಗುಲಿಯಲ್ಲಿ ಗಣಗಣ ಗಂಟೆ ಬಾರಿಸಿದರು.

"ಸುಬ್ಬು! ನಿನ್ನ ಗತಿಯೇನಪ್ಪಾ! ಮುಪ್ಪಿನಲ್ಲಿ ಬೇಗ ಸೊಸೆಯನ್ನು ಕಾಣಬೇಕೆಂದು ಹಾರೈಕೆ; ಆದರೆ ಇಂಥ ಪರಿಸ್ಥಿತಿಯಲ್ಲಿ ಇದು ಬರಿ ನಿನ್ನ ಕನಸಿನ ಮಾತಲ್ಲವೆ? ಈ ಪ್ರಪಂಚದಲ್ಲಿ ಬಡವರ ಬಾಳಿಗೆ ಎಲ್ಲಿಯೂ ಎಡೆಯಿಲ್ಲ. ಮಗೂ!" ಎಂದು ಜಾನಕಮ್ಮ ಮರುಗಿದಳು.

ಸುಬ್ಬು ಏನೂ ನುಡಿಯಲಿಲ್ಲವಾದರೂ ತಾಯಿಯ ಮಾತಿಗೆ ಒಳಗೊಳಗೆ ನೊಂದನು. ಈಗ ಇವನು ಕೂಡ ಅಷ್ಟು ಸಣ್ಣವನಲ್ಲ. ಹದಿಮೂರು ವರ್ಷದ ತನ್ನ ತಂಗಿಗಿಂತ ನಾಲ್ಕು ವರ್ಷ ಹಿರಿಯವನು. ರವಿಪುರದ ಪ್ರೌಢಶಾಲೆ (ಹೈಸ್ಕೂಲ್) ಯಲ್ಲಿ ಇವನೇ ಎಲ್ಲಾ ಶಿಕ್ಷಕರಿಗೆ ಪ್ರಿಯನಾದ ವಿದ್ಯಾರ್ಥಿ. ಈ ವರ್ಷ ಇಷ್ಟು ಮಗನು ಮ್ಯಾಟ್ರಿಕ್ ಪಾಸು ಮಾಡಿದರೆ, ಮುಪ್ಪಿನಲ್ಲಿ ಅನ್ನಒಟ್ಟಿಗೇನು ತಾಪತ್ರಯವಿಲ್ಲ ಎಂದ ತಂದೆತಾಯ್ಗಳ ನೆಮ್ಮದಿಗೂ ಕಾರಣನಾಗಿದ್ದನು.

"ಆದೇಕೆ ಅವ್ವಾ! ನಮ್ಮಷ್ಟೇ ಬಡವರಾಗಿರುವ ಶಾಬಾದಿ ಶಾಮಾಚಾರ್ಯರ ಮಗಳು ಚಂದಿರೆ ಗೊತ್ತಾಗಿದ್ದಾಳೆ ಎಂದು ನಿನ್ನೆ ಹೇಳಿದೆಯಲ್ಲಾ?" ಎಂದು ಸುಶೀಲೆಯು ಕುತೂಹಲದಿಂದ ನುಡಿದಳು.

"ಈ ಮಾತಿನಲ್ಲಿ ನೀನು ಬರಬಾರದವ್ವಾ! ಅದು ನಿನಗೆ ತಿಳಿಯದು! ಎಂದು ತಿಳಿದೋ ತಿಳಿಯದಲೋ ಜಾನಕಮ್ಮನೆಂದಳು.

ಸುಶೀಲೆಯು ಹೊಗೆ ಒಡೆದ ಕಣ್ಣುಗಳನ್ನು ಉಜ್ಜಿಕೊಂಡಳು..

ನುಡಿಯಲಿಕ್ಕೇನೋ ನುಡಿದ ಜಾನಕಮ್ಮನ ಹೊಟ್ಟೆಯಲ್ಲಿ ಕೈಯಿಟ್ಟು ಕಲಿಸಿದಂತಾಯಿತು. ಉತ್ತರ ಕೊಡದಿದ್ದರೆ ಮಗಳು ಇನ್ನಿಷ್ಟು ನೊಂದಾಳು ಎಂಬ ಭ್ರಾಂತಿಯಲ್ಲಿ "ಅಲ್ಲ, ಹುಚ್ಚೀ! ಊರಲ್ಲಿ ಇಂದು ಎಲ್ಲರಿಗೂ ಸುಗ್ರಾಸದ ಊಟವಿರುವಾಗ ಇಂತು ಕುಚ್ಚಿಕೊಳ್ಳುವ ನಮಗೆ ಹೆಣ್ಣು ಯಾರು ಕೊಡುವರು," ಎಂದು ಮತ್ತೆ ಅನರ್ಥವಾಗುವಂತೆ ನುಡಿದಳು.

"ಹೌದವ್ವಾ! ನಿಮ್ಮ ಊಟದಲ್ಲಿ ನನ್ನ ಕೂದಲಿನೆಳೆ ಬರುವುದಲ್ಲವೆ? ಅದಕ್ಕೇಕೆ ತಡ! ನಾಳೇ ಆಗಿಹೋಗಲಿ" ಎಂದಳು ಸುಶೀಲೆ.

ದೇವರು ಮನೆಯಲ್ಲಿ ಸುಂಯಿ ಎಂದು ಸಪ್ಪಳವಾಯಿತು.

ತಟ್ಟೆಯಲ್ಲಿ ನೀರು ಬಿದ್ದು ಧೂಪಾರತಿ ಆರಿದಾಗಿನ ಸಪ್ಪಳವಿರಬಹುದು.

ಮರುದಿವಸದ ಮುಂಜಾವು; ತಾಯಿಯ ತೊಯ್ದ ಕುಪ್ಪಸದಲ್ಲಿ ಮುಖ ಹುದುಗಿಸಿದ ಸುಶೀಲೆ; ಮನೆಯಲ್ಲಿ ಕಾಲುಸಿಲ್ಲದೆ ಸುಬ್ಬು ಹೊರಗಿನ ಕಟ್ಟೆಯಲ್ಲಿ; ಸ್ವಾಮಿರಾಯಾಚಾರ್ಯರು ಒರಳು ಬೀಸುಕಲ್ಲಿನ ನಡುವಿನಲ್ಲಿ. ಓಣಿಕೇರಿಯ ನಾಲ್ಕಾರು ಮುಡಿಯಮ್ಮನವರ ಗುಂಪು ಅವರ ಮನೆಯಲ್ಲಿ.

ಆಗಿನ ಆ ತಾಯಿಮಗಳ ಅಪ್ಪಿಗೆ ಬಿಡಿಸುವ ಶಕ್ತಿ ಯಾರಿಗೆ?

ಆದರೂ ಊರೆಂದ ಮೇಲೆ ಅಲ್ಲಿ ಎಲ್ಲ ತರದ ಜನರು. ಇಂಥ ಬಿಕ್ಕಟ್ಟಿನ ಪ್ರಸಂಗಕ್ಕೆ ಸೀನಾಚಾರಿಯು ಹೆಸರಾದವನು. ಗಬ್ರು ಬಂದವನೆ ತನ್ನ ಕಠೋರ ಕರ್ತವ್ಯವನ್ನು ಯಾವ ಸಂಕೋಚವಿಲ್ಲದೆ ಮಾಡಿದನು. ಒಡನೆ ಜಾನಕಮ್ಮನು ತೆರವಾದ ತೋಳುಗಳನ್ನು ಧೊಪ್ಪೆಂದು ನೆಲಕ್ಕಪ್ಪಳಿಸಿ ಮೂರ್ಛೆ ಹೋದಳು. ತಾಯಿಯ ಉಪಚಾರಕ್ಕೆ ಸುಬ್ಬು ಹಾರಿಬಂದನು. ತನ್ನ ಹೃದಯದಲ್ಲಿ ರಕ್ತದ ತೊಟ್ಟು ಸುರಿದರೂ ಕಂಬನಿಗೆ ಕೂಡ ಎಡೆಕೊಡದೆ ತಾಯಿಯನ್ನು ಸಮಾಧಾನಪಡಿಸಲು ಅದೆಷ್ಟು ಯತ್ನಮಾಡಿದರೂ ವ್ಯರ್ಥವಾಯಿತು; ಕೊನೆಗೆ ತಡೆದಿದ್ದ ಅವನ ದುಃಖಕ್ಕೂ ಎಡೆ ಸಿಕ್ಕಿತು.

"ಛೀ ಹುಚ್ಚಾ! ಮುದಿಕಿ ಇನ್ನಿಷ್ಟು ಎದೆಯೊಡೆಯುವಳು" ಎಂದು ನೆರೆದವರು ಬಾಯಿಮಾಡಿ ಅವನನ್ನು ಅಲ್ಲಿಂದ ಎಬ್ಬಿಸಿದರು. ಹತಾಶನಾಗಿ ಬಂದು ಮತ್ತೂ ಕಟ್ಟೆಯ ಮೇಲೆ ಕುಳಿತನಷ್ಟೆ, ಆದರೆ ಆಗ ಅವನು ಅಳಲಿಲ್ಲ.

ಮನೆಯಲ್ಲಿನ ಬಡತನವನ್ನೂ ಊರಲ್ಲಿನ ರೂಢಿರಾಕ್ಷಸನನ್ನೂ ಕುರಿತು ದಿಙ್ಮೂಢನಾದನು. ತಾನು ಇಂಥ ಊರಿನಲ್ಲಿರುವುದಕ್ಕಿಂತಲೂ ಎತ್ತಲೋ ಹೋಗಬೇಕೆಂದು ನಿರ್ಧಾರ ಮಾಡಿಕೊಂಡನು.

ಬೀದಿಯಲ್ಲಿ ಜನರ ಅಲೆದಾಟಕ್ಕೆ ಮೊದಲೆ ಕತ್ತಲೆ ಕೋಣೆಯನ್ನು ಕಂಡಿದ್ದ ಸುಶೀಲೆ ಈಗ ಮಡಿಸಂತೆ.

---

೬

## ಸುಬ್ಬು ಎಲ್ಲಿ?

ಅಪರಾಹ್ಣದ ಕಾಲವಾದರೂ ಮಗನು ಎಲ್ಲಿ ಎಂದು ಸ್ವಾಮಿರಾಚಾರ್ಯರು ಹೆಂಡತಿಯನ್ನು ಕೇಳಿದರು. ಅದು ಕೇಳಿಸಲಿಲ್ಲವೆಂದೋ ಕಣ್ಣೀರು ಸುರಿಸಿ ಅನ್ನ ಕುದಿಸುತ್ತಿದ್ದ ಜಾನಕಮ್ಮನಿಂದ ಉತ್ತರವು ಸಿಗಲಿಲ್ಲ. ಆಚಾರ್ಯರೇ ಮಾಳಿಗೆಯನ್ನು ಹತ್ತಿದರು; ಕೆಳಗಿಳಿದರು; ಹಿತ್ತಲಲ್ಲಿ ನೋಡಿದರು; ಬೀದಿಗೆ ಬಂದರು; ಒಳಗೆ ಹೋದರು. "ಎಲೇ; ಸುಬ್ಬು ಎಲ್ಲಿ?" ಎಂದು ಗಟ್ಟಿಯಾಗಿ ಕೇಳಿದರು. ಕಕ್ಕಾಬಿಕ್ಕಿಯಾದ ಜಾನಕಮ್ಮನು "ಅಲ್ಲೇ ಹೊರಗೆ ಇರಬೇಕು" ಎಂದಳು.

"ಇಲ್ಲ ಕಣೇ! ಎಲ್ಲಿಯೂ ಇಲ್ಲ" ಎಂದು ಆಚಾರ್ಯರು ತಡವರಿಸುತ್ತ ನುಡಿದರು. ಇದೀಗ ಜಾನಕಮ್ಮನೂ ಗಾಬರಿಯಾದಳು.

ಒಳಗಿಂದ ಸುಶೀಲೆಯೂ ಇಣಿಕಿ ನೋಡಿ "ಸುಬ್ಬು ಇಲ್ಲವೇ?" ಎಂದು ಕೇಳಿದಾಗ ಅವಳ ಕಂಠವು ಬಿಗಿದಿತು.

ಆಚಾರ್ಯರು ನೀರುಪಂಜೆಯನ್ನು ತಲೆಯ ಮೇಲೆ ಹಾಕಿದವರೆ ಹೊರಗಾದರು, ಊರೊಂದು ಮಾಡಿ ಹುಡುಕಿದರು ಒಲೆಯ ಮೇಲಿಟ್ಟ ಅನ್ನವು ಹೊತ್ತಿ ಕರಕಾದ ಅರಿವೂ ಇಲ್ಲದೆ ಜಾನಕಮ್ಮನು ಪಡಸಾಲೆಯಲ್ಲಿ ನೆಲಕ್ಕೆ ಬಿದ್ದಿದ್ದಳು.

ಕೊನೆಗೆ ತತ್ರಧಾರವಾಗಿ ಅಶ್ರುಗಳನ್ನು ಸುರಿಸುತ್ತ ಮನೆಯ
ಕಾಲಿಟ್ಟರು.

ಇತ್ತ ಸುಬ್ಬು ಸಂತಾಪಭರದಲ್ಲಿ ಒಂಟೀ ಕಾಲಿಟ್ಟು ನಡೆದನು. ಕಾಲಿ
ನೆಟ್ಟ ಮುಳ್ಳೆಷ್ಟೋ ತಾಕಿದ ಚಿಪ್ಪು ಕಲ್ಲೆಷ್ಟೋ ಯಾವುದನ್ನೂ ಲಕ್ಷಿಸ
ಭರಭರ ನಡೆದನು. ಹೊತ್ತು ಮುಳುಗಿ ಕತ್ತಲಾದರೂ ನಡೆಯುತ್ತಲೆ
ಇದ್ದನು. ಕಾಲಿಗೆ ರೈಲಿನ ಹಾಳಿ ಹತ್ತಿತು. "ಓ, ಇನ್ನು ಸ್ಟೇಶನ್ ಕಾಣಲೆ
ಬೇಕು" ಎಂದು ಮತ್ತಷ್ಟು ಹುರುಪಿನಿಂದ ಸಾಗಿದನು. ರೈಲು ಬರಲಿತ್ತೆಂದ
ಹಚ್ಚಹಸಿರು ಬೆಳಕಿನಲ್ಲಿ ಸಿಗ್ನಲಿನ ಕೈ ಕಂಡಿತು. "ಸಿಕ್ಕಿತಲೆ ಹಾದಿ
ಎಂದು ಸ್ಟೇಶನ್ನಿನಲ್ಲಿ ಒಂದೇ ಬಿಟ್ಟನು, ಒಂದು ಹೊತ್ತು ನೋಡಿದನ
"ಅಬ್ಬಾ ೧೧॥ ಗಂಟೆ: ಇಷ್ಟು ಹೊತ್ತು ಹೇಗೆ ನಡೆದೆ!" ಇದೀಗ ಅವ
ಕಾಲಲ್ಲಿ ಕಷ್ಪೆ ಕುಣಿದುವು; ಅಂಗಾಲು ಭಗಭಗ ಎಂದುವು. ಹೇಗೋ
ಕೊಳಾಯಿಗೆ ಒಂದು ನೀರು ಕುಡಿದನು ಅಲ್ಲೇ ಇದ್ದ ಅರಳಿಮರದಡಿಯ
ಉರುಳಿದನು. ಗುರುಗುರು ಎಂಬ ಸದ್ದಿಗೆ ಅಲ್ಲಿ ಅಲೆದಾಡಿದವರೆಲ್ಲರೂ ಅತ್ತ
ನೋಡಿದವರೇ!

ಮುಂಜಾನೆ ಮೂರು ತಾಸು ಹೊತ್ತೇರಿದರೂ ಸುಬ್ಬು ಮಲಗಿ
ಮಗ್ಗುಲ ಕೂಡ ಬದಲಾಯಿಸಿದ್ದಿಲ್ಲ.

ಇದೇ ಸ್ಟೇಶನದ ಹಿಂದಿನಲ್ಲೆ ವೆಸ್ಲಿ ಮಿಶನಿನವರ ಸಂಸ್ಥೆಯಿದೆ. ಅ
ಮಿಶನರಿ ಜನರು ಶಿಕ್ಷಣ ಶಾಖೆಯನ್ನೂ ನಡೆಸಿರುವರು. ಇದರ ಮುಖ
ಅಧ್ಯಾಪಕಿಯು ಇಲ್ಲಿ ಬಹುಕಾಲದಿಂದ ಇರುವವಳು. ಇವಳು ಮಧ್ಯವ
ವಯಸ್ಸಿನವಳಾದರೂ ಮೊನ್ನೆಮೊನ್ನಿನ ತನಕ ಅವಿವಾಹಿತಳಾಗಿ ಇದ್ದಳು
ಮೊನ್ನೆ ಮುಂಬಯಿಗೆ ಹೋದಾಗ ತಾನೇ ಮಿಸ್ಟರ ಥಾಮ್ಸರವರ ಪತ್ನಿ
ಯಾದಳು. ಈ ಥಾಮ್ಸರವರೋ? ಇವರ ಹುಟ್ಟು ಇಂಗ್ಲೆಂಡಿನಲ್ಲಿ; ಆದ
ಈಗ ಇವರ ಚರಿತಾರ್ಥ ಜರ್ಮನಿಯಲ್ಲಿ; ಅಲ್ಲಿ ಒಂದು ಕಾಗದದ ಗಿರಣಿ
ಒಡೆಯರು ಇವರು. ಜಗತ್ತಿನ ಮಾರ್ಕೆಟಿನ ಅಭ್ಯಾಸ ಮಾಡಬೇಕೆಂದ
ಹೊರಟದ್ದರೂ ಇವರು ಸಮತಾವಾದಿಗಳು. ನಮ್ಮ ದೇಶವನ್ನು ಸುತ್ತು
ಹಾಕಿ ಇವರು ಮುಂಬಯಿಯಲ್ಲಿದ್ದಾಗ ತಾನೇ ಚತುರ್ಭುಜರಾದರು
ಮಿಸೆಸ್ (ಸೌಭಾಗ್ಯವತಿ) ಥಾಮ್ಸರವರು ಇಲ್ಲಿನ ತಮ್ಮ ವ್ಯವಸಾಯ

ಛಾರ್ಜ ಒಪ್ಪಿಸಲು ಮಿಸ್ಟರ ಥಾಮ್ಸರೊಂದಿಗೇ ಬಂದು ಇಂದು ಮರಳಿ ಮುಂಬಯಿಗೆ ಹೊರಟಿರುವರು, ರೈಲಿಗೆ ಇನ್ನೂ ಹದಿನೈದು ನಿಮಿಷದ ಅವಕಾಶವೆಂದು ಪ್ಲಾಟ್‌ಫಾರ್ಮಿನಲ್ಲಿ ಇಬ್ಬರೂ ಅಲೆದಾಡುತ್ತಿದ್ದರಷ್ಟೆ.

ಅಲ್ಲೇ ಕೊಳಾಯಿಯಲ್ಲಿ ನೀರಾಡುತ್ತಿದ್ದ ಹುಡುಗರು ಮೈಮರೆತು ಮಲಗಿದ್ದ ಸುಬ್ಬುವಿನ ಮೇಲೆ ನೀರು ಚಲ್ಲಿದರು, ಆಗತಾನೇ ಈ ದಂಪತಿಗಳು ಇದನ್ನು ಕಂಡು, you naughty boys ('ತುಂಟ ಹುಡುಗರೇ') ಎಂದು ಬೆದರಿಸಿ ಹುಡುಗರನ್ನು ಓಡಿಸಿದರು ಉಗ್ಗಿದ ನೀರು ಕಿವಿಯಲ್ಲಿ ಹೋಗಿ ಸುಬ್ಬು ಚಡಪಡಿಸಿ ಎದ್ದನು, ಬಿಸಿಲಿಗೆ ಕುಕ್ಕಿದ ಕಂಗಳನ್ನು ಮುಚ್ಚಿ, ಕಾಲು ನೋವು ತಾಳದೆ 'ಅವ್ವಾ!' ಎಂದು ಕುಸಿದುಬಿದ್ದನು. ಒಡನೆ ಮಿಸೆಸ್ ಥಾಮ್ಸರವರು ಕನಿಕರದಿಂದ ಬಳಿ ಸಾರಿದರು. ಮಿಸ್ಟರ ಥಾಮ್ಸರೂ ಬಂದು ಕೈಹಿಡಿದು ಅವನನ್ನು ಎಬ್ಬಿಸಿದರು ಜ್ವರ ಬಂದುದರಿಂದ ಅವನ ಮೈ ಕೆಂಡವಾಗಿತ್ತು. ಎವೆ ತೆರೆದಿಕ್ಕಿದರೆ ಅವನ ಕಣ್ಣಿಂದ ನೀರು ಬರುತ್ತಿದ್ದುವು ಇಂಥ ಪರಿಸ್ಥಿತಿಯಲ್ಲಿಯೂ ಅವನ ಕಣ್ಣಿಗೆ ತಾಯಿ, ತಂದೆ, ತಂಗಿ ಇವರೇ ಕಟ್ಟಿದಂತಾಗಿ, ತಾನು ಎಲ್ಲಿ? ಎಂದು ಬೆರಗಾದನು; ಅಳಬಾರದೆಂದು ಬಹಳ ತಡೆದನು; ಅಳುವು ಬಂದೇಬಿಟ್ಟಿತು. 'ಸುಮ್ಮನಾಗು ಮಗು!' ಎಂದು ಮಿಸೆಸ್ ಥಾಮ್ಸರವರು ಅವನ ಬೆನ್ನಿನ ಮೇಲೆ ಕನಿಕರದಿಂದ ಕೈಯಾಡಿಸಿದರು. "ಮಗೂ! ನಮ್ಮೊಂದಿಗೆ ಬರುವೆಯಾ?" ಇಷ್ಟು ಹುಮ್ಮಸದಿಂದ ಬಂದವನು ಊರಿಗೆ ತಿರುಗಿ ಹೋಗುವುದು ಹೇಗೆ ಎಂದುಕೊಂಡನು.

ನೊಂದ ಜೀವಕ್ಕೆ ಈ ರೀತಿ ನಲುಮೆ ತೋರಿದ ಪತ್ನಿಯ ಹೃದಯ ಮಾಧುರ್ಯಕ್ಕೆ ಮಿಸ್ಟರ ಥಾಮ್ಸರು ಮೆಚ್ಚಿದರು. "Darling! you can have him," ("ನೀನು ಅವನನ್ನು ಕರೆದುಕೊಂಡು ಬರಬಹುದು") ಎಂದು ನುಡಿದರು. ರೈಲು ಪ್ಲಾಟ್‌ಫಾರ್ಮಿನಲ್ಲಿ ಬಂತು.

ಆ ಫಸ್ಟ್‌ಕ್ಲಾಸಿನ ಡಬ್ಬಿ, ಆ ಕರುಣಾಳು ದಂಪತಿಗಳು, ಆ ಮೇವಾ ಮಿಠಾಯಿ ಹಣ್ಣುಹಂಪಲಗಳ ತಿಂಡಿ, ಅವರೊಂದಿಗೆ ತಾನೂ ನುಡಿಯುತ್ತಿದ್ದ ತನ್ನ ಹರಕುಮುರುಕಿನ ಇಂಗ್ಲಿಷ್ ಭಾಷೆ, ಇವುಗಳಿಗೆ ಮೆಚ್ಚಿದ ಸುಬ್ಬುಗೆ ಸ್ವರ್ಗೀಯ ಆನಂದವೆನಿಸಿತು.

"ನಿನ್ನ ಹೆಸರೇನು ಮಗೂ!"

"ನನ್ನ ಹೆಸರು ಸುಬ್ಬು.

"ನಿನ್ನ ತಂದೆತಾಯ್ಗಳೆಲ್ಲಿ?"

"ರವಿಪುರದಲ್ಲಿ"

"ನಿಮ್ಮ ತಂದೆಯವರ ವ್ಯವಸಾಯವೇನು?

"ವೈದಿಕ ವೃತ್ತಿ, ಸರ್!"

"ತಂದೆತಾಯ್ಗಳನ್ನು ಏಕೆ ಬಿಟ್ಟು ಬಂದೆ? ಅವರು ನಿನ್ನನ್ನು ಹೊದರೊ? ಹೊರಗೆ ಹಾಕಿದರೊ?"

"ಇಲ್ಲ ಮದರ್! ಅವರು ಬೇರೆ ಅಲ್ಲ; ಆಕಳು ಬೇರೆ ಅಲ್ಲ. ಅವರಿಂ ನನಗೆ ಯಾವ ತೊಂದರೆಯೂ ಇಲ್ಲ. ಆದರೆ ನಮ್ಮೆಲ್ಲರನ್ನು ಹೊಡೆಯು ಬಡತನವು ನನ್ನನ್ನು ಹೊರಗೆ ನೂಕಿತು."

"ಈಗ ನೀನು ಯಾವ ಕ್ಲಾಸಿನಲ್ಲಿ?"

"ಉಸ್ಮಾನಿಯಾ ಮ್ಯಾಟ್ರಿಕ್‌ನಲ್ಲಿ, ಸರ್!"

"ಮುಂದಿನ ಸ್ಟೇಶನ್ನಿನಲ್ಲಿ ನಿನಗೆ ತಿಕೆಟು ಕೊಡಿಸುವೆವು; ಮರ ನೀನು ಊರಿಗೆ ತೆರಳುವೆಯಾ?"

ಈ ವರೆಗೆ ಉಲ್ಲಾಸದಿಂದ ಇದ್ದ ಸುಬ್ಬನ ಮುಖವು ಇಳಿಯಿತು.

"ತಮಗೆ ಇಷ್ಟವೆನಿಸಿದರೆ ನಾನೇ ಇಳಿಯುವೆನು. ತಮಗೆ ತಿಕೇ ಕೊಡಿಸುವ ಶ್ರಮವು ಬೇಡ; ಎಂದು ಅರಿಕೆ ಮಾಡಿಕೊಂಡರೆ ದಯವಿಟ ಕ್ಷಮಿಸಬೇಕು."

"ಮುಂದೆ ಊರಿಗೆ ಹೇಗೆ ಹೋಗುವೆ?"

"ಸರ್! ನಾನು ಊರಿಗೆ ಹೋಗುವುದೇ ಇಲ್ಲ."

"ನೀನು ಹೀಗೆ ಬಂದರೆ ನಿನ್ನ ತಂದೆತಾಯ್ಗಳಿಗೆ ದುಃಖವಾಗುವುದು.

"ಆಗುವುದು, ಮದರ್! ಆದರೆ ಇಂದಿಲ್ಲ ನಾಳೆಯಾದರೂ, ಮ್ಯಾಟ್ರಿ ಪಾಸು ಮಾಡಿದಮೇಲೆ ನಾನು ಊರು ಬಿಡಲೇಬೇಕಲ್ಲವೆ? ಕೆಲವು ಕಾ ಮಟ್ಟಿಗೆಂದು ನಾನು ಎಂದಾದರೂ ಒಂದು ದಿವಸ ಹೊರಬಿದ್ದು ವಿದ್ಯಾಭ್ಯಾ ವನ್ನು ಬೆಳೆಸಲೇಬೇಕಲ್ಲವೆ?"

"ನಾವು ಈಗ ಎಲ್ಲಿಗೆ ನಡೆದಿರುವೆವು ಗೊತ್ತೆ?"

"ಗೊತ್ತಿಲ್ಲ ಸರ್!"

“ಜರ್ಮನಿಗೆ.”

“ತಾವು ದಯವಿಟ್ಟು ಕರೆದುಕೊಂಡು ಹೋದರೆ ನಾನು ಅಲ್ಲಿಗೇ ಬರುವೆನು. ಜರ್ಮನಿಯಲ್ಲೇನು ನನ್ನಂತೆ ಹುಡುಗರಿಲ್ಲವೆ? ಶಾಲೆಗಳಲ್ಲಿ ಓದುತ್ತಿಲ್ಲವೆ?”

ಥಾಮ್ಸ ದಂಪತಿಗಳು ನಕ್ಕರು.

“ಅದೇಕೆ ನಗುವಿರಿ? ಹಿಂದುಸ್ಥಾನವೇನು? ಜರ್ಮನಿಯೇನು? ಇಂಗ್ಲಂಡೇನು? ಅಲ್ಲಿನವರು ಇಲ್ಲಿನವರಂತೆ, ಇಲ್ಲಿನವರು ಅಲ್ಲಿನವರಂತೆ. ಇಲ್ಲಿನವನಾದ ನಾನು ಅಲ್ಲಿಗೆ ಬಂದರೆ ಮುದುಕನೆನಿಸುವುದಿಲ್ಲ; ಅಲ್ಲಿನವನು ಇಲ್ಲಿಗೆ ಬಂದರೆ ಕೂಸಾಗುವುದಿಲ್ಲ”

ಇವನು ಸಹಜವಾಗಿಯೇ ನುಡಿದನಾದರೂ ಇವನ ದಿಟ್ಟತನದಲ್ಲಿ ವ್ಯಕ್ತನಾದ ಜೀವಭಾವಕ್ಕೆ ಮೆಚ್ಚಿ, ಮಿಸೆಸ್ ಥಾಮ್ಸರವರು ಬೆನ್ನು ಚಪ್ಪರಿಸುತ್ತ ತಮ್ಮ ಭಾಷಾಂತರ ಮಾಡಿ ನಕ್ಕರು; ಒಡನೆ ಮಿಸ್ಟರ ಥಾಮ್ಸರು ಇವನನ್ನು ಬಳಿ ಸಾರಿ “you, my son,” ಎಂದು ಆನಂದದಿಂದ ಮುದ್ದಿಟ್ಟರು.

ಉಕ್ಕಿದ ಆನಂದಾಶ್ರುಗಳಿಂದ ದಂಪತಿಗಳಿಬ್ಬರೂ ಮೌನ: ಅವರನ್ನೀಕ್ಷಿಸುಕಿಸಿದ ಸುಬ್ಬನೂ ಮೌನ.

“ಕಂಡಿಯಾ, ಡಾರ್ಲಿಂಗ! ಜೀವವೊಂದೇ ಎಂದು ಹೇಳುವುದು ವಾದಗ್ರಸ್ತ ವಿಷಯವಾದರೂ ಜೀವಭಾವವು ಮಾತ್ರ ಜಗತ್ತಿನ ಎಲ್ಲಾ ಜನಾಂಗಗಳನ್ನು ಒಂದು ಗೂಡಿಸುವ ಸೂತ್ರ; ಇದನ್ನು ತಿಳಿದರೇ ಇಡಿ ಮಾನವ ಜಾತಿಯ ಜೀವನವು ಸುಸೂತ್ರವಾಗಿ ಸಾಗುವುದು.”

“ಆದರೆ, ಡಾರ್ಲಿಂಗ! ಅದು ಹಾಗೆ ಸಾಗಿಲ್ಲ; ಇದೂ ಅಷ್ಟೇ ಸತ್ಯವಲ್ಲವೆ?”

“ಅದು ಹೇಗೆ ಸಾಗಬೇಕು? ನಮ್ಮದು ಕೆಂಪು, ನಿಮ್ಮದು ಕಪ್ಪು ಎಂದು ಬಣ್ಣದ ಜಂಭದಲ್ಲಿ ಒಬ್ಬೊರನ್ನೊಬ್ಬರು ಕೀಳು ಮೇಲಾಗಿ ಎಣಿಸುವಾಗ ನಮ್ಮದು ಅಂದಿನದು, ನಿಮ್ಮದು ಇಂದಿನದು, ಎಂಬ ಧರ್ಮದ ಅಟ್ಟಹಾಸವಿರುವಾಗ, ನಾವು ಆಳುವವರು, ನೀವು ಆಳುಗಳು, ಎಂದು ಸತ್ತೆಯ ಸಂಭ್ರಮವಿರುವಾಗ, ನಾವು ದೈವವುಳ್ಳವರು, ನೀವು ದುಡಿಯುವವರು, ಎಂಬ ಭೇದಭಾವವಿರುವಾಗ, ಮಾನವಜೀವನವು ಸುಸೂತ್ರವಾಗಿ ಸಾಗುವುದು ಸಾಧ್ಯವೆ? ಹಾಗೆ ಸಾಗಬೇಕೆಂಬ ಸಾಧನೆಯೇ ನಮ್ಮ ಸಮತಾವಾದಿಗಳಿಗಿಗ್ಗರಿ”

ಪತಿಪತ್ನಿಗಳಿಬ್ಬರೂ ಪಾದ ಭೂಮಿಯಲ್ಲಿ ಪ್ರವೇಶ ಮಾಡಿದರೇ ದ. ಹೊರಗಡೆಯಲ್ಲಿ ಮಿನಿಟಿಗೊಂದು ಹೊಸ ನೋಟದಿಂದ ಹೊಳಿದ ಭೂಪ್ರಾಕಾಶಗಳನ್ನು ನೋಡಲು ಸುಬ್ಬು ಕಿಟಕಿಯಲ್ಲಿ ಬಂದನು.

ಪಾರವು ನೆನಪಾಗಿ ಹಿಂದುಸ್ಥಾನದ ಪಾರ್ಶ್ವಪಾರ್ಶ್ವವೂ ಅವನ ಕಣ್ಣಿಗೆ ಕಟ್ಟಿತು.

ಪ್ರೋರ್ಟ ಸೇಡ, ಇಜಿಪ್ತ ಮುಂತಾದ ಸ್ಥಳಗಳಲ್ಲೆಲ್ಲಾ ವಸತಿ ಬೆಳಸಿದ ಈ ದಂಪತಿಗಳು ಜರ್ಮನಿಗೆ ಮೂರು ತಿಂಗಳ ಮಿಾರಿ ತಲುಪಿದರು. ಸುಬ್ಬು ಬರ್ಲಿನ್ ಪಟ್ಟಣದ ಭವ್ಯ ವಿಸ್ತಾರ ಕಂಡಾಗ ಮಾತ್ರ "ಇನ್ನು ನಾನು ಇಲ್ಲಿ! ಎಂದು ಆನಂದವನ್ನೂ ಅಷ್ಟೇ ಪಟ್ಟನು; ಕಳವಳವನ್ನೂ ಅಷ್ಟೇ ಅನುಭವಿಸಿದನು; ಈಗ ನಾನು ಊರಿಗೆ ಪತ್ರ ಬರೆದರೂ ಅದೊಂದು ರೀತಿಯಲ್ಲಿ ತಂದೆ ತಾಯ್ಗಳು "ಅಯ್ಯೋ! ಮಗನು ಇಷ್ಟು ದೂರವೇ!" ಎಂದು ಎದೆ ಒಡೆದುಕೊಳ್ಳುವರು. "ಎರಡು ಮೂರು ವರ್ಷ ಓದು ಮುಗಿಸಿ ತಾನೇ ತಿಳಿಸಿದರೂ ಬಂದೀತು, ಒಮ್ಮೆ ಹೋಗಿ ಬಂದರೂ ಬಂದೀತು" ಎಂದು ಸಮಾಧಾನ ಕೊಂಡರೂ ಒಳಗಿನ ಕಲಮಲದಿಂದ ಕಂದಿದನು. ಮಿಸೆಸ್ ಥಾಮ್ಸನವರು "Don't worry my son!" ಎಂದು ಆಗಾಗ ಹೇಳುತ್ತಲೇ ಇದ್ದರು; ಆದರೂ ಒಂದು ದಿವಸ ಅವನ ಸ್ವಪ್ನದಲ್ಲಿ ಜಾನಕಮ್ಮನೆ ಕಂಡಳು; ಅವಳ ಆ ಅಸ್ತಿಚರ್ಮದ ಮೂರ್ತಿಯನ್ನು ಕಂಡು ಚೀತರಿಸಿ ಎದ್ದನು. ಖಿನ್ನನಾಗಿ ಮಿಸೆಸ್ ಥಾಮ್ಸನವರಿಗೆ ಅರಿಕೆ ಮಾಡಿಕೊಂಡನು. "I am your mother, my son!" ಎಂದ ಅವರ ಮಮತೆಯನ್ನು ಕಂಡು ದುಃಖವನ್ನು ಹೇಗೋ ಒತ್ತಿಕೊಂಡು "yes, mother! I stop – I can be happy" ಎಂದು ಹರುಕುಮುರುಕಾಗಿ ಹೇಳಿದನು.

೭

## ಕೋಣೆಯ ಕತ್ತಲಲ್ಲಿ

ಮಾತ್ಸರ್ಯದ ಯುದ್ಧದಲ್ಲಿ ಭುಶಾಳದಾಸನೇ ಪರಾಜಿತನಾದನು. ಎಂದಿನಂತೆ ಪುರಾಣ ಪುಣ್ಯಕಥೆಗಳು ನಡೆದಲ್ಲಿ, ಬ್ರಾಹ್ಮಣಕಿಯ ಬಾಳಿನಲ್ಲಿ ಸ್ವಾಮಿರಾಚಾರ್ಯರಿಗೆ ಈಗ ಮುಕ್ತಮಾರ್ಗ. ಆದರೆ ಬಡತನದ ಮೂಲಕ ವೃದ್ಧಪತ್ನಿಯ ಬಯಕೆಯೆಂದು ಮಗನ ಲಗ್ನ ಹಾಗಿರಲಿ, ಮಗನನ್ನು ಅಗಲಿ ಅವಳು ಹಾಸಿಗೆ ಹಿಡಿದಿದ್ದರಿಂದ ಅವರ ಮನಸ್ಸು ಸದಾ ಕದಲಿದೆ

ಮಡಿಯಾದ ಅವರ ಮಗಳು ಯಾವ ಅತಂಕವಿಲ್ಲದೆ ಗುಡಿ ಗಂಡಾರಗಳಲ್ಲಿ ಎಲ್ಲರೊಂದಿಗೆ ಬೆರೆತಿರುವುದನ್ನು ನೋಡಿ ಮಾತ್ರ ಆಚಾರ್ಯರಿಗೆ ನೆಮ್ಮದಿಯೆನಿಸಿತು. ' ಇವಳ ವಿಷಯವಾದ ಚಿಂತೆಯೊಪ್ಪು ಬಿಟ್ಟಿತು ಎಂದು ಅವರು ಮುಕ್ತ ಮನಸ್ಸಿನಿಂದ ತಮ್ಮ ಭಜನೆಯಲ್ಲಿ ಮಗ್ನರು. ಶಿಷ್ಟರು ಹೌದೆನ್ನುವಂತೆ ಅವಳು ವಿದ್ರೂಪ ಹೊಂದಿದ್ದರೂ ಅವಳ ಆ ಬಟ್ಟಲಗಣ್ಣು, ಹೊಂಬಣ್ಣದ ಆ ಕೆನ್ನೆ, ವಯಸ್ಸಿಗೆ ತಕ್ಕಂತೆ ಸಹಜವಾಗಿಯೇ ತಲೆದೋರಿದ ಆ ಹೊಸಜೌವನದ ಬೆಡಗು, ಇವುಗಳಿಗೆ ಮೆಚ್ಚಿದ ದುಷ್ಟರಿಗೆ ಅವಳೊಂದು ಮುಕ್ತ ಆಸ್ತಿಯಾಗಿಯೇ ಕಂಡಳು.

*　*　*　*

ಅಂದು ಆರೋಗ್ಯವು ಸರಿಯಾಗಿದ್ದಿಲ್ಲವೆಂದು ಆಚಾರ್ಯರು ವಕೀಲರ ಮನೆಗೆ ಪೂಜೆಗೆ ಹೋಗಿರಲಿಲ್ಲ. ಸುಶೀಲೆಯು ಊರ ಹೊರಗಿನ ಸೀನೀರಿನ ಬಾವಿಗೆ ಹೋಗಿದ್ದಳು. ಮಟಮಟ ಮಧ್ಯಾನ್ಹ. ಊರ ಬೀದಿಗಳಲ್ಲೆ ಜನರ ಸುಳಿವು ಇಲ್ಲದಿರುವಾಗ ಊರ ಹೊರಗಿನ ಮಾತೇಕೆ ?

ಎಂದಿನಿಂದಲೂ ಹಾರೈಸುತ್ತಿದ್ದ ಕಲ್ಲಪ್ಪಾಚಾರ್ಯನಿಗೆ ಇದು ಒಳ್ಳೆ ತಂಪಿನ ಸಮಯವಾಯಿತು.

ರವಿಪುರದ ಬೇಸಿಗೆಯೆಂದರೇ ನೀರಿನ ಬರಗಾಲ.

ಸುಶೀಲೆ ಬಂದಿರುವ ಈ ಸೀನೀರಿನ ಬಾವಿಯ ಪಾವಟಿಗಳೋ ? ನೂರೆಂಟಕ್ಕೂ ಹೆಚ್ಚು.

ಮುಂದು ನೋಡಿ ಕೊಡ ತುಂಬಿದ ಸುಶೀಲೆಯ ಹಿಂದೇ ಕಲ್ಲಪ್ಪ.

"ಅವ್ವಾ!" ಎಂದು ಬೆಚ್ಚಿದಳು.

"ಕೂಗಬೇಡ, ಸುಶೀಲೇ! ನಿನ್ನ ಮನಸ್ಸಿನ ವಿರುದ್ಧ ನಡೆಯುವಷ್ಟು ನೀಚನು ನಾನಲ್ಲ. ಈ ಉರಿಬಿಸಿಲಲ್ಲಿ ಕೊಡ ಹೊತ್ತು ಹೇಗೆ ಬಂದಿದ್ದೀ ಎಂದು ತಳಮಳಗೊಂಡು ಬಂದೆನಷ್ಟೆ, ತಾ ಇಲ್ಲಿ ನಿನ್ನ ಕೊಡ; ಅರ್ಧ ಹಾದಿ ನಡೆದ ಮೇಲೆ ನಿನಗೇ ಕೊಡುವೆನು," ಎಂದು ತುಂಬಾ ತಳಮಳಗೊಂಡು ನುಡಿದವನೇ ನೆಟ್ಟ ಕಂಬದಂದೆ ನಿಂತ ಸುಶೀಲೆಯಿಂದ ಅದನ್ನು ಕಸಿದನು. "ಬಾ, ಬಾ, ಸಂಕೋಚಪಡಬೇಡ," ಎಂದವನೇ ಪಾವಟಿಗೆಯೇರಿ ಬಂದನು. ಏನೂ ಹೊಳೆಯದೆ ಅವಳು ಅವನನ್ನು ಹಿಂಬಾಲಿಸಿದಳು. ಆದರೂ "ದಯವಿಟ್ಟು ಕೊಡವನ್ನು ಕೊಡಿ" ಎಂದಷ್ಟೆ ಬೇಡಿದಳು.

"ಸುಶೀಲೇ!" ಎಂದು ಹಿಂದಿರುಗಿ ನಿಂತ ಅವನ ದಿಟ್ಟಿಯನ್ನು ಕಾಣದಾಗದೆ ಅವಳು ತಲೆಬಾಗಿ ನಿಂತಳು.

ಕಲ್ಲಪ್ಪನಾದರೊ, ಇನ್ನೂ ೨೫ ರ ಮನೆ ದಾಟಿದವನಲ್ಲ. ಅಲ್ಲದೆ ಸುಖವಸ್ತು ಯುವಕ; ಅವನ ಕಿವಿಯಲ್ಲಿನ ಅರಳಿಗೆ ಅಂಟಿದ 'ಹೀನಾ' ಗಂಧದೆಣ್ಣೆಯು ಬಿಸಿಲಿಗೆ ಹೊರಸೂಸಿ ಸುಶೀಲೆಯ ಮಿದುಳನ್ನು ಕಲಕಿತು

"ಅಬಬಾ! ಏನು ಬಿಸಿಲು ಇದು! ಬಾಯಿ ಬಹಳ ಆರಿದೆ. ಕೊಂಚ ತಡೆ, ಸುಶೀಲೇ! ಇದೀಗ ನೀರು ಕುಡಿದು ಬರುವೆ," ಎಂದವನೆ ಕೊಡ ಇಳಿಸಿದನು, ಬಾವಿಯಲ್ಲಿ ಇಳಿದನು. ಒಳ್ಳೇ ಸಂಧಿ ಸಿಕ್ಕಿತೆಂದು ಸುಶೀಲೆಯು ಕೊಡ ಹೊತ್ತು ನಡೆಯಲೆಣಿಸಿದಳು. ಕಲ್ಲಪ್ಪನು ಇದನ್ನು ಮೊದಲೇ ತಿಳಿದಿದ್ದನು. "ಅಯ್ಯಯ್ಯೋ! ಚಕ್ಕರ" ಎಂದು ಕೂಗಿದವನೆ ಧಡಧಡ ಉರುಳಿದವನಂತೆ ಸದ್ದು ಮಾಡಿ ಬಿದ್ದನು; ಸುಶೀಲೆ ಗಾಬರಿಗೊಂಡು ಓಡಿಬಂದಳು. ಅವನ ಅಳ್ಳೆತ್ತಿಯನ್ನು ಊದಿ ಸೆರಗು ಬೀಸಿದಳು. ಅವಳ ಎರಡೂ ಕೈಗಳನ್ನು ಒತ್ತಿ ಹಿಡಿದು ಅವಳನ್ನು ತಟ್ಟ ಎದ್ದು ನಿಂತನು. ಮನೆಗೆ ತೆರಳಲು ಹೊತ್ತಾಯಿತೆಂಬ ಭಯದಲ್ಲಿ ಆವಳು ಇದನ್ನಾವುದನ್ನೂ ಗಮನಿಸಲಿಲ್ಲ. ಹೇಗೋ ಲಗೆ ಬಗೆಯಿಂದ ಇಬ್ಬರೂ ಮನೆಯ ಹಾದಿ ಹಿಡಿದರು. ಜೇನು ಉಸುರಿದ ಕಲ್ಲಪ್ಪನ ಮಾತಿನಲ್ಲಿ ಅವಳು ಬಿಸಿಲಿನ ಅರಿವೂ ಇಲ್ಲದೆ ಊರು ಅಗಸಿಗೆ ಬಂದಳು. ಅವನು ಬಹು ಆಯಾಸದಿಂದ ಅವಳನ್ನು ಬಿಟ್ಟು ಬೇರೆ ಹಾದಿಗೆ ತಿರುಗಿದನು. ತಿರುಗುವಾಗ ಅವನ ಬಿಟ್ಟ ಬಾಣದ ಗುರಿಯು ತಪ್ಪದೆ ಎಸೆದಿತು.

ಸಮಾಜದ ಕಡೆಗಣಿಗೆ ಗುರಿಯಾದ ಸುಶೀಲೆಯ ಕುಡಿನೋಟದ ನೊಬಗನ್ನು ಕಲ್ಲಪ್ಪನು ಪಡೆದನು.

*  *  *  *

“ಅದೆಲ್ಲಾ ಸುಳ್ಳು ಸ್ವಾಮಿ! ಹಿಂದಿನದು ಕೊಡಿ, ಆ ಮೇಲೆ ಬೇಕಾದ ಜಿನಸು ತೆಗೆದುಕೊಳ್ಳಿ” ಎಂದು ಕೋಮಟಿ ಶೇಷಯ್ಯನು ಖಡಾಖಡಿಯಾಗಿ ನುಡಿದನು.

“ಅಲ್ಲಾ ಶೇಷಪ್ಪಾ! ನನ್ನ ಮಾತು ಕೇಳು; ಅಲ್ಲದೆ ಇಂದು ನಮ್ಮಾಕೆಯ ವರ್ಷಶ್ರಾದ್ಧ. ಬ್ರಾಹ್ಮಣ ಕರ್ಮ—ಬಿಡಲಾಗದು; ದಯವಿಟ್ಟು........

“ಅದೇನಿಲ್ಲ ಸ್ವಾಮಿ! ನಮಗೂ ಬಹಳ ಕಸಾರಕೆಯ ಕಾಲ ಈಗ; ಎಲ್ಲರೂ ಉದಾರಿ ಬೆಳೆಸಿದರೆ ನಮ್ಮ ಗತಿಯೇನು?” ಎಂದು ಶೇಷಯ್ಯನು ನುಡಿಯುವ ಗಲೇ ಕಲ್ಲಪ್ಪನ ಆಗಮನವಾಯಿತು. “ಯಾಕೆ! ಸಾಹುಕಾರ ಬಹಳ ರೇಗಿದ್ದಾನೆ” ಎಂದು ನಡುಬಾಯಿ ಹಾಕಿ ಆಸನವನ್ನು ಅಲಂಕರಿಸಿದನು.

“ಪರವೆಯಿಲ್ಲ, ಶೇಷಯ್ಯಾ! ಈ ತಿಂಗಳ ಮುಟ್ಟಿಗೆ ಕೊಡು; ಈ ಸಲವೂ ನಮ್ಮ ಅಚಾರ್ಯರಿಂದ ತಡವಾದರೆ ನನ್ನನ್ನು ಕೇಳು,” ಎಂದು ಹೊಣೆಯಾಗಿ ನಿಂತನು.

ಅಕ್ಕಿ, ಬೇಳೆ, ಗೋದಿ ಎಲ್ಲವನ್ನೂ ಕಟ್ಟಿಕೊಂಡು ಆಚಾರ್ಯರು ಮನೆಗೆ ತೆರಳಿದರು. ಹಾದಿಯಲ್ಲಿ ಏನೇನೋ ನೆನೆಸಿ “ಛೀ! ಇಂಥ ಉದಾರ ಮನಸ್ಸನನ್ನು ಅನ್ಯಥಾ ತಿಳಿದೆ” ಎಂದೂ ಪಶ್ಚಾತ್ತಾಪಪಟ್ಟರು.

“ಬನ್ನಿ; ಕಲ್ಲಪ್ಪಾಚಾರ್ಯರೇ! ಇದು ನಿಮ್ಮ ಮನೆ,” ಇದು ಸ್ವಾಮಿರಾಚಾರ್ಯರ ಈಗಿನ ಸ್ವಾಗತವಾಕ್ಯ.

ಅವರ ಮಗ ಸುಬ್ಬು ಹೊಟ್ಟೆಯ ಪಾಡಿಗೆಂದು ಕಲ್ಬುರ್ಗಿ, ರಾಯಚೂರು, ಹೈದ್ರಾಬಾದು, ಎಲ್ಲೆಲ್ಲಿಯೋ ಅಲೆಯುತ್ತಿರುವನು, ಎಂತಲೇ ಆಚಾರ್ಯರ ಭಾವನೆ

ಆಚಾರ್ಯರ ಕಷ್ಟನಷ್ಟಗಳಲ್ಲಿ ಈಗ ಕಲ್ಲಪ್ಪನ ಕೊಡಗೈ ಸದಾ ತೆರೆದಿದೆ

*  *  *  *

" ಅಂತೂ ಅಡಿಗೆ ಸೊಗಸಾಗಿದೆ ಮಗೂ! ಆದರೇನು ? ಮುದುಕನನ್ನು ಉಣಿಸುವುದೇ ನಿನ್ನ "....ಎಂದು ಒತ್ತರಿಸಿದ ಗಂಟಲಲ್ಲಿ ತುತ್ತು ನುಂಗಿದರು ಸ್ವಾಮಿರಾಚಾರ್ಯರು ;..................

" ಆಗಲಿ ತಾಯೀ ! ನಿನ್ನ ಪುಣ್ಯದಿಂದಾದರೂ ಮನೆದೇವರಿಗೆ ನಿತ್ಯವೂ ನೈವೇದ್ಯ ದೊರೆಯುವುದು ನಿನ್ನ ಪಾವಿತ್ರ್ಯಕ್ಕೆ ಆವನಾದರೂ ಮೆಚ್ಚಲಿ "

ಸುಶೀಲೆಗೆ ಸಿಡಿಲು ಬಡಿದಂತಾಯಿತು.

ಮರುದಿವಸ ಪಕ್ಕದ ಪವನಹಳ್ಳಿಯ ಕುಲ್ಕರ್ಣಿಯ ಮನೆಯಲ್ಲಿ ದ್ವಾದಶಿಯ ಔತಣ; ಈ ದಿನ ಸಂಜೆಗೇ ಹಸಿವೆಚೀಲವು ಸಜ್ಜಾಯಿತು. ಮಡಿವಂತಿಯಾದ ಮಗಳ ವಿಷಯವಾಗಿ ಈಗ ತಂದೆಗೆ ಬೇರೆ ಯಾವ ಆಲೋಚನೆಗೇ ಕಾರಣವಿರಲಿಲ್ಲ.

" ಈಚೆಗೆ ನಿಮ್ಮ ದರ್ಶನವೇ ಬಂಗಾರವಾಗಿದೆಯಲ್ಲಾ ! "

" ಏನೋ ಬರೋದಾಗಲಿಲ್ಲ "

" ಅದೇನು ಅಂಥ ಮಹತ್ಕಾರ್ಯವೇ ? "

" ಹಂ ; ಕೊಂಚ ಅಭ್ಯಾಸ "

" ಪರೀಕ್ಷೆಯು ಸಮೀಪವಾಗಿದೆಯೇನು ? ಅದಾವ ಪರೀಕ್ಷೆ ? "

" ಶಿರೋಮಣಿ "

" ಇಂದಿನ ನಿಮ್ಮ ಮಾತುಗಳೇಕೆ ಇಷ್ಟು ಸಂಕ್ಷೇಪವಾಗಿವೆ ? "

" ಸುಶೀಲೆ! ಈಗ ನೀನು ನಡಿಸಿರುವ ಪರೀಕ್ಷೆಯನ್ನು ಕೊಡುವುದು ಮಾತ್ರ ಬಹಳ ಕಠಿಣವಾಗಿದೆ "

" ಹಂ—ಹೀಗೆ ಚನ್ನಾಗಿ ತುಟಿ ಬಿಚ್ಚಿ ಹೇಳಿರಿ " ಎಂದು ನಕ್ಕಳು; ಆದರೆ ಇದಕ್ಕೆ ಪ್ರತಿಯಾಗಿ ಎಂದಿನಂತೆ ಉಲ್ಲಾಸ ತೋರಿ ಸರಸಸಲ್ಲಾಪವನ್ನು ಬೆಳೆಸದ ಕಲ್ಲಪ್ಪನನ್ನು ಕಂಡು ಅವಳ ಕುತೂಹಲವೂ ಬೆಳೆಯಿತು.

" ಹಾಗಾದರೆ ನನ್ನ ಪರೀಕ್ಷೆಯಲ್ಲಿ ನೀವು ನಾಪಾಸು " ಎಂದು ಹುಚ್ಚು ಸುರಿಸಿ ನಕ್ಕಳು.

" ಹಾಗೇ ತಿಳಿ; ಸುಶೀಲೇ! ಖಂಡಿತ ಇದು ನನ್ನ ಪರೀಕ್ಷೆಯ ಕಾಲ . ."

ತಾನೂ ಸಿಟ್ಟಿನ ಸೋಗಿನಲ್ಲೇ " ಸಾಕು ಬಿಡಿ, ನಾರಾಯಣರೇ! ಈ

ಹುಬ್ಬುಗಂಟನ್ನು ಬಿಚ್ಚಿರಿ ; ನಿಮ್ಮದೇ ಆಗಿ ಬರಲಿರುವ ಈ ಹಸುಗಂದಿಯನ್ನು ಕುರಿತು ಏನು ಉಪಾಯ ಮಾಡುವಿರಿ ಎಂಬುದನ್ನು ಹೇಳಿ... ..........."

ಕೃದ್ಧನಾದ ಕಲ್ಲಪ್ಪನನ್ನು ನೋಡಿ ಬೆಚ್ಚಿದಳು ; ಅದೆಲ್ಲ ಕೇವಲ ನಟನೆ ಯೆಂದೇ ತಿಳಿದಳು. ಅವನ ಮಡಲಲ್ಲಿ ಉರುಳಿದಳು. ಆದೇಕೋ ನಸುನಕ್ಕು ಕಲ್ಲಪ್ಪನನ್ನು ನೋಡಿ "ಸೈ ಸೈ" ಎಂದು ಚಪ್ಪಾಳೆಯಿಟ್ಟಳು. "ಪ್ರಿಯರೇ! ನಿಮ್ಮ ಶಿರೋಮಣಿ ಪರೀಕ್ಷೆಯಲ್ಲಿ ನಾರೀ ಹೃದಯ ಎಂಬ ವಿಷಯವೂ ಇದೆ ಏನು? ಅಂತೆ ಈವರೆಗೂ ಅದನ್ನು ಪರೀಕ್ಷಿಸುತ್ತಿರುವಿರೇನು? ಬೇಡ ಮಾರಾ ಯರೇ! ನನ್ನದು ಬಹಳ ಸರಳ ಹೃದಯ; ಅದು ಅಷ್ಟೇ ಕೋಮಲವೂ ಹೌದು; ಇಂದಿನ ನಿಮ್ಮ ಮೌನದಿಂದ ಈಗ ಅದಕ್ಕೆ ಎಂಥ ಯಾತನೆಯೆಂದು ಹೇಳಲಿ!"

"ಭಯಗೊಳ್ಳಬೇಡ; ಸುಶೀಲೇ!" ಎಂದಷ್ಟೆ ನುಡಿದನು ಕಲ್ಲಪ್ಪನು.

"ಮತ್ತೇನು? ನೀವು ಮಾತಾಡಿ; ಅಂದರೆ ನನಗೆ ಯಾವ ಭಯವೂ ಇಲ್ಲ ಖಂಡಿತವಾಗಿ ನಿಮ್ಮಂಥ ಗಟ್ಟಿಗರ ನೆರಳಲ್ಲಿ ನಾನು ಯಾರಿಗೂ ಅಂಜು ವವಳಲ್ಲ. ಯಾಕೆ ಹೌದಲ್ಲವೊ?"

ಮತ್ತೂ ಕಲ್ಲಪ್ಪನು ಮೌನ.

"ಮಾತಾಡಿ. ಹೀಗೇಕೆ ಭ್ರಮಿಷ್ಟರಾಗಿರುವಿರಿ?"

ನಗಲೊಲ್ಲದೆ ನಕ್ಕ ಕಲ್ಲಪ್ಪನನ್ನು ದಿಟ್ಟಿಸಿದಳು; ಎದ್ದು ಅವನ ಎರಡೂ ಭುಜಗಳನ್ನು ಗಟ್ಟಿಯಾಗಿ ಅಲ್ಲಾಡಿಸಿದಳು; ಒಳಗೆ ಹೊತ್ತಲಿದ್ದ ಬೆಂಕಿ ಯನ್ನು ಆರಿಸಲೆಣಿಸಿ, ಸಲಿಗೆ ತೋರಿ ಅವನನ್ನು ಬಿಗಿದಪ್ಪಿದಳು; ಮಿತಿ ಯಿಲ್ಲದ ಸರಸವನ್ನು ಸುರಿಸಿದಳು.

"ಹೆಸರಿಗೆ ತಕ್ಕಂತೆ ನಿಮ್ಮ ಹೃದಯವೂ ಕಲ್ಲೇ!" ಈ ವರೆಗೂ ತಡೆದ ಅಶ್ರುಗಳಿಗೆ ಧಾರೆಯೊಡೆಯಿತು. ಕ್ಷಣಹೊತ್ತು ಹಾಗೇ ಅವನ ತೋಳಲ್ಲಿ ತಲೆಯಿಟ್ಟಳು; ಮನಸಾ ಅತ್ತಳು.

"ಸುಶೀಲೇ!"........

"ನೀಡಿರಿ; ದಾಸಿಗೆ ನಿಮ್ಮ ಮುಕ್ತಾಫಲಗಳಿಂದ ಈ ಉಡಿಯನ್ನು ತುಂಬಿರಿ" ಎಂದು ಪದರೊಡ್ಡಿದಳು.

"ಮರುಳೇ! ಹೀಗೆ ಮಾಡಿದರೆ ಹುಚ್ಚಿಯಾಗಿ ಹೋದೀ !"

"ಹಾಗಾದರೆ ನನ್ನ ಭಯವೆಲ್ಲಾ ಬರಿ ಭ್ರಾಂತಿಯಲ್ಲವೆ? ಹೇಳಿ! ಬೇಗ ಹೇಳಿ!"

"ಅದು ಹೇಗೋ ನಾನು ಅರಿಯೆ; ಆದರೆ ಇಂತು ಭ್ರಾಂತಳಾದರೆ ನಿನ್ನ ಗತಿಯೇನು?"—

"ನನ್ನ ಗತಿ? ನೀವೇ ನನ್ನ ಗತಿ—ನನ್ನ ಗತಿ ನಿಮಗೇ ಸೇರಿಲ್ಲವೆ?"

"ಹಾಡಿದ್ದನ್ನೆ ಹಾಡಬೇಡ. ಮುಂದಿನ ಹಾದಿಯನ್ನು ನೋಡಿಕೊ"

"ನಾನು ನೋಡುವುದೇನು? ನೀವು ತೋರಿಸಿರಿ"

"ಹುಚ್ಚೀ! ಯಾರಿಗೆ ಯಾರು?" ಎಂದವನೆ ಹೊರಡಲೆಂದು ಎದ್ದನು.

ಸುಶೀಲೆ ಹೌಹಾರಿದಳು; ಎಲ್ಲಾ ಬಲವೊಂದುಮಾಡಿ ಅವನನ್ನು ತಡೆಯಲೆಂದು ಬಿಗಿದು ಅಪ್ಪಿದಳು, ಆದರೆ ಅವನ ಒಂದೇ ಒಂದು ಹಿಸುಕಿಗೆ ಕೆಳಗೆ ಉರುಳಿದಳು.

"ಅಯ್ಯೋ! ನಾನು ಅಬಲೆ," ಎಂದು ಅವನ ಕಾಲನ್ನು ಸುತ್ತಿದಳು; ಅವನು ಹಾಗೇ ಅಡಿಯಿಟ್ಟು ಕೋಣೆಯ ಬಾಗಿಲಿಗೆ ಬಂದನು; ಹಾಗೇ ಜರಿದು ಬಂದ ಅವಳ ತಲೆಗೆ ಹೊಸ್ತಿಲ ಬಡಿಯಿತು. "ಅವ್ವಾ!" ಎಂದು ಚೀರಿದಳು. ಅವನು ಹೊರಗಾಗಿ ಬಿಟ್ಟನು.

"ಹೇಳು; ನಿಜವಾಗಿ ಹೇಳು; ಇಲ್ಲವಾದರೆ ನಿನ್ನನ್ನು ಇಲ್ಲೇ ಹುಗಿದು ಬಿಡುವೆನು" ಎಂದು ತಂದೆಯು ರಭಸವನ್ನು ಕೇಳಿದಳು; ಕತ್ತೆತ್ತಿದಳು; ಎಲ್ಲಿಯೂ ಕತ್ತಲೆ; ಎಣ್ಣೆ ಸರಿದಿತ್ತೆಂದು ದೀಪವೂ ಶಾಂತವಾಗಿತ್ತು.

## ೮

# ಪಂಢರಪುರ

ತಂದೆ ವಿಠಲಾ! ತಾಯಿ ವಿಠಲಾ! ತಂದೆ ತಾಯಿ ವಿಠಲಾ ॥
ಬಂಧು ವಿಠಲಾ! ಬಳಗ ವಿಠಲಾ! ಬಂಧುಬಳಗ ವಿಠಲಾ ॥

ಎಂದು ಹಾಡಿ ಹಾದಿ ನಡೆದ ಸ್ವಾಮಿರಾಚಾರ್ಯರ ಭಜನೆ ಇಂದು ಅದೊಂದು ಅರಣ್ಯರೋದನವೇ ಸರಿ; ಎಂದಿನಂತೆ ಇಂದು ಅವರ ಕಾಲಲ್ಲಿ ಗೆಜ್ಜೆಯಿರಲಿಲ್ಲ; ಕೈಯಲ್ಲಿ ಟಿಪರಿಯೂ ಇರಲಿಲ್ಲ. ನೆಲದಲ್ಲಿನ ನೆಗ್ಗಿನ ಮುಳ್ಳು ಕಾಲಲ್ಲಿ; ಎದೆಗೆ ಮುಳ್ಳಾದ ಮಗಳು ಪಕ್ಕದಲ್ಲಿ; ಆದರೆ ಅಂದಿನಂತೆ ಇಂದು ಅವರ ಬಾಯಲ್ಲಿ ಆ ಆರ್ಭಟವಿರಲಿಲ್ಲ; "ಪಾಂಡುರಂಗಾ! ನಿನ್ನ ಇಚ್ಛೆಗೆ ನಾನು ವಿರುದ್ಧನಲ್ಲ" ಎಂದಷ್ಟೆ ಹೇಳುತ್ತಿದ್ದನೇ ಹೊರತು ಬೇರೆ ಏನೂ ನುಡಿಯು ಲಿಲ್ಲ. ಸುಶೀಲೆಗಂತೂ ಕಣ್ಣೀರೇ ಕಾಲಿನಿಂದ ರಕ್ತವಾಗಿ ಹರಿಯಿತು. ರವಿ ಪುರವನ್ನು ಬಿಟ್ಟು ಇಂದಿಗೆ ೨೭ ದಿನಗಳಾಗಿದ್ದವು ಈ ಮೂರು ವಾರವೂ ಆಚಾರ್ಯರು ಒಂದೇ ರೀತಿಯಾಗಿ ಮೋಲಿನಂತ ಹಾಡಿ ದಣಿವೆಂತಹದೆಂಬು ದನ್ನು ಮರೆತಿದ್ದರು.

ಸಂಜೆಯಾಗುವಷ್ಟರಲ್ಲಿ ಹಾಗೂಹೀಗೂ ಗೋಪಾಲಪುರವನ್ನು ದಾಟಿ ದರು.

ಸಹಸ್ರಾವಧಿ ಕಲಂಕಿತರು ಮೈತೊಳೆದಿದ್ದರೂ ತಾನು ಮಾತ್ರ ಎಂದಿಗೂ ತಿಳಿಯಾಗಿರುವ ತುಂಗಭದ್ರೆಯನ್ನು ನೋಡಿ "ಮಗಳ ನಿಮಿತ್ತ ವಾಗಿಯಾದರೂ ತುಂಗಭದ್ರೆಯ ಸ್ನಾನ ಲಭಿಸಿತು" ಎಂದು ಅಂಥ ಸ್ಥಿತಿ ಯಲ್ಲಿಯೂ ಸುಶೀಲೆಯನ್ನು ಕನಿಕರದ ಕಂಬನಿಯಿಂದ ಎರೆದರು. ತಂದೆಯು ಕರುಣದಲ್ಲಿ ಸುಶೀಲೆಯೂ ಕ್ಷಣಹೊತ್ತು ತನ್ನ ಪಾಡನ್ನು ಮರೆತಳು; ಒಡನೆ ನೀರಲ್ಲಿ ಕೃಷ್ಣವರ್ಣದ ಮೋಡಗಳನ್ನು ಕಂಡು ಮತ್ತೆ ಬಾಡಿದಳು, ಕುಸಿದುಬಿದ್ದಳು; ತಂದೆಯು ಆನಂದವನ್ನು ಭಂಗಮಾಡಿದಳು.

"ಕಾತುರ ಪಡಬೇಡ ಮಗೂ! ನಮ್ಮಪ್ಪನ ಸಾನ್ನಿಧ್ಯದಲ್ಲಿ ಎಂಥ ಪಾಪದ ಜೀವಗಳಿಗೂ ನೆಲೆ ಸಿಗುವುದು, ಏಳು! ಇನ್ನೂ ಒಂದೇ ಒಂದು ಹರಿ ದಾರಿ ಪಾಂಡುರಂಗನ ಪಾದಗಳಿಗೆ; ಈ ಪಂಢರಪುರವು ಸಾಧುಸಂತರ ತವ

ರೂರು ; ದಾಸವುನಿಗಳಿಗೆ ಪುಣ್ಯದ ಕೋಶ ; ಪಾಂಡುರಂಗನು ಅನಾಥನಾಥ. ಇಲ್ಲಿ ನಿನ್ನಂಥ ಅನಾಥ ಬಾಲಿಕೆಯರಿಗೂ ಎಂದಿಗೂ ಆಶ್ರಯ ; ಅಂಥ ಒಂದು ಆಶ್ರಮದಲ್ಲಿ ನಿನ್ನನ್ನು ಕೆಲಕಾಲ ಬಿಡುವೆನು. ನಾನೂ ಇದೊ! ಪಾಂಡು ರಂಗನ ಪರಮಪ್ರಿಯನಾದ ಭಕ್ತ ಪುಂಡಲಿಕನ ಅಡಿಯಲ್ಲಿ ಇರುವೆನು ; ನೀನು ಯಾವ ವಿಧವಾಗಿಯೂ ಹೆದರಬೇಡ, ಅದೋ! ಆ ಘಟ್ಟವನ್ನಷ್ಟು ದಾಟಿದ ರಾಯಿತು. ನಿನ್ನಂಥವರಿಗಾಗಿಯೇ ಕಟ್ಟಿದ ಅನಾಥ ಬಾಲಿಕಾಶ್ರಮವನ್ನು ಯಾರಾದರೂ ತೋರಿಸುವರು "

---

೬

## ಕಲ್ಲಪ್ಪನ ಗುಲ್ಲು

ಚಿಕ್ಕ ಹನುಮಪ್ಪನ ಗುಡಿ ; ಬಂಕದಲ್ಲಿ ಐದಾರು ಬ್ರಾಹ್ಮಣ ವೃಂದವು ; ಊರಿಗೆ ಹಿರಿಯರಾದ ಮದರಕಲ್ಲ ಮಧ್ವಾಚಾರ್ಯರು ಅಗ್ರಸ್ಥಾನದಲ್ಲಿ. ಚರ್ಚೆಗೆ ಯಾವ ವಿಷಯ ಬಂದರೂ ಬೇಗ ನಿರ್ಣಯಕ್ಕೆ ಜಿಗಿಯದೆ ಆಪ್ತಾ ಲೋಚನೆಯನ್ನು ಹೇಳುವರೆಂದು ಸುತ್ತಲಿನ ನಾಡಿಗೆ ಹೆಸರಾದವರು ಇವರು.

"ನೀವೇನೇ ಹೇಳಿ ; ಎಷ್ಟು ಸುಳ್ಳೋ ಎಷ್ಟು ನಿಜವೋ? ಬಡಬ್ರಾಹ್ಮಣ ನನ್ನು ಈ ರೀತಿಯ ಲೋಕಾಪವಾದಕ್ಕೆ ಗುರಿ ಮಾಡುವುದೂ ಅಮಾನುಷವೇ ಹೌದು ; ತಾವುಗಳಾದರೂ ವಿಚಾರವಂತರು ; ಈಗಿನ ಕಾಲದಲ್ಲಿ ನಮ್ಮವ ರನ್ನು ನಾವು ಕಾಪಾಡದಿದ್ದರೆ ಹೆರವರ ಹಾವಳಿಗೆ ಎಡೆಕೊಡುವುದು ನಮ್ಮ ಆತ್ಮನಾಶಕ್ಕೆ ಔತಣ ಕೊಡುವಂತೆಯೆಂದು ನನ್ನ ಮತ. ತಮ್ಮ ಬೆನ್ನನ್ನು ತಾವು ಯಾರೂ ಕಂಡಿಲ್ಲ. ಊರಿಗೆ ಬಡ ಬ್ರಾಹ್ಮಣನ ಉಸಿರು ಹತ್ತುವುದು ನನಗಂತೂ ಬೇಡ," ಎಂದ ಮಧ್ವಾಚಾರ್ಯರ ತೀರ್ಪಿಗೆ ಎಲ್ಲರೂ ತಲೆಬಾಗಿ ದರು. ಆದರೆ ಕಲ್ಲಪ್ಪಾಚಾರ್ಯನ ಮುಖವು ಮಾತ್ರ ಹುಳ್ಳಗಾಯಿತು.

ಮಧ್ವಾಚಾರ್ಯರ ಪುಣ್ಯದ ಫಲವಾಗಿ ಇಂದು ರವಿಪುರದಲ್ಲಿ ಸ್ವಾಮಿ ರಾಚಾರ್ಯರ ಜೀವನವು ನಿರಾತಂಕವಾಗಿ ಸಾಗಿದೆ ಸದಾ ಸರ್ವಕಾಲ ಅವರ

ಮನೆಯಲ್ಲಿ ಕಾಣುತ್ತಿದ್ದ ಕಲ್ಲಪ್ಪನು ಮಾತ್ರ ಈಗ ಆ ಹಾದಿಗೂ ಸುಳಿಯು ವುದಿಲ್ಲ. ಇದನ್ನು ಕುರಿತು ಆಗಾಗ ಈ ವಿಷಯದ ಗುಲ್ಲು ಮಾಡುವುದಿಲ್ಲ ವೆಂತಲ್ಲ. ಆದರೆ ಅದು ಬರಿ ಹೊತ್ತುಗಳೆಯುವ ಮಟ್ಟಿಗೇ ಉಳಿದಿದೆ ಹೊರತು ಅಂಥ ಯಾವ ಕ್ರೂರಸ್ವರೂಪವನ್ನು ತಾಳಲಿಲ್ಲ

ಸುಶೀಲೆಯಾದರೂ ಮೊದಲಿನಂತೆ ಯಾವ ದೂರದ ಬಾವಿಗೂ ಹೋಗುತ್ತಿರಲಿಲ್ಲ.

ಆದರೂ ನಷ್ಟವು ಒಮ್ಮೆ ಒಂದು ಸಂಸಾರವನ್ನು ಆರಿಸಿಕೊಂಡರೆ ಅದಕ್ಕೆ ಕೈ ತೊಳೆದುಕೊಂಡೇ ಬೆನ್ನು ಹತ್ತುವುದು ಸ್ವಾಮಿರಾಚಾರ್ಯರ ಪ್ರಪಂಚವು ಅದಕ್ಕೆ ಎಂದೋ ಶರಣು ಬಂದಿದೆ; ಆದರೆ ಶರಣಾಗತರನ್ನು ಸಲಹುವಷ್ಟು ಪುಣ್ಯವೆಲ್ಲಿ ಈ ದುರದೃಷ್ಟಕ್ಕೆ? ಅದನ್ನು ಹಿಮ್ಮೆಟ್ಟಿಸಲಿಕ್ಕೆ ಅಂಥ ಜಾತಿ ವೀರನೇ ಬೇಕು; ಆಗ ಆ ದೇವರು ಕೂಡ ಪಾರ್ಥನ ಸಾರಥಿಯಾಗಿರುವನು. ಸ್ವಾಮಿರಾಚಾರ್ಯರಂತೂ ಹೇಳಿಕೇಳಿ ಉದುರಲಿರುವ ಹಂಣೆಲೆಯಾಗಿದ್ದರು. ಸುಶೀಲೆಯೋ? ಪಾಪ ಅವಳು ಅಬಲೆ; ಕಲ್ಲಪ್ಪನ ಕಾಲ್ತುಳಿತದಲ್ಲಿ ಗಾಸಿಯಾದ ಅಬಲೆ; ಇಂಥವರ ಸಂಸಾರದಲ್ಲಿ ತಾನೇ ಈ ದುರದೃಷ್ಟದ, ಈ ದೈವ ಪುರುಷನ ತಾಂಡವವಿರದಿದ್ದರೆ ಬೇರೆ ಎಲ್ಲಿ ಇದಕ್ಕೆ ಎಡೆ? ಈ ಮೂವರೂ ಕಲ್ಲಪ್ಪನ ಗುಲ್ಲಿಗೆ ಹೆದರಿದವರೇ! ಅವನೋ? ವರ್ಷವರ್ಷವೂ ತೋಟದಲ್ಲಿ ಗಾಣವನ್ನು ಹಾಕಿ ರಾತ್ರಿರಾತ್ರಿಯಾಗಿ ಬೆಳೆದ ಕಬ್ಬುಗಳನ್ನು ಹಿಂಡಿ ಹಿಪ್ಪೆ ಮಾಡಿ, ಮನೆಯಲ್ಲಿ ಬೆಲ್ಲದಚ್ಚುಗಳ ಅಡಕಲ ಏರಿಸುವವನು; ಅವನಿಗೆ ಹೆಸರಿಡುವುದೆಂದರೆ........ಇದೊಳ್ಳೇ ಮಾತು! ಎಷ್ಟಾದರೂ ಆತ ಗಂಡಸು; ಅವನು ಪಾತರದವರ ಬಾಯಲ್ಲಿ ಬಾಯಿಟ್ಟು ಬಾಯಿ ಮುಕ್ಕುಳಿಸದೆ ದೇವರ ಗುಡಿಗೆ ಬಂದರೂ ಗರ್ಭಗುಡಿಯ ಪೂಜಾರಿಯು ಅವನಿಗೂ ಮುಂದೆ; ವಿಧವೆ ಯೆನ್ನದೆ, ಸಧವೆಯೆನ್ನದೆ, ಸೋದರ ಬಳಗವೂ ಎನ್ನದೆ, ತಾರುಣ್ಯದ ಸೂರೆ ಮಾಡಿದರೂ ವ್ಯಾಸಮಂದಿರದಲ್ಲಿ ಪುರಾಣಿಕರ ಪಕ್ಕದಲ್ಲಿ; "ಇಷ್ಟಾದರೂ ನನ್ನ ವಿಲಾಸೆಗೆ ಯಾವ ಕಲಂಕ ಹತ್ತಿಲ್ಲವಷ್ಟೆ" ಎಂದು ಈಗ ಅಂಥ ಸಮಯ ಸಿಗದಿದ್ದರೂ ಅದನ್ನು ಹುಡುಕಿಕೊಂಡು ಆಗಾಗ ಸುಶೀಲೆಯನ್ನು ಝುಲ್ಲಿಸ್ಸ್ಲಿಕ್ಕೆ ಕಾರಣನಾಗುತ್ತಿದ್ದನು. ಅವನ ಈ ದುರ್ವಾಸನೆಯು ಸುಶೀಲೆಗೆ ಸೋಂಕಿದ್ದಿಲ್ಲವೆಂತಲ್ಲ; ಆದರೆ ಮುಷ್ಟರನ್ನು ಕಂಡು ತನ್ನಷ್ಟಕ್ಕೆ ತಾನು ದೂರ

ಸರಿದರೆ ಸಾಕು ಎಂದು ಅವಳು ತಂದೆಗೆ ಕೂಡ ಅವನ್ನು ತೀರಿಸುವ ಗೋಜಿಗೆ ಹೋಗಲಿಲ್ಲ. ಅವಳ ಈ ಮೌನವನ್ನು ಬೇರೆಯಾಗಿ ಬಗೆದ ಕಲ್ಲಪ್ಪನು ಕೊನೆಗೆ ದುಃಸಾಹಸಕ್ಕೂ ಸಿದ್ಧನಾದನು.

---

## ೧೦

## ಇದು ಬದುಕೇ!

ಇತಿಹಾಸಪ್ರಸಿದ್ಧವಾದ ರವಿಪುರವು ಹಿಂದೂ ರಾಜಧಾನಿಯು ಊರೆಂದ ಮೇಲೆ ಅಂದಿನ ಅರಮನೆ ಕುಲದೈವತದ ಭವ್ಯ ದೇವಾಲಯದ ವೈಭವದ ಕುರುಹು ಇಂದಿಗೂ ಒಡೆದು ಕಾಣುವುದು. ಮಧ್ಯಾಹ್ನದ ೧೨ ಗಂಟೆಯು ರಾತ್ರಿ ಎಂಟು, ಎಂಟೂವರೆಯ ಪೂಜೆಯ ವೇಳೆಯಲ್ಲಿ ನಗಾರಿ, ನೌಬತ್ತು, ಕಹಳೆ ಕೊಂಬುಗಳ ವಾದ್ಯಗಳ ಪ್ರತಿಧ್ವನಿಯು ಊರಿನ ಮೂಲೆಮೂಲೆಗಳಲ್ಲಿಯೂ ಇಡುಗುವುದು.

ನಿತ್ಯದಂತೆ ಈ ದಿನ ರಾತ್ರಿಯ ಹೇಮಾಚಲಪತಿಯ ಪೂಜೆ ಮುಗಿದು ಮಂಗಳಾರತಿ, ಶಯ್ಯಾರತಿಗಳು ಆದುವು ಜೋಗುಳ ಹಾಡಿನ ಇಂಪಿನಲ್ಲಿ ದೇವರೂ ನಿದ್ದೆ ಹೋದನು. ರವಿಪುರದ ವಸತಿ ಗುಡ್ಡಗಾಡುಗಳ ಮಧ್ಯದಲ್ಲಿ. ನಿಶಾದೇವಿಯ ಸಾಮ್ರಾಜ್ಯದಲ್ಲಿ ನಿಶಾಚರಗಳ ಸ್ವೈರವಾದ ಸಂಚಾರವೆಂದು ಊರವರು ಮೂರು ಸಂಜೆಯಲ್ಲೇ ತಮ್ಮತಮ್ಮ ಆಕಳು ಕರುವುಗಳನ್ನು ಕೊಟ್ಟಿಗೆಯಲ್ಲಿ ನೋಡಿ ಬಾಗಿಲ ಮುಚ್ಚಿಕೊಳ್ಳುವರು.

ಬೇಸಿಗೆಯೊಂದು ಸ್ವಾಮಿಂದಾಚಾರ್ಯರ ಹಾಸಿಗೆ ಒಳಂಗಳದಲ್ಲಿ; ಸುಶೀಲೆ ಎಂದಿನಂತೆ ತನ್ನ ಕೋಣೆಯಲ್ಲಿ; ಗಾಳಿ ಬಯುಸಿ ಕೋಣೆಯ ಬಾಗಿಲು ಮುಚ್ಚಿದ್ದಿಲ್ಲ ಅಂದು ಊರಲ್ಲಿ ವಿಶ್ವಕಲಾ ನಾಟಕ ಮಂಡಲಿಯ ನಾಟಕ ವಿತ್ತೆಂದು ಪಕ್ಕದ ಬಂಗಾರಸಾನಿಯ ಮನೆಯಲ್ಲಿಯೂ ಮಾನವರ ಸದ್ದಿಲ್ಲ. ಎದುರು ಮನೆಯ ಅಡಿಗೆಯ ಗುಂಡಪ್ಪನು ಮಾತ್ರ ತನ್ನ ಅಟ್ಟದಲ್ಲಿ ಇನ್ನೂ ಎಚ್ಚರವಾಗಿದ್ದಾನೆ, ಮುಳ್ಳಾಪುರದ ಕುಲಕರ್ಣಿ ಧೋಂಡಪ್ಪನು ಅಂದೇ

ಬಂದಿದ್ದನೆಂದು ಇವರಿಬ್ಬರಿಗೆ ರೂಢವಾದ ಒಳ್ಳೇ ರಹಸ್ಯದ ಮಾತುಗಳಲ್ಲಿ ಇಬ್ಬರೂ ಮಗ್ನ. ಹಾಗಂತೂ ಇಬ್ಬರ ವಯಸ್ಸಿನಲ್ಲಿ ಒಂದಕ್ಕೆ ಎರಡರಷ್ಟು ಅಂತರ. ಧೊಂಡಪ್ಪನು ಈಗ ೪೫ರ ಮನೆಯನ್ನು ದಾಟಿದ್ದಾನೆ. ಆದರೂ ಸಂಸ್ಕಾರಬಲವ ಮಹಿಮೆ. ಹೆಂಗಸರ ಸುದ್ದಿಯೆತ್ತಿದರಾಯಿತು ಅವನಿಗೆ ಇರುಳು ಹಗಲಾಗುವುದು; ಅಲ್ಲದೆ ಒಬ್ಬ ಜ್ಯೋತಿಷ್ಯ ಮಹಾಶಯರು ಆ ವರ್ಷ ಅವನಿಗೆ ಮನಮುಟ್ಟ ಅಧರಾಮೃತಪಾನ ಎಂದೂ ಹೇಳಿದ್ದರಂತೆ

"ಅಲ್ಲ ಗುಂಡ್ಯಾ! ನಿಮ್ಮ ಮನೆಯೆದುರಿನ ಕಥೆ ಇಡೀ ರವಿಪುರದ ಗಡಿಯಲ್ಲಿ ಹರಡಿದೆ; ನಿಜವೇನೊ?"

"ಸ್ವಲ್ಪ ತಡೆ ಧೋಂಡಪ್ಪಾ! ಒಂದು ತಿಂಗಳಲ್ಲಿ ಈ ಕಥಯ ನಾಯಕಿಯ ನಾಚು ಈ ಬಡವನ ಗುಡಿಸಲಲ್ಲಿ ನೀನೇ ಕಾಣುವೆ."

"ಭಲೇ ಭಪ್ಪರೆ ಹುಡುಗಾ! ನೀನೇ ಭೈರಿ ಭಾದ್ದೂರ!"

"ಪಕ್ಕನೆ ಸ್ವಾಮಿರಾಚಾರ್ಯರ ದೊಡ್ಡಿಯಲ್ಲಿ 'ಧುಡುಂ' ಎಂದೂ 'ಸತ್ತೈನ' ಎಂದೂ ಸದ್ದಾಯಿತು; ಇಬ್ಬರೂ ಮೇಲ್ಮಾಳಿಗೆಯೇರಿವರು

ಇತ್ತ ತಂದೆಮಗಳಿಬ್ಬರು ದೊಡ್ಡಿಯಲ್ಲಿ ಧಾವಿಸಿ ಬಂದರು. ಭುಸುಗುಟ್ಟಿದ ಕರಿನಾಗರವು ಮೋರಿಯಲ್ಲಿ ಮಾಯವಾಯಿತು. ಕಲ್ಲಪ್ಪನು ಅರೆಜೀವವಾಗಿ ಬಿದ್ದಿದ್ದನು; ಗೋಡೆಯಿಂದುರುಳಿದಾಗ ಕಲ್ಲಿಗೆ ಅಪ್ಪಳಿಸಿ ಒಡೆದ ತಲೆಯಿಂದ ರಕ್ತವು ಮೋರಿತುಂಬಿ ಹರಿದಿತು. ತಂದೆಮಗಳಿಬ್ಬರೂ ಹಗದಗುಟ್ಟಿ ನಡುವಾಗ ತಾನೇ ಆವನ ಮುಖವೆಲ್ಲ ಮಸಿಹೂಸಿತು; ಯಾರನ್ನಾದರೂ ಕೂಗಬೇಕೆಂದರೆ ಇಬ್ಬರಿಗೂ ಧೈರ್ಯ ಸಾಲದು. ಇದನ್ನೆಲ್ಲ ಸದ್ದಿಲ್ಲದೆ ನೋಡಿದ ಗುಂಡಪ್ಪ ಧೊಂಡಪ್ಪ ಇಬ್ಬರು ಮೆಲ್ಲಗೆ ಆಚಾರ್ಯರ ಬಾಗಿಲ ತಟ್ಟಿದರು. 'ಪೋಲೀಸರೇ' ಎಂದು ಗಾಬರಿಯಾಗಿ ಬಾಗಿಲ ತೆರೆದರು

"ಹೆದರಬೇಡಿ" ಎಂದು ಹಗುರಾಗಿ ನುಡಿದು ಇಬ್ಬರೂ ಒಳಗಾದರು; ಕದವು ಮುಚ್ಚಿತು.

* * * *

ಗುಂಡಪ್ಪ:—"ಹಂ; ತಡಮಾಡಬೇಡಿ; ನಾವು ಹೇಳಿದಂತೆ ನಡೆದರೆ ನಿಮ್ಮಿಬ್ಬರಿಗೂ ಕ್ಷೇಮ."

ತಂದೆಯು ಮಗಳನ್ನು ನೋಡಿದನಷ್ಟೆ.

ಗುಂಡಪ್ಪ:—“ಅನ್ಯಥಾ ಭಾವಿಸಬೇಡಿ; ಸುಬ್ಬು ಹೇಗೋ ನಾನು ಹಾಗೆಂದು ತಿಳಿಯಿರಿ; ಇನ್ನು ನೀವೋ? ಅನಾಯಾಸವಾಗಿ ಧೋಂಡಪ್ಪನ ಕುದುರೆಯಿದೆ. ಬೆಳಗಾಗುವಷ್ಟರಲ್ಲಿ ನಮ್ಮ ಸೂಗಳ್ಳಿ ಸೇರಬೇಕು. ನಾಳೆ ಸಾಕ್ಷಿಯ ಪ್ರಸಂಗವೊದಗಿದರೆ ನೀವು ಇಂದು ನಮ್ಮೂರಲ್ಲಿ ಇದ್ದಿರಿ ಎಂದು ನಾನೇ ನುಡಿಯುವೆನು.”

“ಹಾಗಾದರೆ ಸುಶೀಲೆಯೂ ನಮ್ಮ ಜೊತೆಗೇ ಇರಲಿ”

ಗುಂಡಪ್ಪ:—“ಅಲ್ಲ ಸ್ವಾಮಿ! ” ನೀವಿಬ್ಬರೂ ಒಂದೇ ಸ್ಥಳದಲ್ಲಿದ್ದರೆ ಅನುಮಾನಕ್ಕೆ ಬಹುರೀತಿಯ ಆಸ್ಪದ ನಾನು ಇವಳನ್ನು ನಮ್ಮ ಧೋಂಡಪ್ಪನ ಮನೆಯಲ್ಲಿ ಕೆಲಕಾಲ ಸುಖರೂಪವಾಗಿರುವಂತೆ ವ್ಯವಸ್ಥೆ ಮಾಡುವೆನು”

“ಬಿಡು ಗುಂಡ್ಯಾ! ಇವರ ಮುಕ್ತಿಗೆಂದು ಬಂದ ನಮಗೆ ಬಂಧನವಾದೀತು.”

“ತಡೆ ಧೊಂಡಪ್ಪಾ! ಹೌಹಾರಿರುವಾಗ ಯಾರಾದರೂ ಹೀಗೆ ಮಾಡುವುದು ಸಹಜ ಹುಂ—ಸ್ವಾಮಿ! ಎಂದವನೆ ಆಚಾರ್ಯರನ್ನು ಬಲವಂತವಾಗಿ ತನ್ನ ಮನೆಗೆ ಕರೆದೊಯ್ದನು. ಸುಶೀಲೆಯು ತಂದೆಯನ್ನು ಮೂಕಳಂತೆ ಹಿಂಬಾಲಿಸಿದಳು.

ಸ್ವಾಮಿರಾಚಾರ್ಯರ ಮನೆಗೆ ಬೀಗ ಬಿತ್ತು.

ಊರು ಬಿಟ್ಟು ಒಂದು ಹರದಾರಿ ಎಲ್ಲರೂ ಒಟ್ಟಾಗಿ ಬಂದರು. ಅಲ್ಲಿ ಮುಳ್ಳಾಪುರಕ್ಕೊಂದು ಸೂಗಳ್ಳಿಗೊಂದು ೨ ಹಾದಿಗಳು ಒಡೆದಿವೆ.

ಏನೇನೊ ಎನಿಸಿದರೂ ಈ ವರೆಗೆ ಮೂಕಿಯಾದ ಸುಶೀಲೆ ತಂದೆಯ ಕೊರಳಿಗೆ ಬಿದ್ದಳು. “ಅಪ್ಪಾ! ಎಲ್ಲಿಗೆ ಹೋಗಲಿ? ಇತ್ತ ಬಾವಿ, ಅತ್ತ ಕೆರೆ,” ಎಂದು ಉಸಿರಟ್ಟುವಂತೆ ಅತ್ತಳು.

ದುಷ್ಕಾಳದ ಪಿಡುಗಿನಲ್ಲಿ ಯಾವ ಪಾಡು ತೋರದೆ ಕಪಿಲೆಯನ್ನು ಕಟುಕರ ಪಾಲು ಮಾಡುವವನಂತೆ ಆಚಾರ್ಯರು ತೀರ ಹತಬಲರಾಗಿದ್ದರು. ಎದುರಿನ ವ್ಯಕ್ತಿಗಳು ಅವರಿಗೆ ಹಾಗೆ ಕಂಡರೋ ಏನೋ ಅವರ ಕಂಣುಗಳು

ಕಂಪಡರಿದವು; ಥರಥರ ನಡುಗಿದಾಗ ತೂಕ ತಪ್ಪಿ ಆವರು ಅಂಗಲಾಚಿ ಬಿದ್ದರು.

"ಅಪ್ಪಾ!" ಎಂದು ಮಗಳೂ ತಂದೆಯ ಮೇಲೆ ಬಿದ್ದಳು.

"ಏಳು ಸುಶೀಲೇ!" ಎಂದು ಧೋಂಡಪ್ಪನು ಆತುರದಿಂದ ಅವಳ ಕೈ ತಟ್ಟಿದನಷ್ಟೆ. ಆ ಸ್ಪರ್ಶದಿಂದ ಸುಶೀಲೆಯ ಸರ್ವಾಂಗವೂ ಕೆಂಡಕೆಂಡವಾಯಿತು; ಅವಳ ಕಂಗಳು ಸಿಗಿನಿಗಿಯಾಗಿ ಹೊಳೆದವು; ಆಗ ಅವಳು ಹೆಂಗಸಲ್ಲ—ಹೆಬ್ಬುಲಿಯಂತೆ ಅಬ್ಬರಿಸಿದಳು.

ಅದರ ಪ್ರತಿಧ್ವನಿಯು ಗುಡ್ಡದಲ್ಲಿ ಅಡಗಿತಷ್ಟೆ.

ಗುಂಡಪ್ಪ:—"ಇತ್ತ ಬಾ ಧೋಂಡಪ್ಪಾ! ಆಕಳಿಗೂ ಕೋಡುಂಟು."

ಎಚ್ಚರಗೊಂಡು ಮತ್ತಷ್ಟು ಬಲಹೀನರಾದ ಆಚಾರ್ಯರು "ಗುಂಡಪ್ಪಾ! ನೀನೆನ್ನ ಸುಬ್ಬು, ಅಲ್ಲವೆ?" ಎಂದರು.

ಗುಂಡಪ್ಪ:—"ಸ್ವಾಮಿಾ! ನಾನು ಏನು ಹೇಳಬೇಕೋ ಹೊಳೆಯದು ಬೇಗ ಈ ವಾದ್ಯಂತವನ್ನು ಮುಗಿಸಿರಿ "ಸಹಿಸಲಾಮತ ತೊಪಗಡಿಪಚಾಸ' ಹೋಹದ್ದುಗಳು ಸುಳಿದಾಡುತಿವೆ ತಾವು ಬೇಗ ಸೂಗಳ್ಳಿಯನ್ನು ಸೇರಿಕೊಳ್ಳಿ ತಮ್ಮ ಮಾತೂ ಹಾಗಿರಲಿ, ಈ ಪೋಡಿ ಪೋಲೀಸರ ಸೆರೆಯಲ್ಲಿ ಸುಶೀಲೆ ಸಿಕ್ಕರೆ—"

"ಹಾಯ್; ಹೋಗು ಮಗು! ಹೆತ್ತ ಮಾತ್ರಕ್ಕೆ ನಿನ್ನ ಹಣೆಯ ಬರೆಹವನ್ನು ತಪ್ಪಿಸಬಲ್ಲೆನೇ" ಎಂದು ಮಗಳನ್ನು ಮುದ್ದಿಟ್ಟಾಗ ಆಚಾರ್ಯರು ಅರ್ಧಮರ್ಧ ಹುಚ್ಚರೇ ಆಗಿದ್ದರು.

ಎರಡಾಗಿ ಒಡೆದ ಆ ಹಾದಿಯಲ್ಲಿ ತಂದೆಮಗಳಿಬ್ಬರೂ ಒಬ್ಬರನ್ನೊಬ್ಬರು ಒಡೆದುಕೊಂಡರು.

ಅರ್ಧ ಹಾದಿ ನಡೆದಿದ್ದರೋ ಇಲ್ಲವೋ ಆಚಾರ್ಯರು ಕೊನೆಗೆ ತುಂಬಾ ಭ್ರಾಂತರಾದರು, ಏನೇನೋ ಎಣಿಸಿದರು; ಕಣ್ಣಿಗೆ ಏನೇನೋ ಕಟ್ಟಿದಂತಾಗಿ ಕುದುರೆಯಿಂದ ಕೆಳಗುರುಳಿದರು; ಹುಣ್ಣುಹುಣ್ಣಾದ ಅವರ ಕಾಯದಲ್ಲಿ ಚೂಪಾದ ಹತ್ತೆಂಟು ಕಲ್ಲುಗಳು ಪ್ರವೇಶ ಮಾಡಿದುವು. ಆದರೂ "ಮಗೂ! ಮಗೂ! ಸುಶೀಲಾ! ನೀನೆಲ್ಲಿ? ನಾನೆಲ್ಲಿ? ಏನಾಯಿತು! ಅಯ್ಯಯ್ಯೋ!"

ಎಂದು ನರಳಿದರು; ಗೋಳಿಟ್ಟರು; ಇದಕ್ಕೂ ತೃಪ್ತಿಹೊಂದದೆ ಮತ್ತೆ ಬಡಬಡಿಸತೊಡಗಿದ್ದರು. "ಅಯ್ಯೋ! ಇತ್ತ ಗುಡ್ಡ; ಅತ್ತ ಗುಡ್ಡ; ಹೌದು ಸುಶೀಲೇ! ನಾನು ಇಲ್ಲಿ—ಈ ದರಿಯಲ್ಲಿ ಬಾ; ಬೇಗ ಬಾ; ಎಲ್ಲಿ? ಎಲ್ಲಿ ನನ್ನ ಮಗು? ಅಯ್ಯೋ! ಅವಳಿಗೂ ಇತ್ತ ಗುಂಡಪ್ಪ; ಅತ್ತ ಧೊಂಡಪ್ಪ ನೀನೂ ಸೆರೆಯಲ್ಲಿ! ಹಾ, ಇದು ನಮ್ಮ ಬದುಕ—ಅಬ್ಬಬ್ಬಾ! ಈ ಕಲ್ಲು ಬೆನ್ನುಹುರಿಯನ್ನೆ ಹರಿದಿತ್ತೇನು? ನನ್ನ ಬದುಕು ಮುಗಿದಿತ್ತೇ! ಇದು ಬದುಕೇ!" ಎಂದು ಒಂದೇ ರೀತಿ ಹಾಡನ್ನು ತೋಡುತೋಡುವುದರಲ್ಲಿ ಅವನ ಧ್ವನಿಯು ಅಡಗಿತು ಆದರೂ ಆ ಗುಡ್ಡದಲ್ಲಿ ರಾತ್ರಿಯ ಆ ಸಮಯಕ್ಕೆ ಈಗಲೂ "ಇದು ಬದುಕೇ! ಇದು ಬದುಕೇ!" ಎಂಬ ರಾಗಧ್ವನಿಯು ಕೇಳುತಿದೆಯಂತೆ.

---

## ೧೧

## ಕಲಿಕಾಲ

"ಅಯ್ಯೋ! ಪಾಪ, ಸ್ವಾಮಿರಾಚಾರ್ಯರು ಕೊನೆಗೆ ಸಿಕ್ಕಿಬಿಟ್ಟರೆ?"

"ಮಾಡುವುದೇನು ಧೊಂಡ್ಡಪ್ಪಾ! ಹುಚ್ಚಬ್ರಾಹ್ಮಣನು ನಮ್ಮನ್ನು ಬಿಟ್ಟವನು ಸೂಗಳ್ಳಿಗೆ ಹೋಗದೆ ಮರಳಿ ಬೆಳಗಾಗುವಷ್ಟರಲ್ಲಿ ತನ್ನ ಮನೆಯಲ್ಲಿದ್ದನಂತೆ. ಕಲ್ಲಪ್ಪನ ಕೊನೆಯನ್ನು ತಿಳಿದು ಊರಿಗೆ ಊರೇ ಹಳಹಳಪಟ್ಟು, ಸ್ವಾಮಿರಾಚಾರ್ಯನೇ ಆರೋಪಿಯೆಂದು ಹೇಳಿತಂತೆ."

"ಹಾಗಾದರೆ ಈಗ ಪೋಲಿಸರು ಅವರ ಮಗಳನ್ನು ಹುಡುಕುವುದರಲ್ಲಿರಬೇಕು; ಏನು ಮಾಡಬೇಕೋ ಗುಂಡ್ಯಾ?"

ಪಕ್ಕದ ಕೋಣೆಯಲ್ಲಿನ ಸುಶೀಲೆ ಕೇಳುವಂತೆ ನುಡಿದರು;

ಬಾಗಿಲಿಗೆ ಹೊರ ಚಿಲಕವಿದ್ದಿತೆಂದು ರೊಚ್ಚಿಗೆದ್ದ ಸುಶೀಲೆ 'ಧಾಡ್ ಧಾಡ್' ಎಂದು ಸದ್ದುಮಾಡಿದಳು.

"ಸುಶೀಲೇ! ನಿನ್ನ ಅಂಬೋಣವೇನು?' ಬಾಗಿಲತೆರೆಯುತ್ತ ಧೊಂಡಪ್ಪನೇ ಗಟ್ಟಿಯಾಗಿ ಕೇಳಿದನು

"ಬೇಗ ನನ್ನನ್ನು ನಮ್ಮಪ್ಪನ ಬಳಿಗೆ ಹೋಗಗೊಡಿರಿ," ಎಂದಷ್ಟೆ ಗದರಿಸಿದಳು.

ಗುಂಡಪ್ಪ :—"ಸುಶೀಲಾ! ಆಚಾರ್ಯರು ಈಗ ನಮ್ಮೆಲ್ಲರಿಗೂ ಬಹಳ ದೂರದಲ್ಲಿ; ನಿನಗೂ ಅದೇ ಪಾಶವು ಬೇಕೇನು?"

"ಹೌದು; ಹೌದು; ಹೌದು."

"ಅದು ಮೊದಲು ಸ್ವಲ್ಪ ನನ್ನ ಮಾತಿಷ್ಟು ಕೇಳು. ಅಲ್ಲಿ ನೀನು ಹೋಗಿ ಏನು ಮಾಡಬಲ್ಲೆ? ತಾನೊಬ್ಬನಲ್ಲದೆ ನೀನು ಅಲ್ಲಿನ ಪಾಶದಲ್ಲಿ ಸಿಲುಕುವುದನ್ನು ಕಂಡು ವೃದ್ಧನಿಗೆ ನಾಳಿನ ಸಾವು ಇಂದೇ ಕಟ್ಟಿಟ್ಟದ್ದಲ್ಲವೆ? ಹೇಳು; ಅಲ್ಲಿಗೆ ಹೋಗಿ ಪಿತೃದ್ರೋಹ ಬಯಸುವೆಯೊ? ಇಲ್ಲೇ ಇದ್ದು ಆತನ ಮುಕ್ತಿಯನ್ನು ಬೇಡುವೆಯೊ?"

ಕಿಂಕರ್ತವ್ಯಮೂಢಳಾದ ಅಬಲೆಯು ಮೂಗೆಯಷ್ಟೆ.

ಗುಂಡಪ್ಪ :—"ಕೇಳು, ಸುಶೀಲೆ! ರವಿಪುರದ ಅಮೀನಸಾಬರು ನನ್ನ ಸಹಚಾರಿಗಳು"

ಹತಾಶಳಾದ ಸುಶೀಲೆಗೆ ಆಸೆಯು ಬಿಸಿಲುಗುದುರೆ ಕಂಡಿತು.

"ಆದರೂ ಧೊಂಡಪ್ಪ! ನಮ್ಮ ಸೋಟವನ್ನೂ ಸ್ವಲ್ಪ ಸಡಿಲು ಮಾಡಬೇಕಾದೀತು."

"ನಿಜ; ದುಡ್ಡೆಂದರೆ ಕಲ್ಲುದೇವರೂ ಬಾಯಿ ತೆರೆಯುವನು"

"ಆದರೆ ಧೊಂಡೂರಾಯರೇ! ಎಲ್ಲಾ ಸೋಗು ಬಂದೀತು—ಈ ದುಡ್ಡಿನ ಸೋಗು....." ಧೊಂಡಪ್ಪನು ಸುಶೀಲೆಯೆಡೆ ನೋಡಿದನೆಂದು "ಅಯ್ಯೋ ಪಾಪ—ನಿರ್ಗಂಧ ಪುಷ್ಪ ಆವಳು. ಏನು ಸುಶೀಲೇ! ನಾನು ಹೇಳುವುದೇ ವಾಸ್ತವವಲ್ಲವೇ?" ಎಂದೆನ್ನುವಾಗಲೇ ಧೊಂಡಪ್ಪನನ್ನೆ ಬೇಡಿಕೊಳ್ಳುವಂತೆ ಸೊನ್ನೆ ಮಾಡುವನು.

"ಹೌದು; ಧೊಂಡೂರಾಯರಲ್ಲದೆ ಮತ್ತಾರು ಕಾಪಾಡಬೇಕು" ಎಂದು ನುಡಿಯಬೇಕಾಯಿತೆಂದು ನುಡಿದಳಷ್ಟೆ; ಅದರೆ ಇದಕ್ಕೆ ಮೊದಲೇ ಸಾವು ಬಂದಿದ್ದರೆ ಎಷ್ಟು ಲೇಸಾಗಿತ್ತು ಎಂದೂ ತನ್ನ ಜನ್ಮವನ್ನೇ ಶಪಿಸಿದಳು.

"ಅಂತೂ ನನ್ನ ಗಂಟಲಿಗೇ ಕೈ ಹಚ್ಚಿದೆ, ಗುಂಡ್ಯಾ!"

“ ಮತ್ತೆ ನೋಡು ಸುಶೀಲೆಯ ಸಲುವಾಗಿ—”

“ ಅಯ್ಯೋ! ಮೊನ್ನೆ ರಾತ್ರಿ ತಾನೇ ಕಂಡಿದ್ದೇನಯ್ಯಾ ಈ ಹೆಬ್ಬುಲಿಯನ್ನ—ಅಬ್ಬಬ್ಬಾ!—”

“ ಅದು ಆ ನೋವಿನ ಮೂಲಕವೋ ಧೊಂಡಪ್ಪಾ! ಹೀಗೆ ಹಂಗಿಸಿ ಕೋಮಲೆಯನ್ನು ನೋಯಿಸಬೇಡ ”

“ಹಾಗಾದರೆ ಹೇಳು ಗುಂಡಪ್ಪಾ! ಸುಮಾರು ಎಷ್ಟು ಬೇಕಾದೀತು?”

“ನನಗೂ ಅಮೀನ ಸಾಹೇಬರಿಗೂ ಸ್ನೇಹದ ಮುರವತ್ ಇದೆ. ಎಂತಲೂ ಇಟ್ಟುಕೊ. ಆದರೂ ಒಂದೆರಡಕ್ಕೇನು ಸಾಧ್ಯವಲ್ಲ ರೂಪಾಯಿ ಐನೂರಕ್ಕೆ ಕಡಿಮೆಯಾಗಕೂಡದು.”

“ ಅಬಬಾ! ಅಷ್ಟೆಲ್ಲಿಂದ ತರಬೇಕಪ್ಪಾ!” ಬೆಚ್ಚಿದವನಂತೆ ಧೊಂಡಪ್ಪನು ನುಡಿದನು.

“ ಸುಶೀಲೆಯ ಸಂತೋಷಕ್ಕಾಗಿ ಏನಾದರೂ ಮಾಡಬೇಕಪ್ಪಾ!” ಧೂರ್ತ ಗುಂಡಪ್ಪನು ಬಲವಂತವಾಗಿ ಹೇಳಿದನು.

ಆಗ ಸುಶೀಲೆಯು ಕಣ್ಣು ಮುಚ್ಚಿದಳು! ಅಂದಿನಿಂದ ಇಂದಿಗೂ ನಡೆದ ಸಂಗತಿಗಳ ಚಿತ್ರಗಳನ್ನೆ ನೋಡಿದಳು! ಅಂದು ಕಲ್ಲಪ್ಪನೊಂದಿಗೆ ಹೋರಾಡಿದಾಗ ಕೊನೆಗೆ ಅವನ ಕಾಲ್ತುಳಿತದಲ್ಲಿ ತಾನು ಅಬಲೆಯಾದಳೆಂದು ಮನಗಂಡಳು; ತನಗಾಗಿ ಅದೆಂಥ ಅವಮಾನ, ಆಪತ್ತುಗಳಿಗೆ ಗುರಿಯಾಗಿ ತನ್ನನ್ನು ಕಟ್ಟಿಕೊಂಡು ಕಾಡೆನ್ನದೆ ಕಷ್ಟವೆನ್ನದೆ ಪಂಢರಪುರದ ಹಾದಿಯನ್ನು ನಡೆದ ಪಿತೃಹೃದಯವನ್ನು ಕಂಡಳು; ಆ ಅನಾಧಬಾಲಿಕಾಶ್ರಮವು ಅವಳ ಕಣ್ಣಿಗೆ ಕಟ್ಟಿತು............

“ ಆಗಲಿ; ಗುಂಡ್ಯಾ! ಸುಶೀಲೆಯ ಸಂತೋಷಕ್ಕಾಗಿ ಮನೆಮಾರು ಒತ್ತೆ ಇಟ್ಟಾದರೂ ಹಣಕೊಡುವೆನು ”

“ ಸುಶೀಲೆಯು ಮುಚ್ಚಿದ ಕಣ್ಣು ಚುಚ್ಚಿದಂತಾಗಿ ಬಿಚ್ಚಿದುವು; ಕಂಬನಿ ಕೊಚ್ಚಿದುವು.

“ ಅಂತೇ ಸುಶೀಲಾ! ನೀನು ಅಬಲಾ,” ಕೊನೆಗೆ ತನಗೆ ತಾನೇ ಸಮಾಧಾನ ಹೇಳಿದಳು.

"ಹಾಗಾದರೆ ಈಗ ಸದ್ಯಕ್ಕೆ ನೂರು ರೂಪಾಯಿಗಳನ್ನು ತೆಗೆದುಕೊ, ಗುಂಡ್ಯಾ!" ಎಂದು ಒಂದು ನೋಟು ಕೊಟ್ಟು ಧೊಂಡಪ್ಪನು ಉಪಕಾರದ ಹೊರೆಯನ್ನು ಹೊರಿಸುವಂತೆ ಸುಶೀಲೆಯೆಡೆಗೆ ದಿಟ್ಟಿಯನ್ನಿಟ್ಟನು.

ಅವಳ ನೋಟದಲ್ಲಿಯೂ ಕೃತಜ್ಞತೆಯ ಭಾವವಿತ್ತು.

* * * *

ರವಿಪುರದ ಅದೇ ಚಿನ್ನಹನುಮನ ಗುಡಿ. ಅಲ್ಲಿ ಅಂದಿನಂತೆ ಮುದರಕಲ್ಲ ಮಧ್ವಾಚಾರ್ಯರ ಸನ್ನಿಧಾನದಲ್ಲಿ ಬ್ರಾಹ್ಮಣರ ಗುಂಪು.

ನೆರೆದವರಲ್ಲಿ ಒಬ್ಬನು:—"ಅದು ಹಾಗೇ ನಡದಿತೆಂದು ನಾನು ಅಂದೇ ಹೇಳಲಿಲ್ಲವೆ?"

ಇನ್ನೊಬ್ಬನು:—"ಖಂಡಿತ; ಇಲ್ಲದಿದ್ದರೆ ಹಾಗೆ ಒಮ್ಮೆಗೆ ಆಚಾರ್ಯರು ಮುಗಳನ್ನು ಕಟ್ಟಿಕೊಂಡು ಪಂಢರಪುರಕ್ಕೆ ಏಕೆ ಹೋದರು?"

ಮತ್ತೊಬ್ಬನು:—"ಇದೇ ಕಲಿಕಾಲ; ಮಹಾಸ್ವಾಮೀ! ಇವರಿಬ್ಬರ ಪಾತಕ ಬಡ ಬ್ರಾಹ್ಮಣನಿಗೆ ಮೂಲನಾಯಿತು."

"ಅಜೀ ಖುತೂತ-ರಸಾ! (ಪೋಸ್ಟಮನ್!) ನಮ್ಮದೇನಾದರೂ ಇದೆಯೆ?" ಎಂದು ಅಲ್ಲೇ ಕುಳಿತಿದ್ದ ಗುಡಿಯ ಪೂಜಾರಿಗಳು ಕೇಳಿದರು.

ತನಗೆ ಬೇಕಿದ್ದ ವಿಳಾಸ ಇಲ್ಲಿ ತಿಳಿಯಬಹುದೆಂದು ಅವನು ಈ ಗುಂಪಿನತ್ತ ಬರುತ್ತಲೇ "ನಿಮ್ದೇನೂ ಇಲ್ರಿ ಸಾಮೀ! ಆದ್ರೆ ಈ ಪತ್ರ ಬಂದು ಎರಡ್ಮೂರು ದಿವ್ಸ ಆದ್ವು. ನಮ್ಮ ಸಮಾಚಾರ ಮನೀಗೆ ಬೀಗ ಆಯ್ತೀ........"

"ಓ! ಈಗ ಅದನ್ನು ವೈಕುಂಠಕ್ಕೆ ಕಳಿಸಬೇಕು. ಎಲ್ಲಿ ನೋಡೋಣ"

ಆ ಕವರು, ಅದರ ಮಾಟ, ಅದರ ಮೇಲಿನ ಗಾಳಿಬುಂಡಿಯ ಚಿತ್ರ ಇವೆಲ್ಲ ನೋಡಲಿಕ್ಕೆ ಮಧ್ವಾಚಾರ್ಯರೊಬ್ಬರುಳಿದು ಎಲ್ಲರೂ ಮೊಣಕಾಲೂರಿ ತಲೆಗೆ ತಲೆಯನ್ನು ಬಡಿದುಕೊಂಡರು.

"ತರ್‍ರಿ ಸಾಮಿ! ಭಾಳ ದೂರಿನ ಪತ್ರ ಇದು. ನೀವೆಷ್ಟು ತಲೆಬಡಿದುಕೊಂಡ್ರು ಅದ್ರಾಗಿನ ಮಜ್ಕೋರು ಸ್ವಲ್ಪೇ ನಿಮ್ಮ ತಲಿಗೆ ಹಿಡಿಸ್ತಾಯಿತೆ?" ಎಂದವನೆ ಅಲ್ಲಿಂದ ಹೊರಟನು.

"ಬಹಳ ಮಾಡಿ ಸುಬ್ಬುನ ಪತ್ರ ಅದು. ಹೀಗೆಂಗೆ ಹೋದಂತೆ ಇದೆ; ಕುಲಗೆಟ್ಟ ಮಗನಿಂದ ನಮ್ಮ ಸ್ವಾಮಿರಾಚಾರ್ಯರಿಗೆ ಸತ್ತರೂ ಸುಖವಾಗಲಿಲ್ಲ. ಅಪುತ್ರಸ್ಯ ಗತಿರ್ನಾಸ್ತಿ ಎಂಬುದಕ್ಕೂ ಇದು ಹೀನವಾದುದು, ಅಲ್ಲವೆ?" ಎಂದನೊಬ್ಬನು

ಮಧ್ವಾಚಾರ್ಯ:—"ಎಲ್ಲವೂ ಆತನ ಸಂಕಲ್ಪ; ಅಂತೂ ಈ ಕಲಿಕಾಲದಲ್ಲಿ ಸಜ್ಜನರಿಗೆ ಸುಖವಿಲ್ಲ ಶ್ರೀಹರಿ!" ಎಂದು ದೇವರನ್ನ ಕೂಗಿದರು.

---

## ೧೨

## ಏಕಾಕಿ

ಉಸ್ಮಾನಿಯಾ ವಿದ್ಯಾಪೀಠದ ಹಿಂದೂ ವಿದ್ಯಾರ್ಥಿಗಳ ವಸತಿ-ಗೃಹದ ಕರ್ನಾಟಕ ಕ್ಲಬ್ಬಿಗೆ ಶರತ್ಕುಮಾರನೇ ಈ ವರ್ಷ ಜನರಲ್ ಸೆಕ್ರೆಟರಿ ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಇವನು ಬೇಕಾದವನು; ಬಿಡುವು ಸಿಕ್ಕಾಗ ಈತನ ಕೋಣೆಯಲ್ಲಿಯೇ ನಮ್ಮ ಕನ್ನಡ ವಿದ್ಯಾರ್ಥಿಗಳ ಗುಂಪು

ಸರ್ವಸಾಮಾನ್ಯವಾಗಿ ಎಲ್ಲರೂ ಕನ್ನಡ ಮಾತನಾಡುವವರಿದ್ದುದರಿಂದ ಇಲ್ಲಿ ಯಾವ ವಾದವೂ ಕನ್ನಡದಲ್ಲೇ ನಡೆಯುವುದು; ನಮ್ಮ ನುಡಿಯ ಚಿತ್ರ ವಿಚಿತ್ರ ಸ್ವರೂಪವನ್ನೂ ನಾವು ಇಲ್ಲಿ ಕಾಣಬಹುದು.

"ಏನಯ್ಯಾ! ಈ ಕನ್ನಡಿಗರನ್ನು ಎಷ್ಟು ಕೊಂಡಾಡಿದರೂ ಸಾಲದು. ಮೊನ್ನೆ ನಾನು ಬೊಂಬಾಯಿಗೆ ಹೋಗಿದ್ದೆನಲ್ಲಾ! ಆಗ ವೆಲ್ಕಂ ಹೋಟಲಿನಲ್ಲಿ ಒಂದು ಹಸ್ತಪತ್ರಿಕೆಯನ್ನು ಕಂಡೆ. ಅದರ ತಲೆಕಟ್ಟಿನಲ್ಲಿ 'ದಿ ಮೈಸೂರು ಎಪ್ಲೋಯೀರ್ಸ' ಎಂದು ಓದಿದ ಮಾತ್ರಕ್ಕೆ "ಅಯ್ಯೋ! ನಮ್ಮ ಕನ್ನಡ ಜನವೇ ಎಂದೆನಿಸಿತು"

"ಅದೇಕೋ?" ಎಂದೊಬ್ಬನು ಕೇಳಿದನು.

"ಏಕೆಂದರೇನಯ್ಯಾ! ಅದೇ ಬೊಂಬಾಯಿಯಲ್ಲಿ ಬರೋಡೆಯವರೆಷ್ಟು ಜನರಿಲ್ಲ? ಕೊಲ್ಲಾಪುರದವರೆಷ್ಟು ಮಂದಿಯಿಲ್ಲ? ಇಂದೂರವರೆಷ್ಟಿಲ್ಲ? ಇವ

ರೆಲ್ಲರಿಗೂ ಒಂದೇ ಆಗಿ ಅಭಿಮಾನಾಸ್ಪದವಾದ ಸಂಸ್ಥೆಯೆಂದರೆ 'ದಿ ಮಹಾರಾಷ್ಟ್ರ ಎಸೋಶಿಯೇಶನ್'"

ಮತ್ತೊಬ್ಬನು:—"ಇಷ್ಟೇ ಅಲ್ಲ; ಮೊನ್ನೆ ನಾನು ಬೆಂಗಳೂರಿಗೆ ಹೋದಾಗ 'ಏನಯ್ಯಾ! ನಿಮ್ಮ ಕಡೆಗೂ ಕನ್ನಡ ಉಂಟೇನು?" ಎಂದು ಕೇಳಿದವರೆಷ್ಟೋ ಹೇಳಲಾರೆ. ಇದೇನು ಕನ್ನಡನಾಡಿನ ಬಗ್ಗೆ ಇರುವ ಸಂಕುಚಿತ ದೃಷ್ಟಿಯ ಮೂಲಕವೋ ಅಜ್ಞಾನಕಾರಣವೋ ತಿಳಿಯದು."

ಈ ವರೆಗೂ ಸುಮ್ಮನೆ ಕೇಳುತ್ತಿದ್ದ ಹಾಸನದ ಆರ್. ಪಿ. ಕೃಷ್ಣಯ್ಯನಿಗೆ ಇದು ಸಹಿಸದಾಯಿತು.

"ಕಂಡಿದ್ದೇನಯ್ಯಾ! ನಿಮ್ಮ ಜಂಭ ಸಾಕುಮಾಡಿ ಕಲ್ಬುರ್ಗಿಯಲ್ಲಿ ನಮ್ಮ ಚಿಕ್ಕ ಮಾವ ಪೋಸ್ಟಮಾಸ್ಟರನಿದ್ದಾನೆ ಆತನನ್ನು ಕಾಣಲಿಕ್ಕೆಂದು ನಾನು ಕಳೆದ ಕ್ರಿಸ್ತಮಸದಲ್ಲಿ ತಾನೇ ಅಲ್ಲಿಗೆ ಹೋಗಿದ್ದೆ. ಅಲ್ಲಿ ನೂರಕ್ಕೆ ತೊಂಬತ್ತು ಜನರ ಮಾತು ಕನ್ನಡ; ಆದರೆ ನೂರಕ್ಕೆ ಒಂಬತ್ತರಷ್ಟಾದರೂ ಜನರಿಗೆ ಕನ್ನಡದ ಓನಾಮ ಗೊತ್ತಿಲ್ಲ ಅವರ ಭಾಷೆಯೋ? ಅಬಬಾ! ಬೇಡಪ್ಪ! ಈ ಜನರು ನಮ್ಮ ಕನ್ನಡ ಬಳಿಸುವುದು ಕೂಡ ಬೇಡ ಎಂದೆನಿಸುವುದು. ಒಟ್ಟಿಗೆ ನಿಮ್ಮ ಜನ, ನಿಮ್ಮ ನುಡಿ, ಇವನ್ನು ಕಂಡರೆ ನಮಗೆ ಹೇಗೋ ಎನಿಸುವುದು."

ಇನ್ನೊಬ್ಬನು:—"ಅಂತೇ ಈ ಹೈದ್ರಾಬಾದಿನಲ್ಲಿ ಇಪ್ಪತ್ತು ಸಾವಿರಕ್ಕೆ ಮೀರಿದ ಕನ್ನಡಿಗರಿದ್ದರೂ ನಾವು ಬೇರೆ, ನೀವು ಬೇರೆ; ಹೀಗಾಗಿ ಇಲ್ಲಿಯೂ ಒಂದು ಕನ್ನಡ ಶಾಲೆಯಿದೆ ಎಂಬ ಅರಿವೂ ಇಲ್ಲದೆ ನಮ್ಮವರು ತಮ್ಮ ಎಳೆ ಮಕ್ಕಳನ್ನು ಬೇರಲ್ಲಿಗೆ ಕಳಿಸುವರು."

ಮತ್ತೊಬ್ಬನು:—"ಹೈದ್ರಾಬಾದಿನ ವಿಚಾರ ಹಾಗಿರಲಯ್ಯಾ! ಇಡೀ ಸಂಸ್ಥಾನದಲ್ಲಿ ಕನ್ನಡಿಗರ ಸಂಖ್ಯೆ ಇಪ್ಪತ್ತು ಲಕ್ಷದಷ್ಟಿದ್ದರೂ ನಮ್ಮ ನಾಲ್ಕು ಜಿಲ್ಲೆಗಳು ಸರಕಾರಿ ದಫ್ತರದಲ್ಲಿ ಹೇಳ ಹೆಸರಿಲ್ಲದೆ ಅಡಗಿವೆ ತೆಲಂಗಾಣಾ ವಿಭಾಗದಲ್ಲಿ ಇಷ್ಟು, ಮರಾಠವಾಡದಲ್ಲಿ ಇಷ್ಟು ಹಂಚಿಹೋಗಿವೆ.

ಶರತ್ಕುಮಾರ:—"ಹೌದು; ಗೆಳೆಯರೇ! ಕನ್ನಡಿಗರ ಪಾಡು ಇಷ್ಟೊ ಎಂತ ಹೇಳಲಿಕ್ಕಾಗದು. ಅರಮನೆಯ ನುಡಿಯಾಗಿರುವ ಮೈಸೂರು ಸಂಸ್ಥಾನ

ಪ್ರೊಂದುಳಿದು, ಉತ್ತರ ಕರ್ನಾಟಕವು ದಕ್ಷಿಣ ಮಹಾರಾಷ್ಟ್ರ; ದಕ್ಷಿಣಕಾನಡಾ, ಕೊಂಕಣನಾಲು; ಬಳ್ಳಾರಿ, ಅನಂತಪುರ, ಆಂಧ್ರಸೀಮೆ; ಕೊಡಗು, ನೀಲಗಿರಿ ತಮಿಳು ಸೀಮೆ; ಇದು ನಮ್ಮ ಪಾಡು ಎಂದು ಎಷ್ಟುಸಲ ನೆನೆದರೂ ಕಡಮೆಯೆ! ತಾಯ್ನಾಡು ತಾಯ್ನುಡಿಗಳ ಬಗ್ಗೆ ನಮಗಿರುವ ಅಲಕ್ಷ್ಯವೇ ನಮ್ಮ ಈ ಹೀನಸ್ಥಿತಿಗೆ ಮುಖ್ಯವಾದ ಕಾರಣ. ಹೀಗಿರುವಾಗ ಸಂಸ್ಥಾನದಲ್ಲಿ ನಾವು ಅಷ್ಟು ಲಕ್ಷ ಇಷ್ಟು ಲಕ್ಷ ಎಂಬ ನಮ್ಮ ಕೂಗು ನಿರರ್ಥಕವೇ ಸರಿ. ನಮಗೆ ಅದಿಲ್ಲ, ಇದಿಲ್ಲ ಎಂದು ನಮ್ಮ ಆಡಳಿತವನ್ನು ದೂರುವುದಂತೂ ತೀರ ಅನ್ಯಾಯ. ಆಡಳಿತದವರು ನಮ್ಮ ಯಾವ ಬೇಡಿಕೆಯನ್ನು ಮನ್ನಿಸಿಲ್ಲ? ಮನೆಯಲ್ಲಿ ಕನ್ನಡ ಮಾತನಾಡಿಯೂ ಮಕ್ಕಳಿಗೆ ಮರಾಠಿ ಶಿಕ್ಷಣವೇ ಲೇಸು. ವ್ಯಾಸಪೀಠದಲ್ಲಿ ಮರಾಠಿ ಭಾಷಣವೇ ಬೇಡ, ವೈಶ್ಯ ವೀರಶೈವರಂಥ ನಮ್ಮ ವರ್ತಕ ಬಾಂಧವರಿಗೆ ಮರಾಠಿ ಲೆಕ್ಕಪತ್ರನೇ ಭೂಷಣ, ಎಂದು ಕಲ್ಬುರ್ಗಿಬಿದರ ದಂಥ ದೊಡ್ಡ ಜಿಲ್ಲೆಯ ನಮ್ಮವರೇ ನಮ್ಮ ಮನೆಯ ಮೇಲೆ ಮುನಿದಿರುವಾಗ ಆಡಳಿತಗಾರರ ತಪ್ಪೇನು? ಇಂಥದರಲ್ಲಿಯೂ ಇದೇ ಐದಾರು ವರ್ಷದ ಕೆಳಗೆ ಕಲ್ಬುರ್ಗಿಯು ಅಪ್ಪಟ ಕನ್ನಡಜಿಲ್ಲೆಯೆಂದು ಸಿದ್ಧಮಾಡಿದ ಒಬ್ಬಿಬ್ಬರು ಪುಣ್ಯಾತ್ಮರ ಸಾಹಸನೀತಿಗೆ ಬೆಲೆಕೊಟ್ಟು ನಮ್ಮ ಆಡಳಿತಗಾರರು ಅಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣವನ್ನು ಆರಂಭ ಮಾಡಲಿಲ್ಲವೆ? ಕನ್ನಡ ಟ್ರೇನಿಂಗ್ ಕಾಲೇಜ್ ತೆರೆಯಲಿಲ್ಲವೆ? ಇಷ್ಟಾದರೂ ಅಲ್ಲಿನ ನಮ್ಮ ವರ್ತಕ ಬಾಂಧವರು ಇಂದಿಗೂ 'ಲಕೀರತೇ ಫಕೀರ' ಎಂಬಂತೆ ಅವರ ವ್ಯವಹಾರವೇನು ಮರಾಠಿಯಿಂದ ಕನ್ನಡಕ್ಕೆ ಬಂದಿಲ್ಲ ಕೆಟ್ಟು ಬಯಸುವ ಪ್ರಜೆಗಳಿಗೆ ಸಹಾಯುವೆಸಗಲು ಇರುವ ಆಡಳಿತವು ದಿಟ್ಟಯಿಲ್ಲದೆ ಕುರುಡು ಬಾಳಿನಲ್ಲಿ ಬೆಡಗು ತಿಳಿಯುವ ಕನ್ನಡಿಗ ರಿಗೆ ಮಾಡಬೇಕಾದರೂ ಏನು?" ಅವನ ಮುಖವು ಮ್ಲಾನವಾಗುವುದು.

ಅವರಲ್ಲಿ ಒಬ್ಬನು ಇದನ್ನು ಕಂಡು "ಬನ್ನಿರಯ್ಯಾ! ನಾಳೆಗೆ ಇದೇ ವಿಷಯವು ಸಾಗಲಿ; ಈಗ ಊಟಕ್ಕೆ ಹೊತ್ತಾಯಿತು. ಈ ದಿವಸ ಹೊಸ ಅಡಿಗೆಯವನೂ ಗೊತ್ತಾಗಿಲ್ಲವೇ? ನೋಡೋಣ; ಇವನು ಹೇಗೆ ಮಾಡು ವನು!" ಎಂದು ನುಡಿಯುವುದೇ ತಡ, ಎಲ್ಲರೂ ಒಂದಾಗಿ ಊಟದ ಮನೆಗೆ ಸಾಗಿದರು.

ಈ ಅಡಿಗೆಯವನು ಬೇರೆ ಯಾರೂ ಅಲ್ಲ; ಈಗಾಗಲೇ ಪರಿಚಿತನಾಗಿರುವ ಗುಂಡಪ್ಪ; ತನ್ನ ಗೆಳೆಯ ಘೊಂಡಪ್ಪನ ಬಾಯಲ್ಲಿ ಮಣ್ಣುಹಾಕಿ, ಅಬಲೆ ಸುಶೀಲೆಯನ್ನು ಓಡಿಸಿಕೊಂಡು ಈಗ ಹೈದ್ರಾಬಾದಿನಲ್ಲಿ ಅಡಿಗೆಯಲ್ಲಿ. ಇವನು ಅಂಥ ವ್ಯಾಖ್ಯಾನ್ನ ಮಾಡಲರಿಯನಾದರೂ ಇವನ ವ್ಯಾಖ್ಯಾನಕ್ಕೆ ಎಂಥ ಪಂಡಿತನೂ ಮೋಸ ಬೀಳಬೇಕು. ಆದರೆ ಬಿಸಿರಕ್ತ ನವಯುವಕ ವಿದ್ಯಾರ್ಥಿ ಸಂಘಕ್ಕೆ ಬೇಕಿರುವುದು ರುಚಿಯಾದ ಅಡಿಗೆ. ಅಂತೇ ಅಂದು ಸಂಜೆಗೇ ಇವನು ವಸತಿಗೃಹಕ್ಕೆ ಶರಣು ಹೊಡೆಯಬೇಕಾಯಿತು. ಕೈಲಿದ್ದ ಕಾಸೆಲ್ಲವನ್ನೂ ಹೈದ್ರಾಬಾದ ಕಾಣುವುದರಲ್ಲಿ ಕಳೆದಿದ್ದನು. ತಾನು ಕಾಚಿಗೂಡದ ಧರ್ಮಶಾಲೆಯಲ್ಲಿ ಬಿಟ್ಟು ಬಂದ ಸುಶೀಲೆಗೆ "ಹೀಗಾಯಿತು" ಎಂದು ತಿಳಿಸುವುದು ಹೇಗೆ? ಎಂಬ ವಿಚಾರದಲ್ಲಿ ತೊಡಗಿದನು. ಇನ್ನೇನು ಮಾಡಬೇಕು ಎಂದು ತಲೆತುರಿಸುತ್ತ ಬೀದಿಯಲ್ಲಿ ಒಂದು ಬಸ್ಟಾಂಡಿಗೆ ಆತು ನಿಂತನು.

ಶರತ್ಕುಮಾರನು ಸಿನೆಮಾಕ್ಕೆಂದು ಹೊರಟವನು ಇವನನ್ನು 'ಏನಯ್ಯಾ! ಇಲ್ಲಿ?" ಎಂದು ಸಹಜವಾಗಿ ಕೇಳಿದನು.

"ಎಲ್ಲಿ ಹೋಗಬೇಕು ರಾಯರೆ? ಮನೆಗೆ ಹೋದರೆ ಅಲ್ಲಿ ನಮ್ಮಾಕೆ ಮುಂಜಾವಿನಿಂದ ಊಟವಿಲ್ಲದೆ ಈಗ ಹಸಿದ ಹೆಬ್ಬುಲಿಯಾಗಿರಬಹುದು"

ಶರತನು ನಕ್ಕನು ಗುಂಡಪ್ಪನಿಗೆ ಯತ್ನವು ಕೈಗೂಡುವುದು ಎಂದೆನಿಸಿತು.

"ಮನೆಗೆ ಹೋಗುವುದೇ ಇಲ್ಲವೇನು?"

"ನಿಮ್ಮಂಥ ದಾತೃಗಳು ಸಹಾಯವಾದರೆ ಇಲ್ಲಿಂದ ಅಲ್ಲಿಗೇ ಜಿಗಿಯುವೆನು."

"ಮನೆಯೆಲ್ಲಿ ಮಾಡಿರುವೆ?

"ಲಾಲದರವಾಜೆಯಾಚೆಯಲ್ಲಿ ರಾಯರೇ!" ಎಂದು ಮೂರು ಹರದಾರಿ ದೂರಿನ ಓಣಿಯನ್ನು ಹೇಳಿದನು."

"ಅಬಬಾ, ಇಷ್ಟುದೂರದಲ್ಲಿ ತಾನೆ? ತೆಗೆದುಕೊ,' ಎಂದು ನಾಲ್ಕಾಣೆ ಅವನ ಕೈಯಲ್ಲಿಟ್ಟು ಸಾಯಕಲ್ಲಿನ ಹ್ಯಾಂಡ್ಲ ತಿರುಗಿಸಿದನು.

"ರಾಯರೇ! ಇನ್ನೊಂದು ವಿನಂತಿ—ಆದರೆ ಬೇಡ, ತಮಗೆ ನಾನು ಹೊಸಬ."

"ಏನಯ್ಯಾ ! ಮತ್ತೇನು ?"

"ಇನ್ನೇನು ದುಡ್ಡಿನಗಿಡ್ಡಿನ ವಿಷಯವಲ್ಲಾ–ಆದರೆ–ಅಲ್ಲಾ–ಹೇಳಿದೆ ನಲ್ಲಾ—ಮನೆಯಲ್ಲಿ ಆಕೆ ಹಸಿದು ಕಕ್ರಾಂತಳಾಗಿದ್ದಾಳೆ ಎಂದು; ಇವಾಗ ಇಲ್ಲಿಂದ ಅಲ್ಲಿಗೆ ಹೋಗಲಿಕ್ಕೆ ಒಂದು ತಾಸು ವೇಳೆ ಬೇಕು." ಮುಖದಲ್ಲಿ ಕನ್ನಡ ಊಕಾರದ ಭಾವ ತೋರಿ, ಕೈ ತಿಕ್ಕುತ್ತ ನಿಂತನು.

ಆಸೆ ತುಂಬಿದ ನೋಟದಿಂದ ತನ್ನ ನಾಯಕಲ್ಲನ್ನೇ ಅವನು ನೋಡುತ್ತಿರುವುದನ್ನು ಕಂಡು "ಛೀ ಹುಚ್ಚಾ ! ನಿನ್ನ ಊರು ಯಾವುದು, ನೀನು ಇರುವುದೆಲ್ಲಿ ? ಎಂದು ಶರತನು ನುಡಿಯುತ್ತಿರುವಾಗಲೇ ಅಲ್ಲೇ ಸಿನೆಮಾಕ್ಕೆ ಆರಂಭವಾಯಿತು. ಅವನ ಆದೈನ ನೋಡಿ ಶರತನೂ ವಿಚಾರ ಮಗ್ನನಾದನು. ಸೀಳು ಸಿಕ್ಕರೆ ನೂಲು ನುಂಗುವ ಗುಂಡಪ್ಪನು ಅಂಥ ಬೀದಿಯಲ್ಲಿಯೂ ಅವನ ಕಾಲಿಗೆ ಬಿದ್ದನು.

"ಹಾಗಾದರೆ ಮುಂಜಾನೆ ಎಂಟು ಗಂಟೆಯೊಳಗಾಗಿಯೇ ತರಬೇಕು, ಗುಂಡಯ್ಯಾ ! ನಿನ್ನ ಮನೆ ನಂಬರು ಏನು ?

"ನಂಬರ 'ಅಲೀಫ ಸ್ಕೈಂಸಟ "

"ಹೋಗು; ಬೇಗ ಹೋಗಿ ಅವಳ ಆತ್ಮವನ್ನು ಶಾಂತಮಾಡು."

ಎಂದವನೆ ಹೊತ್ತಾಯಿತೆಂದು ಜವುಪ್ರದ ಮಹಾಲಿಗೆ ನಡೆದನು.

ಇತ್ತ ಗುಂಡಪ್ಪನು ಹುಟ್ಟಿ ನಾಯಕಲ್ಲ ಹತ್ತಿದವನಲ್ಲ. ಆದರೂ 20 30 ರೂಪಾಯಿಗಳ ಆಸ್ತಿ ಕೈನೇರಿತೆಂಬ ಹಿಗ್ಗಿನಲ್ಲಿ ಅದನ್ನು ಹಿಡಿದುಕೊಂಡೇ ನಡೆದನು. ಅಲ್ಲಿಂದ ದೂರ ಚಾರಮಿನಾರದ ವರೆಗು ಬಂದನು. ತಂಬಿಗೆ, ಥಾಲಿ, ಉಂಬುವ ಹಿತ್ತಾಳೆ ತಾಟುಬಟ್ಟಲ ಮುಂತಾದ ಚಿಲ್ಲರೆ ಸಾಮಾನುಗಳ ಅಡಕಲವಿಟ್ಟ ಅಂಗಡಿಯನ್ನು ನೋಡಿ ನಿಂತನು; ಅಡಿಗೆಗಾಗಿ ಬಂದಿದ್ದನಾದರೂ ಅವನ ಉಡುಪು ತೊಡಪುಗಳ ಥಾಟಿಗೇನು ಕಡಿಮೆಯಿದ್ದಿಲ್ಲ. ಟಿಂಗ್ ಟಿಂಗ್ ಎಂದು ತಾನೇ ಬಾರಿಸಿದ ಗಂಟೆಯ ನಾದಕ್ಕೆ ತನ್ನ ಮನಸ್ಸನ್ನೇ ಕುಣಿಸುತ್ತ ಅಂಗಡಿಯೊಳಕ್ಕೆ ಬಂದನು. ಅಂದು ಅಂಗಡಿಯಲ್ಲಿ ಯಜಮಾನನ ಸ್ಥಳದಲ್ಲಿ ಆತನ ಹಿರೀಮಗ ದಿಲೀಪನಿದ್ದನು; ಇವನೂ ಶರತ್ಕುಮಾರನೂ ಬಿ. ಎಸ್‌ಸಿ. ಕ್ಲಾಸಿನಲ್ಲಿ ಸಹಪಾಠಿಗಳು.

ಗುಂಡಪ್ಪನು ತನ್ನ ವ್ಯವಹಾರದ ಸೂಚನೆಯನ್ನು ಮಾಡಿದನು.

ದಿಲೀಪನು ಸಾಯಕಲ್ಲಿನಲ್ಲಿ ಕಣ್ಣಿಟ್ಟು ನೋಡಿದನು

"ಪೋಲಿಸ್! ಇಧರ ಆವ!"

"ಚಲ್ ಹರಾಮುಝಾದೆ" ಎಂಬ ಕೂಗಾಟ ಕೇಳಿ, ಅಂಗಡಿಯಲ್ಲಿ ಜನರು ಕಿಕ್ಕಿರಿದರು.

ಶಿತಾಫಲ ಮಂಡಿಯಲ್ಲಿದ್ದ ತಂದೆಯು ಬೇಗ ಬರಹೇಳಿದ್ದನೆಂದು ದಿಲೀಪನು ಅಂಗಡಿ ಮುಚ್ಚಿದನು; ಆಗಲೇ ಗೆಳೆಯನಿಗೆ ಸುದ್ದಿ ತಿಳಿಸಬೇಕೆಂದವನು ಮುಂಜಾನೆ ಶಿತಾಫಲ ಮಂಡಿಯಿಂದ ಬರುವಾಗ ತಾನೇ ತಿಳಿಸಿದರಾಯಿತೆಂದು ಸಾಗಿದನು.

ಮೂರ ಸಂಜೆಯಾದರೂ ಗುಂಡಪ್ಪನು ಮರಳಿ ಬರಲಿಲ್ಲವೆಂದು ಕಾತುರಳಾದ ಸುಶೀಲೆಯು ಕಾಚೀಗುಡದಲ್ಲಿನ ಧರ್ಮಶಾಲೆಯ ಬಾಗಿಲಿಗೆ ಕಣ್ಣಿಟ್ಟು ಕುಳಿತಳು. ಆಗಾಗ ಬೀದಿಗೆ ಬಂದು ಭವ್ಯನಗರದ ವಿಶಾಲ ಬೀದಿಗಳನ್ನು ಬರಿದಾಗಿ ನೋಡುತ್ತಿದ್ದಳು "ಅಬ್ಬಾ! ಈ ಜಗತ್ತು ಎಷ್ಟು ವಿಶಾಲ!" ಎಂದು ಎನಿಸಿ ಬೆರಗಾದಳು. ಈ ವರೆಗೂ ಅವಳು ಕಂಡಿದ್ದ ಸಂಜೆ ಇರುಳುಗಳೇ ಬೇರೆ. ಈ ದಿನ ಕಾಣುತ್ತಿರುವುದೇ ಬೇರೆ ದೀಪದ ಕೆಳಗೆ ಕತ್ತಲೆ ಎಂದು ತಿಳಿದಿದ್ದ ಅವಳಿಗೆ ಈಗ ಅಲ್ಲಿಯೂ ತಿಳಿಬೆಳಕು ಹೊಳೆದು ತಾನೊಂದು ಹೊಸ ಜಗತ್ತಿನಲ್ಲಿ ಕಾಲಿಟ್ಟಳೆಂದು ಎನಿಸಿತು. ಬೆಳಗಿನಿಂದ ಒಳಗೇ ಇದ್ದು ಬೇಸರಗೊಂಡಿದ್ದಳೆಂದು "ನೋಡೋಣ; ಇನ್ನೆರಡು ಹೆಜ್ಜೆ ಮುಂದೆ ಹೋಗೋಣ" ಎಂದು ನಡೆಯುವಷ್ಟರಲ್ಲೇ ಅದಕ್ಕೂ ಅಗಲಾದ ಬೀದಿಗೆ ಬಂದಳು. ಈಚೆಯಿಂದ ಆಚೆಗೆ ದಾಟಬೇಕೆಂದಳು; ಒಡನೆ ಒಂದಕ್ಕೊಂದು ಹಾಯುವವೋ ಎಂಬಂತೆ ಭರದಾಟ ಓಡಿದ ಮೋಟಾರುಗಳು, ಫಾಂಫರ್ರ್ ಎಂದು ಅದೊಂದು ಆರ್ಭಟವನ್ನೆ ಎಬ್ಬಿಸಿದುವು. ಅವಳ ತವರೂರು ರವಿಪುರವು ಅಂಥ ಹಳ್ಳಿಯಲ್ಲವಾದ್ದರಿಂದ ಅವಳು ಮೋಟಾರು ಸಾಯಕಲ್ಗಳನ್ನು ನೋಡಿದ್ದಳಷ್ಟೆ. ಆದರೆ ಪ್ರಚಂಡ ಹಾವಳಿಯನ್ನೆಬ್ಬಿಸುವ ಯಂತ್ರವಾಹನಗಳ ಈ ಪ್ರಮಾಣವನ್ನು ಕಂಡದ್ದು ಅವಳ ಆಯುಷ್ಯದಲ್ಲಿ ಇದೇ ಮೊದಲನೆ ಸಲ.

"ಅಬಬಾ! ಇಂಥದರಲ್ಲಿಯೂ ಹಾದಿಯನ್ನು ಕಿಕ್ಕಿರಿದು ನಿರ್ಭಯವಾಗಿ ನಡೆದಿರುವ ಈ ಜನರಿಗೆ ಇವು ಇರುವೆ ಸಮಾನವಾಗಿವೆ. ಏನು ಜನ!

ಏನು ಜಾತ್ರೆ! ಈ ನೋಟ ನೋಡಿಯಾದರೂ ಇಲ್ಲಿ ಸುಖವಾಗಿ ಕಾಲ ಕಳೆಯಬಹುದು” ಎಂದುಕೊಂಡಳು. “ಅದೆಲ್ಲಾ ನಿಜ, ಆದರೆ ಈಗ ಇದನ್ನು ದಾಟುವುದು ಹೇಗೆ?” ಎಂದೂ ತನ್ನ ಸ್ಥಿತಿಯನ್ನು ಬಗೆದು ತಾನೇ ನಕ್ಕಳು. “ಛೆ, ಬಿಡು, ಪಟ್ಟಣದವರಿಗೂ ಯಮರಾಯನಿಗೂ ಬಹಳ ಗೆಳೆತನ, ಇಲ್ಲದಿದ್ದರೆ ಇಂಥಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡೇ ನಡೆಯಬೇಕು; ಈ ಜನರಿಗೆ ಧೈರ್ಯ ಸಾಹಸ, ಇವು ಅಂಗೈಮಣಿ—ಪರ್ವೆಯಿಲ್ಲ, ನನ್ನನ್ನು ಇಲ್ಲಿಗೆ ಕರೆತಂದು ಗುಂಡಪ್ಪನು ಒಂದು ರೀತಿ ಉಪಕಾರವನ್ನೇ ಮಾಡಿದನು. ನಾನೂ ಇವರೆಲ್ಲರಂತೆ ಧೀರಳಾಗುವೆನು; ಯಮನಿಗೂ ಅಂಜದೆ ಬದುಕಬಲ್ಲೆನು. ಈ ಧೈರ್ಯಸಾಧನೆಯು ಪಾಠಕ್ಕೆ ಈಚೆಯಿಂದ ಆಚೆಗೆ ಹೋಗುವುದರಲ್ಲೇ ಮೊದಲಾಗಲಿ,” ಎಂದವಳು ಸರಸರ ನಡೆದುಬಂದಳು “ಎಷ್ಟು ಸುಲಭವಾಗಿ ಕಣ್ಣುಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಬಂದುಬಿಟ್ಟೆ... ....ಇದೋ! ಇವಳೂ ನನ್ನಂತೆ ಹೆಂಗಸು; ಶಿಕ್ಷಣದ ಸಂಸ್ಕಾರದಿಂದ ಪುಣ್ಯವಂತಿ, ಎಷ್ಟು ಕಳೆವಂತಿಯಾಗಿದ್ದಾಳೆ! ಇವಳೆಲ್ಲಿ! ನಾನೆಲ್ಲಿ! ತುಲನೆಯಲ್ಲಿ ನಾನು ಪಾಸಂಗಕ್ಕೂ ಹತ್ತುವುದಿಲ್ಲ ಹೌದಮ್ಮಾ! ಓದು ಬರೆಹ ಕಲಿತು ಹೌದೆನಿಸಿಕೊಂಡವಳು ನೀನು; ಹಾದಿ ತಪ್ಪಿ ತೆಪ್ಪಗಾದ ತಬ್ಬಲಿ ನಾನು! ಕಾಣಲಿಕ್ಕೆ ಯೋಗ್ಯವಾದ ಬಾಳು ನಿನ್ನದು; ಕಾಣಬಾರದ್ದನ್ನು ಕಂಡು ಕಂಗೇಡಿಯಾದ ಜೀವನ ನನ್ನದು. ಖಂಡಿತ ನಾನೂ ಓದು ಕಲಿತವಳಾಗಿದ್ದರೆ ನನ್ನ ನೋವು, ನನ್ನ ಅನುಭವ ಅಥವಾ ಅನುಭೋಗವೇ ಸರಿ, ಇವುಗಳಿಂದ ಅವೇನೋ ಹಾವಳಿಗಳನ್ನು ತುಂಬಿಬಿಡುತ್ತಿದ್ದೆನು. ಅಮ್ಮಾ! ನೀವು ಹುಟ್ಟಿರುವ ಭೂಮಿಯಲ್ಲಿ ನನ್ನದೂ ಒಂದು ಜನ್ಮ!” ಎಂದು ಉಸಿರುಗರೆದು “ಈ ಜನ್ಮಚಿತ್ರವನ್ನೆ ಜಗತ್ತಿಗೆ ತೋರಿಸುತ್ತಿದ್ದೆನು. ಅಂತೂ ನಮ್ಮ ಶಾಂತಮ್ಮ ಮಾಸ್ತರತಿಯ ಪುಣ್ಯವೆಂದು ಕನ್ನಡ ಐದನೇ ಪುಸ್ತಕವನ್ನೇನೋ ಮುಗಿಸಿದ್ದೇನೆ, ಇಲ್ಲೇ ಕಾಲೂರಿ ನಿಂತರೆ ನನ್ನ ಬಾಳಿಗೂ ಬೆಳಕು ದೊರೆಯದ ಇದ್ದೀತೆ?” ಬಗೆಯುತ್ತಿರುವಾಗಲೇ ಚಿತ್ರವಿಚಿತ್ರ ಆಕಾರದಲ್ಲಿ ಹೊಳೆದ ಬಣ್ಣಬಣ್ಣದ ವಿದ್ಯುದ್ದೀಪಗಳನ್ನು ನೋಡಿದಳು; ಬೆರಗಾಗಿ ನಿಂತಳು. “ಯಾರ ಮನೆಯಿದು! ಕತ್ತಲಲ್ಲಿಯೂ ಈ ಮನೆಗೆ ಏನು ಕಣ್ಣುಗಳು! ಇದೇನು ಅಂಗಳವೊ? ತೋಟವೊ?” ಒಳಗೆ ಹೋಗಬೇಕೆಂದಳು; ಧೈರ್ಯ ಸಾಲದು.

"ಮಜೇದಾರ ಬಿರಾಯಿ," "ಗರಮ ಗರಮ ಚಿವುಡಾ" "ಮಸಾಲೇ ದಾರ್‌ಪಾನ" ಎಂದು ಹೋಗಿಬರುವವರನ್ನು ತಮ್ಮ ಕಾಲುಂಗಡಿಗಳಿಗೆ ಕರೆದ ಕೂಗಾಟ, ಯಾವ ಆತಂಕವಿಲ್ಲದೆ ಬಾಗಿಲೊಳಕ್ಕೆ ನುಗ್ಗುತ್ತಿದ್ದವರ ಉಲ್ಲಾಸ, ಇವನ್ನು ನೋಡಿ "ಹುಂ, ನಾನೂ ಹೀಗೆ ನುಗ್ಗಿದರಾಯಿತು"

ಆಗ ಅವಳಿಗೆ ರವಿಪುರ ಕೆರೆಯಂಗಳದಲ್ಲಿ ಕಂಡಿದ್ದ "ಬಾಯಸ್ಕೋಪ ಸಿನಿಮಾ" ನೆನಪಾಗಿ "ಅಬಬಾ! ಇದು ಸಿನೆಮಾಮನೆ! ಇಲ್ಲಿ ಆಟದ ಮನೆಗೆ ಕೂಡ ಇಂಥ ವೈಭವವೇ!" ಎಂದು ತೋಟದಲ್ಲಿ ಕುಳಿತಳು. ನೆರೆದ ಹೆಂಗಸರ ಗುಂಪನ್ನು ಕಂಡು "ಅಂತೂ ಹೆಂಗಸರಿಗೆ ಗಂಡಸರ ಭಯ ವಿಲ್ಲ" ಎಂದು ಒಂದರ ಹಿಂದೆ ಇನ್ನೊಂದಾಗಿ ಬಂದ ವಿಚಾರಗಳಲ್ಲಿ ಮಗ್ನ ಳಾದಳು. ಅಷ್ಟರಲ್ಲಿ ಮೊದಲನೆ ಪ್ರಯೋಗ ಮುಗಿದಿತೆಂದು ಒಳಗಿಂದ ಬಂದವ ರಿಂದಲೂ, ಹೊರಗಿಂದ ಒಳಗೆ ನುಗ್ಗಲು ಆತುರರಾದವರಿಂದಲೂ ಅಂಗಳ ತುಂಬಿತು. ಆ ಲಗೆಬಗೆಯ ಜನಸಂದಣಿಯು ಅವಳಿಗೆ ಅದೊಂದು ಉಲ್ಲಾಸದ ಸಂತೆಯಾಗಿ ಕಂಡಿತು. ಹುಚ್ಚಳಂತೆ ಅದನ್ನೆಲ್ಲ ನೋಡುತ್ತಿರುವಾಗ ತಾನೇ ಅಂಗಳವು ಬರಿದಾಗಿ ಅಲ್ಲೊಬ್ಬರು ಇಲ್ಲೊಬ್ಬರು ಅಲೆದಾಡುತ್ತಿದ್ದುದನ್ನು ಅರಿತು, ಇನ್ನು ಇಲ್ಲಿ ಕೂಡುವುದು ಥರವಲ್ಲ ಎಂದೆದ್ದಳು. ಬೀದಿಯಲ್ಲಿ ಜನರು ತಿರುಗಾಡುತ್ತಿರುವಷ್ಟರಲ್ಲಿ ಧರ್ಮಶಾಲೆಯನ್ನು ಸೇರಬೇಕೆಂದು ಹೊರಟಳು. ಬಾಗಿಲಲ್ಲಿ ಎರಡು ಹಂಡಬಂದ ನಾಯಿಗಳು "ವೌ ವೌ" ಎಂದು ಮೈಮೇಲೆ ಬಂದವು; ಅಂಜಿ ಹಿಂಜರಿದಳು. ಮುದುಕ ಆಳುಮಗನೊಬ್ಬನು ಅವನ್ನು ಬೆದರಿಸಿ "ಬಾ ಅಮ್ಮಾ! ಬಾ, ನಾಸಿದ್ದೇನೆ, ಅವು ಏನೂ ಮಾಡುವುದಿಲ್ಲ" ಎಂದು ಹಾದಿ ಕೊಟ್ಟನು.

ಈ ಧರ್ಮಶಾಲೆ ಎರಡು ಅಂಗಳಗಳು; ಹೊರಗಿನದನ್ನು ದಾಟಿ ವಿಸ್ತಾರವಾದ ಒಳಗಿನದರಲ್ಲಿ ಇಳಿದಳು ಸುತ್ತಲೂ ಚಚ್ಚೌಕವಾಗಿ ಕಟ್ಟಿದ ಹಜಾರದ ಅಂಕಣ ಅಂಕಣಕ್ಕೂ ತೂಗುಬಿಟ್ಟ ವಿದ್ಯುದ್ದೀಪದ ಬೆಳಕಿನಲ್ಲಿ ತನ್ನ ಸ್ಥಳಕ್ಕೆ ಬಂದಳು.

ಹುಟ್ಟಿದ ಮನೆಯಲ್ಲಿನ ತಂದೆಯ ಹರಿಕೀರ್ತನೆ, ಬ್ರಾಹ್ಮಣತಿಯ ಊರಾದ ರವಿಪುರದ ವಂದಿರ ವ್ಯಾಸಮಂದಿರಗಳಲ್ಲಿನ ಪುರಾಣ ಪುಣ್ಯಕಥೆ ಇವುಗಳ ಸಂಸ್ಕಾರವು ಅವಳಿಗೆ ಸಾಕಷ್ಟು ಇದ್ದಿತು; ಆದರೆ ಬಾಳಿಗೆ ಮೊದಲೇ

ಸುಜೆಕಂಡು ಕತ್ತಲೆಯು ಕೋಣೆಯಲ್ಲಿ ಬಂದು ಬಳಲಿದವಳು. ಕಲ್ಲಪ್ಪ ಗುಂಡಪ್ಪನವರ ಪಿಡುಗಿನಲ್ಲಿ ಆ ಯಾವತ್ತು ಸಂಸ್ಕಾರವನ್ನು ತಗಲಿದ್ದವಳಷ್ಟೆ

ಇಂದು ಅದೇಕೋ, ಇರುಳಲ್ಲಿ ಏಕಾಕಿಯಾಗಿದ್ದರೂ ಕೂಡ ಅವಳಿಗೆ ತಾನೊಂದು ಮುಕ್ತಜೀವ ಎಂದೆನಿಸಿತು. "ಏನು ಕಟ್ಟಿಸಿದ್ದಾನೆ ಮಾರಾಯಾ! ಹಾ ಎಂದು ದಣಿಯುವ ಲಗಿರುವ ಈ ಎಲ್ಲ ಜೀವಗಳ ತನಿಉಸಿರು ಈ ಭುವನದ ಅಂಕಣ ಅಂಕಣಕ್ಕೂ ಸೊಂಕುವುದು; ಇದೇ ಪುಣ್ಯಕ್ಷೇತ್ರ," ಎಂದು ತನ್ನ ಹರಕು ಜಮುಖಾನೆ ಹಾಸಿದಳು.

ಇದೀಗ ಗುಂಡಪ್ಪನನ್ನು ಮತ್ತೂ ನೆನೆದು "ಇನ್ನೂ ಬರಲಿಲ್ಲವಲ್ಲಾ!" ಎಂದ ಒಡನೆ "ಥೂ ನನ್ನ ಜನ್ಮ; ಇದೊಂದು ಪುಣ್ಯಕ್ಷೇತ್ರವೆಂದು ಮೈ ಚಾಚಿದಾಗ ಕೂಡ ಆ ಪಾಪಿಯು ಬರವನ್ನು ಬಯಸಿದೆನೆ! ಬೇಡ; ಈಗ ಅವನು ಬಂದರೂ ಕೂಡ 'ನನ್ನ ಹಾದಿಯನ್ನು ನಾನು ಕಂಡೆ' ಎಂದು ಹೇಳಿಬಿಡುವೆನು."

ಇದೇಹೊತ್ತಿಗೆ ಎಲ್ಲಾ ದೀಪಗಳು ಒಮ್ಮೆಗೇ ನಂದಿದುವು ಮತ್ತೂ ಕತ್ತಲೆ; ಇಂತು ಒಮ್ಮೆಗೇ ಕವಿದ ಕತ್ತಲೆಯು ಅವಳ ಮನಸ್ಸನ್ನು ಮತ್ತೂ ಕವಲಿಸಿತು. "ಅಪ್ಪಯ್ಯಾ! ಇದೇನು ಮಾಟ, ಇದು ಪಟ್ಟಣವೋ ಮಾಯಾಭೂಮಿಯೋ? ಆ ಬೆಳಕು, ಆ ಬೆಡಗು ಕಂಡು ನಾನು ಏಕಾಕಿ ಎಂಬುದನ್ನು ಕೂಡ ಮರೆತು ಮಲಗಿದೆ ಇನ್ನೆಲ್ಲಿಯು ಸಿದ್ದೆ; ಅಯ್ಯೋ! ನನ್ನಂಥ ಹುಚ್ಚಿ ನಾನೇ ಸರಿ; ಆ ಥಳಕು, ಆ ಪಳಕು, ಬರಿಕಣ್ಣಿನ ಹಬ್ಬ; ಜೀವದ ನೋವನ್ನು ಅದು ಸ್ವಲ್ಪೇ ಮಾಗಿಸಬಹುದು; ಅಲ್ಲಿ ಬಾಡಿಬೆಂದ ಜೀವಕ್ಕೆ ಇಲ್ಲಿ ಹಸಿ ಎಂದು ಅದೆಷ್ಟು ಎಣಿಸಿದೆ ಅದೆಲ್ಲ ಸುಳ್ಳು. ಇದೂ ಒಂದು ಮಾಯೆ; ಹಳ್ಳಿಯೇನು! ಪಟ್ಟಣವೇನು! ಒಂದರಲ್ಲಿ ಗುಬ್ಬಿ ಗೂಬೆಗಳ ವ್ಯವಹಾರ, ಇನ್ನೊಂದರಲ್ಲಿ ಘಟೋತ್ಕಚನ ವ್ಯಾಪಾರ! ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯವಿಲ್ಲ.

ಮತ್ತೂ ಕಣ್ಣುತುಂಬಾ ನೀರು; ಮತ್ತೂ ಒಳಗೆ ವಿಪರೀತ ಕಸುವಿಸಿ. "ಅವ್ವಾ! ಅವ್ವಾ!" ಎಂದು ಬುಸುಗುಟ್ಟಿ ಅತ್ತಳು; ಅಳುವಿನ ಔತಣ ಕಾಯುವೆ ತಾಮುಸವು ತಡಮಾಡದೆ ಬಂತು ಮಲಗಿದ್ದವಳು ಎದ್ದು ಕುಳಿತಳು ಅಂಜಿಕೆ ಬೆಚ್ಚಿಕೆ ಎಲ್ಲ ತೊರೆದವಳಂತೆ ಕುಳಿತಳು; ಆಗಿನ ಅವಳ ಮರು ಮರು ನೋಟ, ನೋಡಿದವರಿಗೇ ಅಂಜಿಕೆ ಬರುವಂತಿದ್ದಿತು.

"ಎಷ್ಟು ಅತ್ತರೂ ಅಷ್ಟೆ, ಅಳದ ದಿವಸ ಅದೊಂದೆಂಬುವನ್ನು ಕಾಣೆ. ಅಳದೆ ಬಾಳುವುದಾದರೆ ಬದುಕಬೇಕು; ಆಗದಿದ್ದರೆ ಈ ಜನ್ಮ ನೀಗಬೇಕು ಊಂಹುಂ—ವೃಥಾ ಜೀವ ಕೊಟ್ಟರೆ ಏನು ಬಂತು? ಬೀದಿಯಲ್ಲಿ ಸಾಯುವ ಬೆಕ್ಕು ನಾಯಿಗಳಂತೆ ನನ್ನನ್ನೂ ಎಳೆದು ಹಾಕುವರು ಹಾಗಂತೂ ನಮ್ಮ ಮಂದಿ ನನ್ನನ್ನು ಬದುಕಿರುವಾಗಲೇ ಬಾಡಿದ ಹೂ ಎಂದು ತುಳಿಯುತ್ತಿರುವರು. ನಮ್ಮ ಹೆಣ್ಣು ಜಾತಿಯೋ? ಪಾಪ ಗಂಡಸರು ನಕ್ಕರೆ ಅವರೂ ನಗುವರು; ಅವರು ಅತ್ತರೆ ತಾವೂ ಅಳುವರು ' ಬೇಡಿ, ಮಗಳನ್ನು ಆ ಕರಿ ರೋಗದ ವರನಿಗೆ ಕೊಡಬೇಡಿ' ಎಂದು ಅವ್ವ ಸೆರಗೊಡ್ಡಿ ಬೇಡಿದಳು 'ದೇವರು ದೇವರಿದ್ದಾನೆ, ಎಲ್ಲಾ ದೇವರ ಸಂಕಲ್ಪ, ಕೊಡಲಿಕ್ಕೆ ನಾನೆಷ್ಟರವನು!' ಎಂದು ಅಪ್ಪನು ನನ್ನನ್ನು ಹೆಣದ ಕೊರಳಿಗೆ ಕಟ್ಟಿದನು 'ಮಗಳು ದೊಡ್ಡವಳಾದಳು, ಎದೆಗಿಚ್ಚಾಗಿ ಕೂತಳು, ಜನರೇನೆಂದಾರು' ಎಂಬ ಭಯದಿಂದಲ್ಲವೆ ಅಪ್ಪನು ಆದಷ್ಟು ಶೀಘ್ರವಾಗಿ ನನ್ನ ಶುಭವನ್ನು ಬಯಸಿದನು ಅದೂ ಹೋಗಲಿ, ಮುಂದೆ ಬಂದ ಅಶುಭದಿಂದಾದರೂ ಎಚ್ಚರಗೊಂಡು ನನಗೆ ತಿಳುವಳಿಕೆ ಹುಟ್ಟುವವರೆಗೆ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನನ್ನನ್ನು ಕಾಪಾಡಬೇಕಿತ್ತು ಮತ್ತೇ 'ದೇವರು, ದೇವರು,' ಎಂತ ಕುಣಿದನೇ ಹೊರತು 'ನಾನು ವೃದ್ಧ, ಮಗಳ ಗತಿ ಏನು?'' ಎಂಬ ಯಾವ ವಿಚಾರವನ್ನೂ ಮಾಡಲಿಲ್ಲ. ಹೊನ್ನಷ್ಟೆ ಅಲ್ಲದೆ ಸ್ವಾರ್ಥಿಗಳು ರಚಿಸುವ ಹೋಳಿಯಲ್ಲಿನ ಕೆಂಡವೂ ಹೊಳೆಯುವುದೆಂಬುದನ್ನು ಕಣ್ಣಾರೆ ಕಂಡರೂ ಅಲ್ಲಿ ತಾನೂ ಬೆಂದನು, ನಾನು ಬಿದ್ದೆನು. ಇನ್ನು ಸುಬ್ಬಣ್ಣನೋ? ಓದಬೇಕು, ಓದಿ ಬೇಗ ಮುಂದಕ್ಕೆ ಬಂದು ಮುಪ್ಪಿನ ತಾಯ್ತಂದೆಗಳ ಪರಿಬಟ್ಲೆ ಕಳೆಯಬೇಕೆಂದು ಅಂಥ ಬಡತನ ಕೂಡ ಮರತು ಸುಖವಾಗಿ ಇರುವಾಗ ತಾನೇ ತಂಗಿಯ ಬವಣೆ ತಾಳದೆ ಊರಿಗೆ ಶರಣು ಹೊಡೆದನು; ಈಗ ಯಾವ ಊರಲ್ಲಿಯೋ? ಯಾವ ದೇಶದಲ್ಲಿಯೋ? ಹೀಗಿರುವಾಗ, ಅಂದಿನಿಂದ ಇಂದಿಗೂ ತಗ್ಗು ತೆವರುಗಳನ್ನು ಎಡತಾಕಿ ದುಷ್ಟ ದುರ್ಬಲರಿಗೆ ಅಗ್ರವಾಗಿರುವ ನಾನು ಇನ್ನು ಎಷ್ಟರ ನೆರೆಗ ಹೋಗುವುದೆಂತು?" ಏನು ಕಾಣದ ತಲ್ಲಣದುಬ್ಬಸದಲ್ಲಿ ಮತ್ತಷ್ಟು ತಾಪುಸಕ್ಕೇ ಎದೆ ಕೊಟ್ಟಳು

ಈಗಲಂತೂ ಅವಳ ತಲೆಯಲ್ಲಿ ಪಿಶಾಚಿಗಳು ಯಾವ ಕಟ್ಟೂ ಇಲ್ಲದೆ ಕುಣಿಯತೊಡಗಿದುವು

“ ಹಾಗಾದರೆ ಈಗ ನಾನೆಲ್ಲಿಗೆ ಹೋಗಬೇಕು ? ಈ ಹಾಳು ಗಂಡಸರ ಇರುವ ಭೂಮಿಯು ಎಲ್ಲಿಯನ್ನು ದಾಟಿ ಹೋಗಬೇಕು. ಅಲ್ಲಿ ಗಂಡಸ ಜಾತಿ ಎಂತ ಇರಬಾರದು. ನಮ್ಮ ರವಿಪುರದ ಬಂಗಾರಸಾನಿ, ತಾರಾಸಾ ರಂಗಾಸಾನಿ ಈ ಸಾನಿಗಳ ಜಾತಿಯಲ್ಲಿ ಗಂಡಸರು ಹೇಳ ಹೇಸರಿಲ್ಲದೆ ಇರುವರು ......ಥೂ! ಇವರ ಬಾಳಂತೂ ತುಂಬಾ ರೌರವದಲ್ಲಿ. ಈ ಖೂಳ ಪುರುಷ ಸಾನ್ನಿಧ್ಯವಿಲ್ಲದೆ ಇವರಿಗೆ ದಿವಸವೇ ಬೆಳಗುವುದಿಲ್ಲ. ಅಬಬಾ! ....ಎಂಥ ಹೇಸಿ,” ಎಂದಾಗ ಅವಳ ಮೈ ಝುಮ್ಮೆಂದಿತು. “ ಬೇಡ, ತಾಯೀ! ನನ್ನ ಹೆತ್ತ ವಳ ಹೊಟ್ಟೆ ತಣ್ಣಗಿರಲಿ; ಅಬಲೆಯೆನಿಸಿಕೊಂಡು ಮಾನವಪಶುಗಳ ಬ ಯಲ್ಲಿ ಸಿಕ್ಕು ನಿರ್ಬಲೆಯೂ ಆದೆ; ಇನ್ನು ದುರ್ಬಲೆಯಾಗಿ”.. ಥರಗುಟ್ಟಿ ನಡುಗಿದಳು. “ ಅಯ್ಯೋ! ಅಸಹಾಯನೇ !” ಎಂದು ಎರಡೂ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿದಳು ; ಏನೂ ತಿಳಿಯದೆ ಹಾಗೇ ಉರುಳಿದಳು ತಾಮಸದ ದಣಿವು ದೈನಕ್ಕೆ ಎಡೆಕೊಟ್ಟಿತು. ಕ್ಷಣನೊದಲು “ ದೇವರೇ ದೇವರೇ ” ಎಂಬ ತಂದೆಗೆ ತಾನೇ ಆರೋಪವಮಾಡಿದ್ದಳು ಈಗ ಅವನ್ನೇ ಮರೆತು “ ದೇವರೇ ! ನೀನೇ ಗತಿ ” ಎಂದು ಆ ಮಗ್ಗುಲಿಂದ ಈ ಮಗ್ಗುಲಿ ಹೊರಳಿದಳು ದೇವರು ಬಂದನೋ ಇಲ್ಲವೋ ತಿಳಿಯದು, ನಿದ್ರಮ್ಮನ ಮಾತ್ರ ಅವಳಿಗೆ ಜೋಯಿ ಜೋಯಿ ಎಂದಳು.

---

## ೧೩

## ಬೆಳಗು

“ ಎಷ್ಟು ವಿಶಾಲವಾಗಿ ಹಬ್ಬಿದೆ ಈ ಮರ! ಬೇರುಗಳು ಮರದ ಮೇಲ್ಭಾ ಗಕ್ಕೆ ತಾನೇ! ಮರವೊಂದೇ ಆದರೆ ನೆಲದಲ್ಲಿ ಇದರ ಶಾಖೆಗಳೇನು! ಅಂಗೈ ಯಗಲವಾಗಿ ಬೆಳೆದ ಎಲೆಗಳಿಂದ ತುಂಬಿ ಹಬ್ಬಿದ ಈ ಮರದಡಿಯಲ್ಲಿ ಖಚಿತ ವಾಗಿ ನನ್ನಂಥ ದಣಿದ ಜೀವಕ್ಕೆ ವಿಶ್ರಾಂತಿ! ಈ ಮರವು ಖಂಡಿತವಾಗಿ

ಈಗಲೂ ಇದಕ್ಕೆ ಚಿಗುರೆಲೆಗಳು; ಅಮ್ಮಾ! ಇನ್ನೂ ಬೆಳೆಯುತ್ತಲೇ ಇದೆ. ಅಂತೂ ಈ ಗಿಡಕ್ಕೆ ಆದಿ, ಅಂತ್ಯ, ಯಾವವೂ ಇಲ್ಲವೋ ಹೇಗೋ! ಇದಕ್ಕೆ ನೀರೆರೆಯುವ ತೋಟಿಪ್ಪನಾವನೂ ಯಾರು? 'ಮಗಳ ಬೆಡಗನ್ನು ನೋಡ ಬೇಕೆಂದರೆ ಇದೆಂಥ ದುಗುಡವಮ್ಮಾ!' ಎಂದು ಅಂದು ನನ್ನನ್ನು ಅಪ್ಪಿ ಅತ್ತಿಯಲ್ಲ ಅಪ್ಪಾ? ಇಲ್ಲಿ ಬಾರೇ! ಆ ಮುದುಕುಮನೆಯ ಆ ಹರಕು ಸಂಸಾರದಲ್ಲಿ ನರಳುವುದೇಕೆ? ಇಲ್ಲಿ ಬಾ; ಇಲ್ಲಿ ಎಷ್ಟು ಬೆಡಗೆಂದು ಹೇಳಲಿ!" 'ಹಾಯ! ಹೋಗು, ಮಗು! ಹೆತ್ತ ಮಾತ್ರಕ್ಕೆ ನಿನ್ನ ಹಣೆಯಬರಹ ತಪ್ಪಿಸ ಬಲ್ಲೆನೇ!' ಎಂದು ಭ್ರಮಿಷ್ಟರಾದಿರಲ್ಲವೆ ಅಪ್ಪಾ! ಇಲ್ಲಿ ಬನ್ನಿ! ಈ ಅರಳಿ ಗಿಡ ನೋಡಿ; ನೀವು ಕೂಗಿ ಕರೆದ ಆ ದೇವರಷ್ಟೇ ಮಹಾಪುರುಷನಾವನೋ ಈ ಗಿಡಕ್ಕೂ ಕಾವಲಿಯಾಗಿದ್ದಾನೆ; ಬನ್ನಿ ಅಪ್ಪಾ! 'ಆ ಮಹಾಪುರುಷನೆಲ್ಲಿ?' ಎಂದು ಈ ಎಲೆಗಳನ್ನು ಕೇಳಿ ತಿಳಿದುಕೊಳ್ಳಿ, ಈ ಅಶ್ವತ್ಥದಡಿಯಲ್ಲಿ ನಿನ್ನಂಥ ಭಾವಿಕನಿಗೂ ನನ್ನಂಥ.. .... "ಸುಶೀಲೆಯು ಬೆಚ್ಚಿ ಕಣ್ದೆರೆದಳು. "ಅದೇ ಮರದಡಿಯೇ ಇದು!" ಎಂದು ಅತ್ತಿತ್ತ ಕೈ ಆಡಿಸಿದಾಗ ಹರಕು ಜಮಖಾನೆಯ ಎಲೆಗಳು ತಪ್ಪಿದುವು; "ಅಯ್ಯೋ! ಅದು ಕನಸು" ಎಂದು ಖಿನ್ನಳಾದಳು.

## ಉದಯರಾಗ

"ಏಳೇಳಿ ಏಳೇಳಿರಯ್ಯಾ । ಬಾಳೆಮ್ಮ ಬೆಳಗುವ ಉದಯವಿದಯ್ಯಾ
ಅಂದಿನ ಅಘಗಳ ತಿಳಿದು । ಬೆಳಕಿನ ಹರಿಯಲ್ಲಿ ತೊಳೆದು ॥
ಹಿಂದಿನ ನೋವನೆ ಹುಗಿದು । ಇಂದಿನ ಸಾವನೆ ತುಳಿದು ॥
ಮುಂದಿನ ಬೆಡಗಿಗೆ ಮಣಿದು । ಮಂದಿರ ನಿಲಿಸೋಣ ಎಂದು ॥ "
॥ ಏಳೇಳಿ ॥

ಬೀದಿಯಲ್ಲಿನ ಹಾಡು ಮುಗಿಯುವಷ್ಟರಲ್ಲಿ ಸುಶೀಲೆಯು ಎದ್ದು ಕುಳಿತಳು; ಹಾಡಿನ ಧ್ವನಿಯು ಕೇಳಿಸದಂತಾಯಿತು. ಆದರೂ ಅವಳು ಅದನ್ನೆ ಧೇನಿಸಿದಳು; ಇಡೀ ಇರುಳು ಅತ್ತತ್ತು ಉರಿದ ಕಂಗಳಿಗೆ ಶುಕ್ರ ತಾರೆಯ ಕಿರಣಗಳು ತಾಕಿ ತಂಪು ಎನಿಸಿತು; ಒಡನೆ ಎದ್ದಳು. ಕೊಳಾಯಿಗೆ ಒಂದು ಕೈಕಾಲು ಮೊಗಗಳನ್ನು ತೊಳೆದುಕೊಂಡಳು. ಮರಳಿ ಬರುವಾಗ ಬಲ ಭಾಗದಲ್ಲಿನ ಚಿಕ್ಕದಾದ ಮಂದಿರ ಕಂಡಳು; ಬಾಗಿಲ ಮುಚ್ಚಿತ್ತಾದರೂ

ದರ್ಶನಕ್ಕೆಂದು ಬಿಟ್ಟ ಕಿಟಕಿಯೊಳಗಿಂದ ವಿದ್ಯುದ್ದೀಪದ ಬೆಳಕು ಕಂಡಳು. ಪಾವಟಿಗೆ ಹತ್ತಿ ಬಂದಳು ಬಾಗಿಲ ಮುಟ್ಟಬೇಕೋ ಹೇಗೋ ಎಂದು ಸಾವಧಾನದಿಂದ ನಿಂತು ಒಳಗಿನ ಮೂರ್ತಿಗಳನ್ನು ಕಂಡಳು ಇಲ್ಲಿನ ಈ ಮೂರ್ತಿಗಳು ಕೂಡ ಅಷ್ಟೇ ಮನೋಹರವಾಗಿವೆ ನೆಟ್ಟ ದಿಟ್ಟಿಯನ್ನು ಕದಲದೆ ನಿಂತು ಇಣಿಕಿ ನೋಡುವ ತವಕದಲ್ಲಿ ಬಾಗಿಲು ತಾಗಿತು

"ಅವ್ವಯ್ಯಾ ಗುಂಡಪ್ಪನ ಹರಕು ಹೊಲಸು ಹಾಸಿಗೆಯಲ್ಲಿ ಉರುಳಾಡಿದವಳು ಈ ಪವಿತ್ರ ಹೊಸ್ತಿಲ ತಾಗಿದೆನೇ?" ಎಂದು ಕಾತುರಗೊಂಡಳು. "ನೀರಲ್ಲಿ ಮುಳುಗೆದ್ದರೆ ಮಾತ್ರ ಅದನ್ನು ಮುಟ್ಟಲಿಕ್ಕೆ ಅರ್ಹಳಾಗುವೆನೇ!" ತನ್ನಷ್ಟಕ್ಕೆ ತಾನೇ ನಕ್ಕಳು "ಹಾಗಾದರೆ ಇಡೀ ಜನ್ಮ ನಾನು ಇಲ್ಲಿಗೆ ಬರಕೂಡದೆ? ರಾಮನು ಪತಿತಪಾವನನೆಂದೂ ಹೆಸರಾಗಿಲ್ಲವೆ?"

ಅಪರಾಧಿಯೆಂದು ಪಾಪಭ್ರಷ್ಟಳಾಗಿ, ಜಡಬಂಡೆಯಾಗಿ ಬಿದ್ದಿದ್ದ ಅಹಲ್ಯೆಯನ್ನು ಪಾವನಮಾಡಿದವನು ನೀನು, ರಾಮಾ! ಬಿರುಗಾಳಿಯಲ್ಲಿ ನೆಲಕ್ಕುದುರಿ ಇಲ್ಲಿಗೆ ಹಾರಿ ಬಂದ ಈ ಜೀವದ ಹೂ ನಿನ್ನ ಪವಿತ್ರ ಹೊಸ್ತಿಲದ ಸ್ಪರ್ಶದಿಂದ ಪುನಃ ಪರಿಮಳ ತುಂಬಿ ಅರಳಲಾರದೆ?

ಕಿಟಕಿಯಲ್ಲಿ ಮೊಗವಿಟ್ಟ ಸುಶೀಲೆಗೆ ಅದೊಂದು ಮೋದವೆ ಎನಿಸಿತು. ಒಡನೆ ಹಿಂದೆ ಅಡಿಯ ಸದ್ದು ಕೇಳಿ ಹಿಂಜರಿದು ನಿಂತಳು; ನಾಚಿಗೊಂಡಳು; ಮರಳಿ ತನ್ನ ಸ್ಥಾನಕ್ಕೂ ಬಂದಳು. ಇದನ್ನು ಕಂಡ ಯುವಕನು ವಿಸ್ಮಯವುಳ್ಳವನಾಗಿ ಅವಳು ತನ್ನ ಮೂಲೆಯನ್ನು ಸೇರುವವರೆಗೂ ನೋಡಿದನು. "ತರುಣಿ, ಇಂತು ಏಕಾಕಿ! ಏನಿದು? ಎಂದು ಅದೆಲ್ಲ ಒಂದು ಕಗ್ಗಂಟಾಗಿ ಕಂಡನು; ಸುತ್ತಲೂ ನೋಡಿದನು. ಮುದುಕ ಆಳು ಮಗನು ಮಾತ್ರ ಹೊರಗಿನಂಗಳದಲ್ಲಿ ಥಳ ಹಾಕುತ್ತಿದ್ದುದನ್ನು ನೋಡಿದನು. ಅವಳನ್ನು "ಯಾರು, ಇಲ್ಲಿ ಹೇಗೆ?" ಎಂದು ಕೇಳಬೇಕೆಂದನು. ಅವಳೊಂದು ಅಸಹಾಯ ಜೀವ ಎಂತಲೂ ಮನಗಂಡನು. ಅಲ್ಲೊಬ್ಬರು, ಇಲ್ಲೊಬ್ಬರು ಹಾಸಿಗೆ ಸುತ್ತುತ್ತಿದ್ದುದನ್ನು ನೋಡಿ ಎಂದಿನಂತೆ ಪ್ರದಕ್ಷಿಣೆಗೆ ಆರಂಭಮಾಡಿದನಷ್ಟೆ; ಅದು ಮುಗಿದೊಡನೆ ಅವಳನ್ನು ಮಾತಾಡಿಸಲೇಬೇಕೆಂದು ಹವಣಿಸಿದನು. ತನ್ನಂತೇ ತಂಗಾಳಿಯೂಟ ಉಂಡು ಅಲೆದಾಡಿ ದೇವರ ದರ್ಶನಕ್ಕೆಂದು ಇನ್ನಿತರರು ಬಂದರು; ಆಗ ಸಿರುವಾಯನೆಂದು ತಿರುಗಿದ ಯುವಕನು ಹಾದಿ

ಹಿಡಿದನಾದರೂ ಅವನ ಕುತೂಹಲ, ಕುತೂಹಲದ ತಲ್ಲಣ, ಇವನ್ನು ಕಂಡು ಏನೋ ಎನಿಸಿ ಸುಶೀಲೆಯು "ಸರಿ, ಇನ್ನು ಏನೇನು ನೋಡುವೆನೋ!" ಎಂದು ನಸುನಕ್ಕಳು; ನಸುಕು ಹರಿದಿತು.

---

೧೪

## ಸವಿಯೂಟ

ಎಂಟು ಗಂಟೆ ಮೀರಿದರೂ ಗುಂಡಪ್ಪನು ಸಾಯಕಲ್ಲ ತರಲಿಲ್ಲ ಎಂಬ ಅರಿವೂ ಇಲ್ಲದೆ ಶರತ್ಕುಮಾರನು ಈಗ ಎಂದು ಕಾಣದ ಒಳಗಿನ ಅಲ್ಲೋಲ ಕಲ್ಲೋಲವನ್ನೆ ಅನುಭವಿಸಿದನು.

"ಮಸ್ತಕದಲ್ಲಿ ಇದೆಂಥ ಹುಯಿಲಿಗೆ ಎಡೆಕೊಟ್ಟೆನು! ಹೆತ್ತವರಿಗೆ ಕಲಂಕ ಬಗೆದು ಎತ್ತಲೋ ಕುಣಿದು ಬದುಕ ಹೊರಟವಳೆಂದು ಅವಳ ಬರಿದು ಹಣೆ, ಅರ್ಧಮುರ್ಧ ಬೆಳೆದ ಕೇಶ, ಇವುಗಳಿಂದ ಸ್ಪಷ್ಟವಾಗುವುದಿಲ್ಲವೆ? ಇಂಥ ಕ್ಷುದ್ರಳ ವಿಷಯವಾಗಿ ಮನಸ್ಸು ಕದಲಗೊಡಬೇಕೆ? ಹಾದಿ ತಪ್ಪಿದ ತರುಣಿಯನ್ನು ಕುರಿತು ಅಕಾರಣ ವಿಚಾರ ಬೆಳೆಸುವುದು ಕೂಡ ಸಮಾಜ ಕಾರ್ಯದ ಆಡಂಬರವೇ ಸರಿ; ಇಂಥ ಬೀದಿಬಸವಿ—ಅಂ! ಅವಳು ಬಸವಿಯೆಂದು ಎಣಿಸಿದೆನೆ!—ಆವಳು ಹಾಗಿರದೆ ನೊಂದು ನಿರಾಧಾರಿಯಾಗಿರುವುದಾದರೆ, ರೂಢವಾದ ರಕ್ಕಸನಿಗೆ ಬಲಿಯಾಗಿ ಹಂಬಲಿಸುವವಳಾಗಿದ್ದರೆ, ಎಲ್ಲೆಲ್ಲಿಯೂ ಮೊರೆಯಿಟ್ಟರೂ ಯಾರೂ ಇಲ್ಲದೆ ಇಲ್ಲಿಗೆ ಬಂದವಳಾಗಿದ್ದರೆ, ನನ್ನ ಕರ್ತವ್ಯವೇನು? ಮಂದಿ ಬಂದರು, ಅಂಥ ತರುಣಿಯನ್ನು ಮಾತಾಡಿಸುವುದು ಹೇಗೆ ಎಂದು ನಾನು ಎದ್ದು ಬಂದಿರುವುದು ನೀತಿಯೆ? ನನ್ನಲ್ಲಿ ನನ್ನ ನಂಬಿಗೆಯೆ ಇಲ್ಲವೆ?" ಎಂಬ ಅನೇಕ ವಿಚಾರಗಳಲ್ಲಿ ಅವನು ಮಗ್ನನಾದನು.

"ಟಕ್, ಟಕ್" ಬಾಗಿಲಲ್ಲಿ ಸದ್ದಾಯಿತು.

" ಹ್ಯಾಲೋ! ದಿಲೀಪ!" ಎಂದು ಅವನನ್ನು ಬರಮಾಡುವಷ್ಟರಲ್ಲಿ ದಿಲೀಪನು ಒಳಗಿನ ಕುರ್ಚಿಯಲ್ಲಿ, ಅದೇಕೆ ಶರತ್! ರೂಮಿನಲ್ಲಿ ನಿನ್ನ ಸಾಯುಕಲ್ಲ ಕಾಣುವುದಿಲ್ಲ?"

ಇದೀಗ "ನಮ್ಮಾಕೆ ಒಬ್ಬಳೇ ಇದ್ದಾಳೆ" ಎಂದು ನುಡಿದ ಗುಂಡಪ್ಪನು ಕಣ್ಣಿಗೆ ಕಟ್ಟಿದನು; ಮತ್ತಷ್ಟು ಸಂಶಯಭ್ರಮಿಷ್ಟನಾದನು. ಇದನ್ನು ಕಂಡು ಗೆಳೆಯನನ್ನು ಬಹಳ ಪೀಡಿಸಕೂಡದೆಂದು "ಅರೇ ದೋಸ್ತ! ನಿನ್ನ ಸಾಯುಕಲ್ಲು ಈಗ ಚಾರಮಿನಾರದ ಪೋಲಿಸ ಚೌಕಿನಲ್ಲಿ"

"ದಿಲಿಪ್! ಸಾಯುಕಲ್ಲಿಗೂ ಮೊದಲು ಆ ಅಡಿಗೆಯವನನ್ನೆ ಹಿಡಿಯಬೇಕು" ಎಂದು ಇಬ್ಬರೂ ಹೊರಗಾದರು. ನಡೆದ ಸಂಗತಿಯನ್ನು ಗೆಳೆಯನಿಗೆ ತಿಳಿಸಬೇಕೆಂದು ಬಿಚ್ಚಿದ ತುಟಿಯನ್ನು ಮುಚ್ಚಿ, ಗತಿಯಿಲ್ಲದ ತರುಣಿಯ ವಿಷಯವಾಗಿ ಒಮ್ಮೆಗೆ ಯಾವ ಸುದ್ದಿ ಹೇಳುವುದು ಸರಿಯಲ್ಲ, ಅದು ಅವಳಿಗೆ ಕ್ಷೇಮವಲ್ಲ" ಎಂದು ಸುಮ್ಮನಾದನು.

× × × × × × ×

"ನಂಹಿ ಜನಾಬ! ಸಾಯುಕಲ್ಲ ತೋ ಯಹ ಪೂಛ ಕರಹೀ ಲೇ ಗಯಾಥಾ; ಲೆಕಿನ್ ಗರೀಬ ಪೇಟಕೆ ವಾಸ್ತೆ ಯಹ ಗುನ್ಹಾ ಕಿಯಾ; ಬೆಚಾರಾ ಲಾಚಾರ ಹುವಾ ಹೈ ಆಪ ಛೋಡ ಸಕ್ತೆ ಹೈಂ ತೋ ಮೈ ಇಸೆ ಮಾಫ ಕರತಾಹುಂ"

"ಅಮಿಾನಾ ಸಾಹೇಬ, ಇವನು ನಾಯುಕಲ್ಲು ನನ್ನ ಅಪ್ಪಣೆಯಿಂದಲೇ ................ತಂದನು; ಆದರೆ ಬಡತನವಿರುವಲ್ಲಿ ಪಾತಕದ ವಿಚಾರಕ್ಕೆ ಎಡೆ ಸಿಗುವುದೂ ಸಹಜ. ತಾವು ಮುಕ್ತ ಮಾಡುವಿರಾದರೆ ನಾನು ಇವನನ್ನು ಕ್ಷಮಿಸುವೆನು."

"ಕಾನೂನು ಕಳ್ಳನನ್ನು ಕ್ಷಮಿಸುವುದಿಲ್ಲ; ಆದರೂ ಅದು ಇಂದು ನಿಮ್ಮ ಭೂತದಯೆಗೆ ಮೆಚ್ಚುವುದು; ಲೇ! ಕಳ್ಳಾ! ಕಂಡಿಯಾ! ನಮ್ಮ ಸುಶಿಕ್ಷಿತ ತರುಣರಿಗೂ ನಿನ್ನಂಥ ಅಧಮರಿಗೂ ಅದೆಷ್ಟು ಅಂತರವೆಂಬುದನ್ನು ತಿಳಿದೆಯಾ! ಹೋಗು; ಎಲ್ಲಿಯಾದರೂ ಈ ಮುಖವನ್ನು ಅಡಗಿಸು; ಇನ್ನು ಮುಂದಾದರೂ ಬುದ್ಧಿಯನ್ನು ಕಲಿತು ಮನುಷ್ಯನಾಗು."

"ಆದಾಬ, ಅಮೀನ ಸಾಹೇಬ! ಹೊರಡಲು ಅಪ್ಪಣೆಯೇ?" ಎಂದು ಶರತನು ಬಿನ್ನವಿಸಿದನು.

"ದೋಸ್ತ! ನಾನು ಅಂಗಡಿಗೆ ತೆರಳುವೆನು ಈಗೆರಡು ದಿನದಿಂದ ತಂದೆಗೆ ಖಾಯಿಲೆಯೆಂದು ನಾನೇ ಅಂಗಡಿ ನೋಡುವೆನು," ಎಂದು ದಿಲೀಪನು ಅಪ್ಪಣೆಯನ್ನು ಕೇಳಿದನು.

"ನಾಳೆ ಕಾಲೇಜು ತೆರೆಯುವುದು; ಅಲ್ಲೇ ಕಾಯೋಣ," ಎಂದು ಗಾಲಿಯಲ್ಲಿ ಗಾಳಿ ಸಾಕಷ್ಟು ಇಲ್ಲದಿದ್ದುದರಿಂದ ನಾಯಕಲ್ಲ ಕೈಯಲ್ಲಿ ಹಿಡಿದು ಕೊಂಡು ಶರತ್ಕುಮಾರನು ನಡೆದನು; ಅವನ ಹಿಂದೇ ಜೋಲು ಮೊಗದಿಂದ ಗುಂಡಪ್ಪನು ಹೊರಟನು. "ಇಡೀ ರವಿಪುರದ ಗಡ್ಡಿಯನ್ನು ಜೇಬಿನಲ್ಲಿ ಇಳಿಸಬಲ್ಲ ಬಂಟನಿಗೆ ಇದೀಗ ಮೀಸೆಯೊಡೆದ ಈ ಹುಡುಗನು ನನಗೆ ಯಾವ ಗಿಡದ ಎಲೆ? ಧೊಂಡಪ್ಪನಂಥ ದರಿದ್ರನಿಗಿಂತಲೂ ಇಂಥ ಸುಖವಸ್ತುಗಳೇ ನನಗೆ ಬಂಗಾರ ಕಣಿಗಳು" ಎಂತಲೂ ಎಣಿಸುತ್ತ ನಡೆದನು.

ಶರತ:—"ಅಲ್ಲೋ? ನಿನ್ನೆ ಲಾಲದರವಾಜ ಎಂದು ಹೇಳಿದವನು ಈ ಕಡೆಗೇಕೊ?

ಗುಂಡಪ್ಪ:—"ತಮ್ಮ ಮನಸ್ಸು ಎಷ್ಟು ದೊಡ್ಡದು ರಾಯರೇ! ಆಗಿನಿಂದ ನಾನೇ ಮಾತಾಡಿಸಬೇಕಂದೆ; ಆದರೆ ನಾಚಿಕೆಯಿಂದ ಬಾಯಿ ಏಳಲಿಲ್ಲ"

ಶರತ:—"ಅದಿರಲಿ, ಪಾಪ, ಮನೆಯಲ್ಲಿ ನಿನ್ನ ಅಕೆ ಒಬ್ಬಳೇ ಇರುವಳು ಬೇಗ ಹೋಗು...."

ಗುಂಡಪ್ಪ:—"ಯಾವ ಮುಖದಿಂದ ಹೋಗಲಿ, ರಾಯರೇ! ಅವಳ ಹೊಟ್ಟೆಗೆ ಕೆರಳಿಡಲಿಕ್ಕೇ ಹೋಗಬೇಕು; ನಾನಾದರೂ ನಿನ್ನೆ ಬೆಳಗಿನ ಊಟ ಕಂಡಿದ್ದೇನೆ; ಆಗದು; ರಾಯರೇ! ನನ್ನಿಂದ ಅವಳನ್ನು ನೋಡುವುದೂ ಆಗದು."

ಶರತ:—"ಎಂದರೇನು? ಅವಳನ್ನು ಬಿಟ್ಟು ಎತ್ತಲೋ ಹೋಗುವಿಯೇನು?"

"ಗುಂಡಪ್ಪ:—ದೇವರು ಮಾಡಿಸಿದ್ದಾಗುವುದು; ನಾನೇನು ಮಾಡಲಿ! ನೀರು ಎದೆ ಮುಟ್ಟ ಬಂದರೂ ಈಜಬಹುದು; ಕತ್ತು ಮೀರಿದರೆ ಮುಳುಗುವುದೇ ಉಪಾಯ, ಅಲ್ಲವೆ?"

ಶರತ:—" ಅವಳ ಗತಿ ? "

ಗುಂಡಪ್ಪ :—"ಅವಳು–ಅವಳು–ಎಂತ ಬಹಳ ಕೇಳುವನಲ್ಲಾ ಇವನು! ನನ್ನ ಎಣಿಕೆಯೇ ಎಣಿಕೆ" ಎಂದು ಒಳಗೊಳಗೇ ಹಿಗ್ಗಿ "ಅವಳ ಗತಿಯೇನು ? ನಿಮ್ಮಂಥವರು ಯಾರಾದರೂ ಅನ್ನ ಬಟ್ಟೆ ಕೊಟ್ಟು ಸಲಹಲಾರರೇ ?" ಎಂದಾಗ ಅವನು ಸೀ ಮೋರೆ ಮಾಡಿ ನಕ್ಕು ತೋರಿದ ಹಲ್ಲು ಬೇರೆ, ಒಳಗಿನ ವಿಷದಂತುಗಳು ಬೇರೆ ಎಂಬುದು ಶರತ್ಕುಮಾರನಿಗೂ ಹೊಳೆಯಿತು.

ಶರತ :—" ಅಲ್ಲೋ ! ಈಗ ಅವಳ ವಯಸ್ಸೇನು ? "

ಗುಂಡಪ್ಪ :—" ಹದಿನೇಳು, ಹದಿನೆಂಟು ಅಷ್ಟೇ" ಎಂದು ತಲೆ ತುರಿಸಿದನು.

ಶರತ :—" ಅಯ್ಯೋ ಪಾಪ ! ಇನ್ನೂ ಯುವತಿ."

ಗುಂಡಪ್ಪ :— "ಅಂತೇ ಅಂದೆ, ರಾಯರೇ ! ತಮ್ಮಂಥವರ ಆಶ್ರಯವಾದರೆ..." ಎಂದು ಕೈತಿಕ್ಕಿ ಆಸೆಬುರುಕನಂತೆ ನಕ್ಕನು.

ಶರತ :—" ಎಲ್ಲಿ ನಿನ್ನೊಂದಿಗೆ ಬರಲೇನು ? "

ಗುಂಡಪ್ಪ :—" ಅಯ್ಯೋ ರಾಯರೇ ! ತಮ್ಮ ಕಾಲಲ್ಲಿ ನನ್ನ ಅಂಗೈ ಜೋಡು ಮಾಡಿ ಕರೆದುಕೊಂಡು ನಡೆಯುವೆನು. "

ಧರ್ಮಶಾಲೆಯಲ್ಲಿ ಮೊದಲು ಗುಂಡಪ್ಪನೊಬ್ಬನೇ ಬಂದನು. ಸುಶೀಲೆಯು ಕೊಳಾಯಿಯಲ್ಲಿ ಬಾಯಿಮುಕ್ಕಳಿಸುತ್ತಿದ್ದಳು. ಅಂಗಳ ಇಳಿದ ಗುಂಡಪ್ಪನನ್ನು ಕಂಡೊಡನೆ ಕುಪ್ಪಳಿಸಿ ಜಿಗಿದು ಅವನ ಕಣ್ಣು, ಮೂಗು, ಕಿವಿ, ಮೊಗವೆಲ್ಲವನ್ನು ಹರಿದುಬಿಡಬೇಕೆಂಬಂತೆ ಕಣ್ಣರಳಿಸಿದಳು; ಆದರೆ ಸುತ್ತಲಿನ ಜನರ ಅಲೆದಾಟ ಕಂಡು ಅದೇ ನೀರಿನಿಂದ ಅಳ್ಳು ನೆತ್ತಿಗೆ ನೀರು ಬಡಿದಳು; ಇವನು ತನ್ನ ಮನಗುಣಿಕೆಯ ಹಿಗ್ಗಿನಲ್ಲಿ ಯಾವುದನ್ನೂ ಗಮನಿಸದೆ ಮೂಲೆಗಿಟ್ಟ ಜಮಖಾನೆ ಹಾಸಿ ಕುಳಿತನು. "ಇದೀಗ ಬಂದಾಳು" ಎಂದು ಆತುರವನ್ನು ತಡೆದು ಬಹಳ ದಣಿದು ಬಂದವನಂತೆ ಮುಗ್ಗುಲಾಗಿ ಹೊಟ್ಟೆಯಲ್ಲಿ ತಲೆಯಿಟ್ಟು ಮಲಗಿದನು.

ಕೊಳಾಯಿ ಬಿಟ್ಟವಳೆ ಸುಶೀಲೆಯು ನೇರವಾಗಿ ಬಾಗಿಲೆಡೆಗೆ ಸಾಗಿದಳು. ನೀರಿನ ಸದ್ದು ನಿಂತರೂ ಸುಶೀಲೆ ಬರಲಿಲ್ಲ ಎಂದು ಗುಂಡಪ್ಪನು ಎದ್ದು

ಅತ್ತಿತ್ತ ನೋಡಿದನು. ಶರತ್ಕುಮಾರನು ಬೀದಿಯಲ್ಲಿನ ಮರದಡಿಯಲ್ಲಿ ಸಾಯಕಲ್ಲಿಗೆ ಆತು ನಿಂತಿದ್ದನು; "ಸುಶೀಲಾ!" ಎಂದು ಕೂಗಿ ಬೆನ್ನು ಹತ್ತಿದ ಗುಂಡಪ್ಪನನ್ನು ಕಂಡು ಸುಶೀಲೆಯು ಹೌಹಾರಿದಳು; ಅತ್ತಿತ್ತ ನೋಡಿದಳು; ಅಲ್ಲೇ ನಿಂತಿದ್ದ ಮುದುಕ ಆಳುಮಗನಿಗೆ ಮೊರೆಹೋಗ ಬೇಕೆಂದಳು; ಕೂಡಲೇ ತನ್ನ ವೃದ್ಧ ತಂದೆಯು ನೆನಪಾಗಿ 'ಅಪ್ಪಾ!' ಎಂದು ಚಿಟ್ಟನೆ ಚೀರಿದಳು. ಅತ್ತಿತ್ತಿನ ಜನರು ಓಡಿಬಂದರು. ಶರತ್ಕುಮಾರನು ಇದ್ದಕ್ಕಿದ್ದ ಹಾಗೆ ಸಾಯಕಲ ಬಿಟ್ಟು ಧಾವಿಸಿದಾಗಲೇ ಅವಳು ಅವನ ಕೊರಳಿಗೆ ಬಿದ್ದಳು. ಈ ಗಲಾಟೆಯಲ್ಲಿ ತನ್ನ ಕಾಲಿಗೆ ಬುದ್ಧಿ ಹೇಳಬೇಕೆಂದ ಗುಂಡಪ್ಪನನ್ನು ಕುರಿತು, "ಓಡಿದರೆ ವ್ಯರ್ಥ ಕೆಡುವೆ, ಇತ್ತ ಬಾ" ಎಂದು ಶರತ್ಕುಮಾರನು ಅವನನ್ನು ಕರೆದನು. "ನಾನು ಎಣಿಸಿದ್ದನ್ನೆ ಇವಳು ಮಾಡಿದಳು. ಆದರೆ ವೃಥಾ ಈ ರಾದ್ಧಾಂತ ಮಾತ್ರ ಬೆಳೆಸಿದಳು" ಎಂದು ನಡೆದ ಸಂಗತಿಯಿಂದ ಎಳ್ಳಷ್ಟೂ ಕದಲದೆ ಗುಂಡಪ್ಪನು ತಲೆಬಾಗಿ ನಿಂತನು.

ಶರತ್ಕುಮಾರ:—"ಗುಂಡಪ್ಪಾ! ನಮ್ಮೊಂದಿಗೆ ಬರುವೆಯಾ?"

ಗುಂಡಪ್ಪ:—"ಬಂದೆ ರಾಯರೇ!" ಎಂದು ಕೈ ಬೀಸಿ ಅವರು ಹೊರಡುವ ಮೊದಲೇ ಅವರ ಆಳಾಗಿ ನಡೆದನು. "ಇವನೇಕೆ?" ಎಂದು ನುಡಿಯುಲಾಗದೆ ನೋಡಿದ ಸುಶೀಲೆಯನ್ನು ಕುರಿತು "ಭಯಪಡಬೇಡಿ; ಎಲ್ಲಾ ಸರಿಹೋಗುವುದು" ಎಂದು ಶರತ್ಕುಮಾರನೂ ಅವಳನ್ನು ಕರೆದುಕೊಂಡು ನಡೆದನು.

ನೆರೆದವರೆಲ್ಲಾ ಬೊಟ್ಟು ಕಚ್ಚಿ ತಲಾ ಒಂದೊಂದು ಮಾತನಾಡಿದರು.

ಈ ಮೂವರೂ ಬೀದಿಗೆ ಬಂದರು. ಬಿಸಿಲೇರಿದ್ದರಿಂದ ಸುಶೀಲೆಯ ಮೊಗದಲ್ಲಿ ಹಸಿವೆ ನೀರಡಿಕೆಗಳು ಒಡೆದು ಕಂಡವು; 'ವೆಸ್ಟ್ ಎಂಡ' ಪಕ್ಕದ ಅಂಗಡಿಯಲ್ಲಿ ಸಾಯಕಲ್ಲ ಇಟ್ಟವನೆ ಶರತ್ಕುಮಾರನು ನಾಂಪಲ್ಲಿಯಲ್ಲಿನ ಕಾಶ್ಮೀರ ಹೋಟೇಲಿಗೆ ಟಾಂಗೆ ಗೊತ್ತುಮಾಡಿದನು. ಗುಂಡಪ್ಪನ ಹೊಟ್ಟೆಯಲ್ಲಿಯೂ ಡೊಂಬರಾಟವು ನಡೆದಿತ್ತು. ಹೋಟೇಲಿಗೆ ನಡದುದನ್ನು ತಿಳಿದು ಶರತ್ಕುಮಾರನನ್ನು ನೋಡಿದಾಗ "ಛೀ! ನನ್ನ ಜನ್ಮ ಸುಡಲಿ" ಎಂದು ತಲೆಬಾಗಿದನು.

ಇದೇ ಹೋಟೇಲಿನ ಒಂದನೆ ತರಗತಿಯ ರೂಮಿನಲ್ಲಿ ಈ ಮೂವರೂ ಯಾರಿಗೆ ಯಾರೋ ಎಂಬಂತೆ ಕುಳಿತಿದ್ದರಾದರೂ ಆಗಾಗ "ಸಾವಕಾಶ ವಾಗಲಿ, ನಿಸ್ಸಿನಿಂದ ಹಸಿದಿರುವಿರಿ'' ಎಂದು ಶರತನೇ ನುಡಿದನು. ಸುಶೀಲೆಯು ಅವನನ್ನು ಹೊಳೆದ ಕಂಗಳಿಂದ ನೋಡಿದಳಷ್ಟೆ. "ಈ ಮಹಾ ಪುರುಷನ ಔದಾರ್ಯಕ್ಕೆ ಮೆಚ್ಚುವಷ್ಟು ಯೋಗ್ಯತೆಯೂ ನನ್ನಲ್ಲಿಲ್ಲವಲ್ಲಾ'' ಎಂದು ಗುಂಡಪ್ಪನು ಆಗ ಸತ್ತವನೂ ಅಲ್ಲ ಬದುಕಿದವನೂ ಅಲ್ಲಾ.

ಊಟದ ಸವಿ ಹಸಿದ ಹೊಟ್ಟೆಗೇ ಗೊತ್ತು.

"ಗುಂಡಪ್ಪಾ! ಮುಂದೇನು ವಿಚಾರ?"

"ರಾಯರ ಅಪ್ಪಣೆ ಹೇಗೋ ಹಾಗೆ."

"ನಿನ್ನ ಊರು ಯಾವುದು?"

"ನನ್ನ ಊರು ಸೂಗಳ್ಳಿ, ತಾಲೂಕಾ ರವಿಪುರ, ಜಿಲ್ಲಾ ರಾಯ್ಚೂರು ಸೂಬಾ ಕಲ್ಬುರ್ಗಿ...."

"ಸರಿ, ಸರಿ; ಅಲ್ಲಿ ನಿನಗೆ ಯಾರೂ ಇಲ್ಲವೇನು?''

"ಕಳೆದ ವರ್ಷ ತಾನೇ ಹೆಂಡತಿ ಸತ್ತಳು; ತಾಯಿಯನ್ನಂತೂ ಎಂದೋ ಅಗಲಿದ್ದೇನೆ. ವೃದ್ಧ ತಂದೆಯಿದ್ದಾನೆ; ಆದರೆ ನಮ್ಮಕ್ಕನ ಮನೆಯಲ್ಲಿ—ಚಿನ್ನಳ್ಳಿಯಲ್ಲಿ"

"ಮಕ್ಕಳಿಲ್ಲವೊ ನಿನಗೆ?"

"ನಾಲ್ಕು ಹುಟ್ಟಿ ಸತ್ತವು, ಮೂರು ಆಕೆಯ ಹೊಟ್ಟೆಯಲ್ಲೇ ಕರಗಿದುವು.''

"ಅಯ್ಯೋ ಪಾಪದ ಜೀವಿ! ಹೊಲ, ಮನೆ....?"

"ಇವೆ; ರಾಯರೇ! ಆದರೇನು? ಈ ನಾಲ್ಕಾರು ವರ್ಷದಿಂದ ಬೆಳೆದದ್ದು ಬಿರಾಡಕ್ಕೆ ಸಾಲದೆ ಎಲ್ಲಾ ಹರಾಜಾಗಿ ಒಂದು ಉಳಿದಿದೆ. ವರ್ಷವೂ ಇಷ್ಟಿಷ್ಟು ಬಿದ್ದು ಮನೆಯೂ ಹಾವಿನ ಹುತ್ತಿಗೆ ಎಡೆಯಾಗಿದೆ.''

"ಸಧ್ಯ ನೀನು ಎಲ್ಲಿಂದ ಬಂದೆ?''

"ಮುಳ್ಳಾಪುರದಿಂದ; ರಾಯರೇ! ಹಾಗಂತೂ ಈ ನಾಲ್ಕಾರು ವರ್ಷಗಳಿಂದ ರವಿಪುರದಲ್ಲೇ ಅಡಿಗೆ ಮಾಡಿಕೊಂಡಿರುವೆನು"

" ಗುಂಡಪ್ಪಾ! ಈ ಜನ್ಮದಲ್ಲಿ ಇಷ್ಟೂ ತಾಪತ್ರಯಪಟ್ಟು ಮುಂದಿನ ಜನ್ಮಕ್ಕೂ.... ''

" ಅಯ್ಯೋ! ಹೇಳಬೇಡಿ ರಾಯರೇ! ಇದೀಗ ನನಗೆ ಹೊಸ ಜನ್ಮ, " ಎಂದು ಶರತನ ಕಾಲಿಗೆ ಬೀಳುವನು.

" ಏಳು ಗುಂಡಪ್ಪಾ! " ಎಂದು ಕನಿಕರದಿಂದ ಅವನನ್ನೆಬ್ಬಿಸುವ ಶರತನನ್ನು ಕಂಡು ಸುಶೀಲೆಯು ಮುಂಜಾವಿನಲ್ಲಿ ಕಂಡ ಲಕ್ಷ್ಮಣನೇ ತನ್ನ ಸಹಾಯಕ್ಕೆ ಬಂದನೆಂದು ಬಗೆಯುವಳು.

"ಗುಂಡಪ್ಪಾ! ರೈಲು ಖರ್ಚಿಗೆ ಕೊಟ್ಟರೆ ಈಗ ಮರಳಿ ತೆರಳುವೆಯೇನು?"

" ರಾಯರೇ! ಈಗ ನಾನೆಲ್ಲಿಯೂ ಒಲ್ಲೆ; ನಿಮ್ಮ ಚರಣಗಳಲ್ಲಿ ಆಶ್ರಯವಿರಬೇಕೆಂದು ಬೇಡುವೆನು. "

ಶರತ :—"ಗುಂಡಪ್ಪ! ವ್ಯರ್ಥ ಭಾಷಣವಷ್ಟೆ ಮಾನವತೆ ಅಲ್ಲ; ನಿನ್ನಿಂದ ಹಸಿದವನು ಈಗ ಊಟವನ್ನು ಮಾಡಿದೆ ಮರುಮಾತಿಲ್ಲದೆ ಇಲ್ಲಿಂದ ಹೊರಡು ಎಂದು ನಿನ್ನ ಒಳಿತಕ್ಕಾಗಿ ಹೇಳುವೆನು; ಹಾಗೆ ನೋಡಿದರೆ ಈಗ ನೀನು ಜೇಲಿನಲ್ಲಿ ಇರಬೇಕಾಗಿತ್ತು; ಅದನ್ನು ತಪ್ಪಿಸಿ ನಿನ್ನನ್ನು ಮುಕ್ತಮಾಡಿರುವವನು ಕೇಡು ಹೇಳುವುದಿಲ್ಲ ಕಂಡಿಯಾ? ಆಮೀನ ಸಾಹೇಬರು ಹೇಳಿದಂತೆ ಇನ್ನು ಮುಂದಾದರೂ ಮಾನವನಾಗು; ಏಳು. ಹೊರಡು ಇಲ್ಲಿಂದ; ಮತ್ತೊಮ್ಮೆ ಈ ಊರಲ್ಲಿ ಅಥವಾ ನಿನ್ನ ಪಾಪದ ಹಾದಿಯಲ್ಲಿ ನೀನು ಕಂಡ ದಿವಸವೇ ಜೇಲಿನಲ್ಲಿ ಎಂದು ತಿಳಿ."

ತೆಪ್ಪಗಾದ ಗುಂಡಪ್ಪನು ಮರುಮಾತಿಲ್ಲದೆ ಇವರ ಕಣ್ಮರೆಯಾದನು.

× × × × ×

ಕೈಗೊಂಡ ಕರ್ತವ್ಯದ ಹೊಣೆಗೆ ತಕ್ಕಂತೆ ಏಕಾಕಿಯಾದ ಸುಶೀಲೆಯ ಜೋಪಾಸನೆಗೆಂದು ಶರತನು ಕಾಲೇಜಿನ ವಸತಿಗೃಹವನ್ನು ಬಿಡಬೇಕಾಯಿತು-ಅವನು ಕಾಲೇಜಿಗೆ ಹೊರಟಾಗ, ಕನ್ನಡಕ್ಕೆ ಎಡೆಯಿದ್ದ ಮಿಧಾಡಿಸ್ಟ ಸ್ಕೂಲಿಗೆ ಇವಳೂ ಅವನ ಜೊತೆಯಲ್ಲಿ. ಸುದ್ದಿ ಸೂರರಿಗೆ ಇದು ಅನ್ನವಾಗದೆ ಇರುವುದೆ? ಅದರ ಪರಿಣಾಮವೆಂದೋ, ಈ ಮಧ್ಯದಲ್ಲಿ ತಂದೆಯಿಂದ ಬಂದ ಲಗ್ನದ ಸೂಚನೆಯನ್ನು ನಿರಾಕರಿಸಿದನೆಂದೋ ಅವನ ಕಾಲೇಜಿನ ವಿಳಾಸಕ್ಕೆ

ಒಂದು ಪತ್ರವೂ ಬಂತು. ಅಂಗಳದಲ್ಲಿನ ಹುಲ್ಲುಗಾವಲಲ್ಲಿ ಬಂದು ಅದನ್ನು ಒಡೆದನು. "ಸರಿ ಇದೆಲ್ಲ ತಿಳಿದೇ ಈ ಹೊಣೆಯನ್ನು ಹೊತ್ತಿರುವೆ...ಅಂತೂ ಸುದ್ದಿಸೂರಿಗೆ ಇದು ಅನ್ನವಾಗಿದೆ" ತನ್ನಷ್ಟಕ್ಕೆ ತಾನೆ ಮುಗುಳುನಗೆಯನ್ನು ನಗುವನು. "ಇನ್ನೂ ನನ್ನ ಕನಸಿನಲ್ಲಿಲ್ಲದ ಪುನರ್ವಿವಾಹಕ್ಕೆ ಇವರು ಈಗಲೇ ಶುಭ ಮಂಗಲವೆಂದು ಹಾಡಿರುವರು. ಏನಂತೆ" ಪತ್ರ ಮತ್ತೊಮ್ಮೆ ಓದಿ. "ಇನ್ನೇಕೆ ನಿನಗೆ ಲಗ್ನ ? ಮುಂದೆ ಪಾಪ ಆ ಹೆರವರ ಹುಡುಗಿ ನನ್ನ ಹೆಸರಿಗೆ ಕಲ್ಲು ಒಡೆಯಲಿಕ್ಕೇನು ?" ಮತ್ತು ನಕ್ಕು "ಈಗ ನಾನೆಲ್ಲಿ ಅದಕ್ಕೆ ಕಾಲು ಹೊಸೆದು ಅಳುತ್ತಿರುವೆನು ? ಓಹೋ ! ಕೆಳಗೆ ತಾಜಾ ಕಲಮೂ ಇದೆ; 'ಮರುಟಪಾಲಿಗೇ ಸಮಾಧಾನದ ಉತ್ತರವಿಲ್ಲವಾದರೆ ಇದೇ ತಿಂಗಳಿಂದ ಮನಿಯಾರ್ಡರದ ಹಾದಿ ಕಾಯದೆ ನಿನ್ನ ಹಾದಿಯನ್ನು ನೀನೇ ಕಾಯಬೇಕು." ಈಗಲಂತೂ ಘೊಳ್ಳೆಂದು ನಕ್ಕು "ಅಪ್ಪಾ ! ನಿಮ್ಮ ಈ ತಾಜಾ ಮಿರಾಯಿಯಿಂದ ನನ್ನ ಹೊಟ್ಟೆ ತುಂಬಾ ತುಂಬಿತು."

---

೧೫

## ಜಿ. ಎಸ್. ಸುಬ್ಬರಾಯರು

ಮುಂಬಯಿ ನಗರವನ್ನು ಬಣ್ಣಿಸುವುದೆಂದರೆ ಆಧುನಿಕ ಕಾರಣ ಪುರುಷನ ವಿರಾಟರೂಪದ ದರ್ಶನವೆಂದು ಹೇಳಿದರೂ ಅತಿಶಯೋಕ್ತಿಯಲ್ಲ. ಪೂರ್ವದಿಂದ ಪಶ್ಚಿಮಕ್ಕೂ ಉದ್ದವಾಗಿ ಚಾಚಿರುವ ಈತನ ನಾಲಗೆಯಿಂದಲೇ ನಮಗೆ ಸುಧಾರಣೆಯ ಬೋಧ; ಇಂದಿನ ಪ್ರಪಂಚದ ಪರಿಚಯ.

ಇಂದು ಅಲೆಗ್ಸಾಂಡ್ರಾ ಡಾಕಿನಂಗಳದಲ್ಲಿ ವಿಪರೀತ ಗದ್ದಲ; ಎಲ್ಲ ಜಾತಿಯ ಜನರು ತಮ್ಮ ತಮ್ಮ ಆಪ್ತಸ್ನೇಹಿತರನ್ನು ಬರಮಾಡುವ ಸಡಗರದಲ್ಲಿ. ಜಗತ್ತಿನ ಭಾಷೆಗಳೆಲ್ಲವೂ ಇಂದು ಇಲ್ಲಿ ಕೇಳಿಬರುತ್ತಿವೆ.

ಪರದೇಶ ಸಂಚಾರ ಮಾಡಿ ಊರಿಗೆ ಬಂದರೂ ಅವರನ್ನು ಯಾವ ಸತ್ಕಾರ, ಸಂತೋಷಕೂಟಗಳ ಗೊಡವೆಗೆ ಹೋಗದೆ ಇರುವ ನಮ್ಮ ಕನ್ನಡಿಗ

ರಿಗೆ ಈ ಒಡ ಸುಬ್ಬು ಯಾವ ಗಿಡದ ಚಿಗುರು ಎಂದು ಅವರು ಇಲ್ಲಿನ ವರೆಗೆ ಬರಬೇಕು!

ಹಡಗು ಇಳಿದವನೆ ತನ್ನ ಸಹಾಯಕರ್ತೃಗಳಾದ ಧಾಮ್ಸ ದಂಪತಿಗಳಿಗೆ ತಾನು ಸುರಕ್ಷಿತವಾಗಿ ತಲುಪಿದ ಬಗ್ಗೆ ಕೇಬಲ ಕೊಟ್ಟನು; ಸಾಮಾನೆಲ್ಲ ಕೂಲಿಗೆ ಒಪ್ಪಿಸಿದನು 'ಜಿ ಎಸ್. ಸುಬ್ಬರಾವ್, ಪೇಪರ್ ಎಕ್ಸ-ಪರ್ಟ್' ಎಂದು ಬಣ್ಣಿಸಿದ ಹ್ಯಾಂಡ್ ಬ್ಯಾಗ್ ಹಿಡಿದು ಹೊರಟನು. ಇಳಿದು ಬಂದ ಪ್ರಯಾಣಿಕರಲ್ಲಿ ಕೆಲವರು ತಾಜಮಹಲಿಗೊ ಸರದಾರ ಗೃಹಕ್ಕೊ ಇನ್ನಿತರರು ತಮ್ಮ ಸರಿಸಮಾನಸ್ಕರ ಆತಿಥಿಗಳಾಗಿಯೋ ನಡೆದರು.

ಸುಬ್ಬರಾಯರೂ ಆಪೋಲೋ ಬಂದರಕ್ಕೆ ಟ್ಯಾಕ್ಸಿ ಮಾಡಿದರು. "ಇಂದೆನ್ನ ಮಾತೃಭೂಮಿಯನ್ನು ಕಂಡೆ" ಎಂಬ ಹಿಗ್ಗಿನಲ್ಲಿ, ತಾವೂ ತಾಜಮಹಲಿಗೇ ಬಂದರು. ಪ್ರವಾಸಿಕರನ್ನು ಬರಮಾಡಲು ಒಳಗಿನ ಶೃಂಗಾರವೆ ಎದ್ದು ಬರುವಂತೆ ಕಂಡ ಕೋಣೆಯೊಂದರಲ್ಲಿ ಪ್ರವೇಶವನ್ನೂ ಮಾಡಿದರು. ಮಹಾಲು ತುಂಬಾ ಪಾಶ್ಚಾತ್ಯರ ಠೀವಿ, ಬಣ್ಣಬಣ್ಣದ ಬೆಡಗಿನಲ್ಲಿ ಅಲೆದಾಡುವ ಗುಂಪು, ಇವು ಅವರಿಗೆ ಹೊಸವಲ್ಲವಾದರೂ, ಇಲ್ಲಿ ಈ ಧುರಂಧರ ಜೀವನ ದೃಶ್ಯ ಕಂಡೊಡನೆ ತಮ್ಮನ್ನು ತಾವೇ ಒಮ್ಮೆ ನೋಡಿದರು. "ಓ! ನಾನು ನನ್ನ ಭಾರತದಲ್ಲಿ!" ಎಂದೆನಿಸಿ, ಒಂದಳಿಸಿ ಇನ್ನೊಂದಾಗಿ ಬಂದ ಭಾವಗಳಲ್ಲಿ ತಲ್ಲೀನರಾದರು; ಕೊನೆಗೆ ನಿರ್ಣಯಕ್ಕೂ ಬಂದರು; ಕೋಲ್ಡ್ ಡ್ರಿಂಕ್, ಕ್ರಶ್ ಮುಂತಾದ ಪೇಯಗಳಷ್ಟೆ ಕುಡಿದವರೆ ಮತ್ತು ಟ್ಯಾಕ್ಸಿಯನ್ನು ಹತ್ತಿದರು; ಕಾಳಬಾದೇವಿ ಬೀದಿಯಲ್ಲಿನ ಖಾದಿ ಭಂಡಾರಕ್ಕೆ ಬಂದರು; ಅವಶ್ಯದ ಮುಟ್ಟುಗಷ್ಟು ಅರಿವೆ, ಧೋತರಗಳನ್ನು ಕೊಂಡರು; ಟ್ಯಾಕ್ಸಿಯವನಿಗೆ ಫೋರ್ಟ್‌ನಲ್ಲಿನ ಮಾಡರ್ನ್ ಲಾಡ್ಜಿಗೆ ಸಾಗಲು ತಿಳಿಸಿದರು.

ಪಯಣದ ಪ್ರಯಾಸದಿಂದ ಹೊರಗೆಲ್ಲಿಯೂ ಹೊರಡಲಿಕ್ಕೆ ಮನಸಾಗದೆ ಇಡೀ ದಿವಸ ರೂಮಿನಲ್ಲೆ ಕಳೆದರು; ಒಂಟಿಗರಾಗಿಯೇ ಕುಳಿತದ್ದರಿಂದ ಹಲವೊಂದು ವಿಚಾರಗಳ ಹುಯಿಲಿಗೆ ಗುರಿಯಾದರು. ಅಂದಿನ ತಮ್ಮ ಮನೆಯಲ್ಲಿನ ಹಿರಿಯಕ್ಕನ ಹಾವಳಿ, ಆ ಯಥಾರ್ಥ ತಾಯಿತಂದೆಗಳು, 'ಶುಭಸ್ಯ ಶೀಘ್ರಂ' ಎಂದು ಹೊತ್ತಿಸಿದ ವಿವಾಹ ಹೋಮದಲ್ಲೆ ಸುಟ್ಟು

ಸುಟ್ಟು ಹಪ್ಪಳವಾದ ತಂಗಿ, ಅಳುವವರು ಅತ್ತರೂ ಕುದಿಯುವ ಅವರ ಕಂಬನಿಯಲ್ಲೇ ಬೇಳೆ ಬೇಯಿಸಿ ಬಾಯಿ ಚಪ್ಪರಿಸುವವರೇ ಹೆಚ್ಚಾಗಿದ್ದ ಆ ರವಿಪುರ, ಇವೆಲ್ಲವುಗಳ ದೃಶ್ಯವನ್ನು ನೋಡಿ “ಅಯ್ಯೋ! ಇದು ನಮ್ಮ ಬಾಳು” ಎಂದು ಮರುಗಿದನು. ತಾವು ಬರ್ಲಿನ್ ಪಟ್ಟಣದಲ್ಲಿದ್ದಾಗ ತಮ್ಮ ಮನೆಗೆ ಬೀಗ ಬಿದ್ದಿತೆಂದು ಊರವರು ತಿರುಗಿ ಕಳಿಸಿದ ಪತ್ರವನ್ನು ನೆನೆದು Tragedy (ದುರಂತ) ತಾನೇ ಖಚಿತ; ಹೀಗಿರುವಾಗ ಈಗ ನಾನು ಅಲ್ಲಿಗೆ ಹೋಗಿಮಾಡುವುದಾದರೂ ಏನು? ಆದರೂ ನಾಳಿನ ರೈಲಿಗೆ ಹೋಗಿ ಬರುವುದೂ ವಿಹಿತ ಎಂತಲೂ ನಿರ್ಣಯಕ್ಕೆ ಬಂದರು. ಒಡನೆ ಊರಿಂದ ನಾಡಿನ, ನಾಡಿನಿಂದ ದೇಶದ, ದೇಶದಿಂದ ಜಗತ್ತಿನ ಪರಿಸ್ಥಿತಿಯನ್ನು ಕುರಿತು ಯೋಚಿಸಿದಾಗ, ಅವರ ಮಿದುಳಲ್ಲಿ ಸುಸ್ವರಗಳೂ ಅಷ್ಟೇ! ಅಪಸ್ವರಗಳೂ ಅಷ್ಟೇ!

ಇಷ್ಟರಮಟ್ಟಿಗೆ ತಮ್ಮ ಬಾಳಲ್ಲಿ ಹಾಲು ಬೆರೆಸಿದ ಆ ಸೋಶಾಲಿಸ್ಟ ಥಾಮ್ಸ ದಂಪತಿಗಳಿಗೆ ನಾಝಿ ಸರಕಾರದಿಂದ ಉಂಟಾದ ಹಾನಿ, ಅದಕ್ಕೂ ಹೆದರದೆ ಅವರು ತಮ್ಮ ದೇಶಕ್ಕೆ ತೆರಳಿದರೂ ಅಲ್ಲಿನ ಡೆಮಾಕ್ರಸಿಯಲ್ಲಿ ಬೆಲೆಯಾಗದೆ ತೊಂದರೆಗೀಡಾದ ಅವರ ಜೀವನ, ಹಗಲೂ ಹಾಡು ಅಬ್ಸಿನಿಯಾ ದೇಶವನ್ನು ನುಂಗಿ ನೀರು ಕುಡಿದ ಫ್ಯಾಸಿಸ್ಟರ ಆಡಂಬರ, ಚೀನ ದೇಶವನ್ನು ಹುರಿದ ಜಪಾನಿಯರ ಹಾವಳಿ, ಇವೆಲ್ಲವನ್ನು ಕುರಿತು ವಿಚಾರ ಮಾಡಿದ ಹಾಗೆ ಅವರ ತಲೆಯು ಕಾದಿತು ಮೇಜಿನ ಮೇಲಿಟ್ಟಿದ್ದ ಮ್ಯಾಗ್ಸಿಂ ಗೋರ್ಕಿಯವರ ‘ಮದರ’ ಪುಸ್ತಕವನ್ನೆತ್ತಿ ಓದತೊಡಗಿದರು. ಅದಕ್ಕೂ ಸಮಾಧಾನವೆನಿಸದೆ ಬರ್ಲಿನ್ನಿನಿಂದಲೇ ಪುಣೆಯ ಬಳಿಯಲ್ಲಿನ ಕಾಗದದ ಕಾರ್ಖಾನೆಗೆ ಕಳಿಸಿದ ದರಖಾಸ್ತಿಗೆ ಎಷ್ಟು ದಿನಗಳಾದುವೆಂಬುದನ್ನು ನೋಡಲಿಕ್ಕೆಂದು ಎದ್ದರು; ಮತ್ತೊಂದು ಬ್ಯಾಗ್ ತೆಗೆದು ಪತ್ರವ್ಯವಹಾರದ ಫಾಯಿಲು ನೋಡತೊಡಗಿದರು.

೧೬

## ಇದೀಗ ನನ್ನಲ್ಲಿ ನನ್ನ ನಂಬುಗೆ

ವಿವಿಧ ಜನರಿಂದ ಪಟ್ಟಣವು ಅಳತೆಯಿಲ್ಲದೆ ಬೆಳೆಯುತ್ತಿದ್ದರೂ ಅಲ್ಲಿ ಇರುವವರಿಗೆ ವರ್ಷಾನುವರ್ಷ ತಮ್ಮ ಪಕ್ಕದ ಮನೆಯವರು ಯಾರು ಎಂಬ

ಪರಿಚಯವಿರುವುದೇ ವಿರಳ. ಶರತ್ಕುಮಾರನು ಬಾಡಿಗೆ ಹಿಡಿದ ಮನೆ ಯಾದರೋ ಹೈದರಗೂಡದ ತೀರ ಕೊನೆಯಲ್ಲಿ. ಬೆಳಿಗ್ಗೆ ಎದ್ದವರೆ ಈ ಯುವಕ ಯುವತಿಯರು ಸ್ನಾನ, ಊಟ, ಉಡುಪು, ತೊಡಪು ಇವುಗಳಲ್ಲಿ ತೊಡಗಿ ಒಂಬತ್ತುವರೆಯೊಳಗಾಗಿ ಈರ್ವರೂ ಒಂದೊಂದು ದಿಕ್ಕಿಗೆ. ಕಾಲೇಜಿನಲ್ಲಿ ಡೆಮಾನ್ಸ್ಟ್ರೇಟರನಾಗಿದ್ದ ಶರತನು ಬಸ್ ಸ್ಟಾಂಡಿಗೆ; ಮೆಥಾಡಿಸ್ಟ ಗರ್ಲ್ಸ್ ಸ್ಕೂಲಿಗೆಂದು ಸುಶೀಲೆಯು ಶಿಂಗಕೋಟೆಯ ಹಾದಿಗೆ.

"ಏನು ವಿಚಿತ್ರ ಸಂಸಾರ ಇವರದು! ಪತಿಪತ್ನಿಯರೆನ್ನಬೇಕೋ? ಅಂಥ ಲಕ್ಷಣ ಯಾವುದೂ ಇಲ್ಲ: ಸೋದರ ಸೋದರಿಯರೇ ಇರಬೇಕು, ಎಂದು ನೆರೆಹೊರೆಯವರು ಆಗಾಗ ಆಡಿಕೊಳ್ಳದಿದ್ದರೆ ಜನವೋ ದನವೋ ಎಂಬ ಗಾದೆ ಮಾತು ಸುಳ್ಳಾಗುವುದಿಲ್ಲವೆ?

ಇಂದು ಶುಕ್ರವಾರ ಕಾಲೇಜಿಗೆ ಬಿಡುವೆಂದು ಶರತನು ಮನೆಯಲ್ಲಿ; ಇಡೀ ದಿವಸ ಮನೆಯಲ್ಲಿದ್ದು ಬೇಸರವೆನಿಸಿತ್ತೆಂದು ನಿತ್ಯಕ್ಕಿಂತಲೂ ಕೊಂಚ ಮೊದಲೇ ಟೆನಿಸಕ್ಕೆ ಹೊರಡಲು ಸಿದ್ಧನಾದನು. ಆದರೆ ಹೊರಗೆ ನೋಡಲು ಬಾನ ತುಂಬಾ ಮೋಡಗಳು; ಗುಡುಗುಡಾಟವೂ ನಡೆದಿತು. ಸಾಯಂಕಾಲದ ೪॥ ಗಂಟೆಯಾಗಿದ್ದರೂ ೬॥ ಗಂಟೆಯಂತೆ ಕಂಡಿತು. ಒಡನೆ ಮಳೆಯೂ ಭೋರ್ಗರೆಯಿತು ನೀರು ಡಾಂಬರದ ಬೀದಿಯನ್ನು ತೊಳೆದು ಹರಿದವು ತೊಯ್ದು ತಪ್ಪಟೆಯಾದ ಸುಶೀಲೆಯು ಮನೆಯೊಳಗಾದಳು

"ಕೊಂಚ ತಡೆದು ಬರಬಾರದೆ?"

"ನನಗೇನು ಗೊತ್ತು! ಈ ಜಡಿಮಳೆಯು ಹಾದಿಯಲ್ಲಿ ತಾನೇ ಬಡಿದೀತು" ಎಂದು ಸುಶೀಲೆಯು ಕುಲುಕುಲು ನಕ್ಕಳು ಬಟ್ಟೆ ಬದಲಾಯಿಸುವ ಗಡಿಬಿಡಿಯಲ್ಲಿ ಅವಳ ಸೆರಗು ಅತ್ತಿತ್ತಾಯಿತು. ಈ ಎರಡು ಮೂರು ವರ್ಷಗಳಿಂದ ಅಷ್ಟು ಉದ್ದವಾಗಿರದಿದ್ದರೂ ದಟ್ಟವಾಗಿ ಬೆಳೆದ ಕೇಶರಾಶಿಯ ಮುಂಗುರುಳು ಅವಳ ಭಾಲದಲ್ಲಿ ಸುಳಿದುವು.

"ಎಲ್ಲಿ? ಆ ಡ್ರಾಯಿಂಗ ಟೇಬಲಿನ ಬೀಗದ ಕೈ ಎಲ್ಲಿಟ್ಟಿರುವೆನು, ಅಯ್ಯೋ!" ಎಂದು ತನ್ನನ್ನೇ ತಾನು ಬೈದುಕೊಳ್ಳುತ್ತ ಮನೆ ತುಂಬಾ ಸುಳಿದಳು, ಕುಣಿದಳು. "ಸಾಲದ್ದಕ್ಕೆ ಮನೆ ತುಂಬಾ ಮಬ್ಬು; ಸ್ವಿಚ್ಚಾದರೂ ಹಾಕಿರಿ, ಮಾರಾಯರೇ!" ಶರತನು ತಾನೊಬ್ಬ ಸಿನೆಮಾ ನಟಿಯನ್ನೆ

ನೋಡುತ್ತಿದ್ದವನಂತೆ ನಗೆ ನುಂಗಿ ನಿಂತಿದ್ದನು. "ನೀವಂತೂ ಇವಳು ಇನ್ನಿಷ್ಟು ಕುಣಿಯಲ್ಲಿ" ಎಂತ ನಿಂತಿರುವಿರಿ, ಎಂದವಳು ತಾನೇ ಬಟನ್ ಒತ್ತಿದಳು. ಶರತನ ಅಂಗಾಂಗದಲ್ಲಿಯೂ ವಿದ್ಯುತ್ಪ್ರವಾಹವಾಯಿತು. ನಗುತ್ತ ಎರಡು ಕಣ್ಣು ಸಾಲದೆಂಗು ಕನ್ನಡಕ ತೆಗೆದನು. ಕೊನೆಗೆ ಹತಾಶಳಾಗಿ ನಿಂತ ಸುಶೀಲೆಯು ಜಂಪರದ ಜೇಬಿನಲ್ಲಿ ಕೈಹಾಕಿದಳು; ಬಿದ್ದು ಬಿದ್ದ ನಕ್ಕಳು; ಕಾರಣ ಅರಿತಿದ್ದರೂ ಶರತನು ಖೇ ಖೇ ನಕ್ಕನು. "You Thief, come on!" ಎಂದು ಜೇಬಿನಿಂದ ಬೀಗದ ಕೈ ತೋರಿಸಿದಳು; ಕಾರಣ ತಿಳಿದು ಶರತನು ನಕ್ಕು ಮನೆಯನ್ನೆ ತಲೆಯ ಮೇಲೆ ಹೊತ್ತನು. ಸುಶೀಲೆಯು ಡ್ರಾಅರ ತೆರೆದು ತಿಳುವಾದ ಸೀರೆ ಝಾಲರಿನ ವೋಲಕಗಳನ್ನು ತೆಗೆದು ಪಕ್ಕದ ಕೋಣೆಯಲ್ಲಿ ಹೋದಳು.

"ನನ್ನಲ್ಲಿ ನನ್ನ ನಂಬಿಗೆಯಿಲ್ಲವೆ?" ಎಂದು ಇಂದಿಗೆ ಎರಡು ವರ್ಷ ಹಿಂದೆ ತಾನೇ ನುಡಿದುದನ್ನು ನೆನೆದು ಅವಾಕ್ಕಾಗಿ ನಿಂತನು.

ಶರತನು ತೊಟ್ಟ ಸೂಟನ್ನು ತೆಗೆದು ಆರಾಮುಕುರ್ಚಿಯಲ್ಲಿ ಒರಗಿದನು

ಊಟಕ್ಕೆ ಕೂತಾಗ ಸುಶೀಲೆಯು ಎಂದಿನಂತೆ ಅವೆಷ್ಟೋ ವಿಷಯುಗಳ ಪ್ರಸ್ತಾವನೆ ಮಾಡಿದಳು; ಆದರೂ ಶರತನು ಒಂದೊಂದೇ ವಾಕ್ಯಕ್ಕೆ ಸ್ವಲ್ಪ ವಿರಾಮ ಕೊಟ್ಟನು.

ಸುಶೀಲೆಯಾದರೋ ಅವನನ್ನು ಹುರುಪಿಗೆ ತರಬೇಕೆಂದು ಹಟತೊಟ್ಟು ವಿಷಯುವನ್ನು ಯೋಚಿಸುವಷ್ಟರಲ್ಲಿ "ಸಿಕ್ಕಿ ಬಾ" ಎಂದುಕೊಂಡವಳೆ "ಕುಮಾರ! ನಮ್ಮ ಮದಾಮು ಶಾರವರ ಕನ್ನಡವು ಅದೆಂಥ ಸವಿ...."

"ಅವರು ಮೊದಲು ಮಂಗಳೂರಿನ ಬಾಸೆಲ ಮಿಶನ್ ಕಂಪನಿಯಲ್ಲಿ ಕೆಲಸಮಾಡಿದವರೆಂದು ಕೇಳಿದ್ದೇನೆ."

ಅವರು ಇಂದು ನಮ್ಮ ಕ್ಲಾಸಿಗೆ ಬಂದಾಗ ಎಲ್ಲರಿಗೂ ಹೆಂಣಿನ ಹುಟ್ಟು ಎಂಬ ವಿಷಯುವನ್ನು ಕುರಿತು ನಿಬಂಧ ಬರೆಯುಲು ಹೇಳಿದರು...."

"ನೀನು ಬರೆದೆಯಾ?"

"ಒ.ವೋ! ಅದನ್ನು ನೋಡಿ "ಬಾಲೇ! ನಿನ್ನಿಂದ ಬಹಳ ಕಾರ್ಯ ವಾಗಬೇಕಾಗಿದೆ" ಎಂದರು. ಇಪ್ಪತ್ತು ವರ್ಷದವಳು ನಾನು, ಅವರು ಬಾಲೆ

ಎಂದಾಗ ನಾನು ಮತ್ತೇ ಹುಟ್ಟಿಬಂದೆನೇ, ಎಂದೆನಿಸಿತು, ಆದರೆ ಇತರ ಗೆಳತಿಯರು ನಕ್ಕರು."

"ಯಾರು ನಕ್ಕರೇನು? ಸುಶೀಲೇ! ಇನ್ನೆರಡು ವರ್ಷ ಹೀಗೆ ಮನಸ್ಸು ಕೊಟ್ಟು ಎಚ್. ಎಸ್. ಎಲ್. ಸಿ. ಪಾಸುಮಾಡು. ನಾನೂ ಮನೆಯಲ್ಲಿ ಅದಕ್ಕೆ ಸಾಕಷ್ಟು ಯತ್ನಮಾಡುವೆನು. ಎಲ್ಲಿ? ನೀನು ಬರೆದ ನಿಬಂಧ ಮನೆಗೆ ತಂದಿರುವಿಯಲ್ಲಾ; ಊಟವಾದ ಮೇಲೆ ನೋಡೋಣ ಪಾಠದ ಸಮಯದಲ್ಲಿ" ಎಂದು ಪ್ರೋತ್ಸಾಹವಾಗಿ ನುಡಿದರೂ ಅವಳನ್ನು ನೋಡುವುದಾಗದೆ ತನ್ನ ದುರ್ಬಲ ಮನಸ್ಸನ್ನು ತಾನೇ ಶಪಿಸಿದನು.

ಊಟವಾದ ನಂತರ ಇಬ್ಬರೂ ತಮ್ಮ ತಮ್ಮ ಕೋಣೆಯಲ್ಲಿ. ಸುಶೀಲೆಯು ಕುಮಾರವ್ಯಾಸನ ವಿರಾಟಪರ್ವವನ್ನು ಓದಬೇಕೆಂದು ಪುಸ್ತಕ ಎತ್ತಿದವಳೇ "ಇಲ್ಲ; ನನ್ನ ಇಂಗ್ಲಿಷು ಬಹಳ ವೀಕ್; ಟೆಕ್ಸ್ಟುಬುಕ್ 'Pride and Prejudice' ತಾನೇ ಇನ್ನೊಮ್ಮೆ ಇನ್ನೊಮ್ಮೆ ಓದಬೇಕು," ಎಂದು ಅದರಲ್ಲಿ ಚಿತ್ತವಿಟ್ಟಳು. ಇತ್ತ ಶರತನು ಮಂಚದಿಂದ ಕುರ್ಚಿಗೆ, ಕುರ್ಚಿಯಿಂದ ಆರಾಮಕುರ್ಚಿಗೆ, ಕೊನೆಗೆ ಅದೆಲ್ಲ ಬಿಟ್ಟು ಆ ಸಣ್ಣಕೋಣೆಯ ಪೂರ್ವದಿಂದ ಪಶ್ಚಿಮಕ್ಕೆ, ಪಶ್ಚಿಮದಿಂದ ಪೂರ್ವಕ್ಕೆ ಅಲೆದನು. "ನನ್ನಲ್ಲಿ ನನಗೇ ನಂಬಿಗೆಯಿಲ್ಲವೆ? ಎಂದು ಗೊಣಗಿದನು.

ಪಾಠ ಹೇಳಲಿಕ್ಕೆ ಶರತನು ಈಗ ಬಂದಾನು ಆಗ ಬಂದಾನು ಎಂದು ಸುಶೀಲೆಯು ಕೋಣೆಯ ಬಾಗಿಲಿಗೇ ದೃಷ್ಟಿಯಿಟ್ಟಳು; ಇತ್ತ ಶರತನೂ ತನ್ನ ಕೋಣೆಯ ಹೊರಗೆ ಕಾಲಿಟ್ಟವನು ಧೈರ್ಯ ಸಾಲದೆ ಹಿಂಜರಿದನು ಆದರೆ ಮನಸ್ಸಿನ ಉನ್ಮತ್ತ ಅರಸನೆದುರು ಬುದ್ಧಿಯ ಪ್ರಧಾನನ ಆಟವು ಸಾಗುವುದೆಂತು? "ನಾನು ಹುಟ್ಟಿದ ಮನೆಯನ್ನು ಅಗಲಿದವನು; ಅವಳಿಗಾಗಿ ಅಗಲಿದವನು ಒಂದು ರೀತಿ ಇದು ಸಾಮಾಜಿಕ ಸುಧಾರಣೆಯಲ್ಲಿ ಮುಂದಡಿಯಿಡುವಂತೆ ಅಲ್ಲವೆ? ಆದರೆ ಸಾಹಸವನ್ನೆಸಿಸುವವನಿಗೆ ಇಷ್ಟು ಅಧೈರ್ಯವೇಕೆ? ಇದು ಪಾತಕವೆ? ವಿವೇಕವು ಹೌದೆನ್ನುವುದು; ಆದರೆ ಮನಸ್ಸಿನೋಟವನ್ನು ತಡೆಯಲಾಗದೆ ಬುದ್ಧಿಯು ಕೈಬಿಡುತ್ತಿದೆ; ಎಂದೂ ಅನುಭವಿಸದ ಈ ಕಲಮಲದ ಪರಿಣಾಮವಾದರೂ ಏನಾಗುವುದು? ನಾನು ಸೂಚಿ

ಸುವ ಪುನರ್ವಿವಾಹಕ್ಕೆ ಅವಳು ಒಪ್ಪದಿದ್ದರೆ........" ಕಾಮನ ಸಂಚಾರ ವಿರುವಲ್ಲಿ ರಾಗದ್ವೇಷಗಳು ಅವನಿಗೆ ಸೇವಕನಾಗಿ ಬರುವವೋ ಏನೊ?

"ಒಪ್ಪದೆ ಏನು? ನನ್ನನ್ನು ತನ್ನ ಪ್ರಾಣಪದಕವೆಂದು ತಿಳಿದಿರುವ ತಂದೆಯ ರೋಷಕ್ಕೆ ಅವಳಿಗಾಗಿ ತುತ್ತಾಗಿರುವೆನು. ಊರಿಗೆ ಹೋದರೆ ಅರಸುಮಗನಂತೆ ಮೆರೆಯಬಲ್ಲೆನಾದರೂ ಅವಳಿಗಾಗಿ ತಾನೇ ಈ ಎಪ್ಪತ್ತೈದು ರೂಪಾಯಿಗಳಿಗೆ ತೊತ್ತಾಗಿ ದುಡಿಯುತ್ತಿರುವೆನು. ನನ್ನ ಬೇಡಿಕೆ ಒಪ್ಪದಿದ್ದರೆ ಅವಳಂಥ ಕೃತಘ್ನಳು ಮತ್ತಾರು? ಇಷ್ಟೇಕೆ, ಇಲ್ಲೇ ಕೋಣೆಯಲ್ಲಿ ಇದ್ದಾಳೆ; ಕೇಳುವುದು ಬೇರೆ ಅನೀತಿಯಲ್ಲವೆ?" ಹೊರಗೆ ಬಂದನು; ಅವಳ ಕೋಣೆ ತಲಪುವಷ್ಟರಲ್ಲಿ ಅದೆಷ್ಟೊ ತಡವರಿಸಿದನು; "ಇಷ್ಟು ಹೊತ್ತಾಯಿತು, ಇಂದು ಶರತನು ಬರಲಿಕ್ಕಿಲ್ಲ" ಎಂದು ಕದ ಮುಚ್ಚುವಷ್ಟರಲ್ಲಿ ಅವನೇ ಅದನ್ನು ನೂಕಿದನು.

"ಅಷ್ಟು ಅಸ್ವಸ್ಥವೆನಿಸಿದ್ದರೆ ಇಂದು ಬಿಡಬೇಕಾಗಿತ್ತು. ಪಾಠವೇನು ಇಂದಿಲ್ಲ ನಾಳೆ ಸಾಗುವುದು."

"ಇಲ್ಲ; ಸುಶೀಲಾ! ಪರೀಕ್ಷೆಯ ದಿವಸ ಬಹಳ ಸಮೀಪ ಬಂದಿವೆ," ಎಂದಾಗ "ಯಾರ ಪರೀಕ್ಷೆ?" ಎಂಬ ಅಕ್ಷರಗಳು ಅವನೆದುರು ಓಡಾಡಿದುವು ಅವನು ನೋಡಿ ಅರುವು ಮುರುವು ಹಿಡಿದವನಂತೆ ಆದನಾದರೂ ಸಾವಧಾನ ತಾಳಿ ಅವಳೆದುರು ಕುರ್ಚಿಯಲ್ಲಿ ಕುಳಿತನು. ಅವಳು ಓದುತ್ತಿದ್ದಾಗಲೇ ತೆರೆದ ಪುಟ ಸಹಿತ ಮೇಜಿನ ಮೇಲೆ ತಲೆಕೆಳಗೆ ಮಾಡಿಟ್ಟ ಪುಸ್ತಕವನ್ನೆತ್ತಿ "ಓ! ನೀನು ಕೂಡ ಇಂಗ್ಲಿಷದ ಕಡೆಗೇ ವಿಶೇಷ ಲಕ್ಷ್ಯ ಕೊಟ್ಟಿರುವೆ—ಬೇಶ್" ಎಂದು ಶರತನು ಇಸ್ಪಿಟ್ ಕಾರ್ಡಿನಂತೆ ಅದರ ಹಾಳೆಗಳನ್ನು ಜರಿದಾಡಿಸಿದನು.

ಘಂ ಘಂ ಎಂದು ಹೊರಗಿನ ಹಾಲಿನಲ್ಲಿ ಗಡಿಯಾರು ಹನ್ನೆರಡು ಸಲ ಉಸುರಿತು.

"ಸುಶೀಲಾ! ಈಗ ಮಧ್ಯರಾತ್ರಿ. ಹಾಗಾದರೆ ಇಂದು ಯಾವ ಪಾಠವೂ ಬೇಡ."

ಅವಳು ಕೈ ಮರೆ ಮಾಡಿ ಆಕಳಿಸಿದಳು.

"ಅದೇನು ನಿನಗೂ ಆಕಳಿಕೆಯೆ? ಆದರೆ ನನಗೆ ಅದೇಕೊ ಇಷ್ಟು ಹರಟೆ ಮುಗಿಸಿ ಮಲಗಬೇಕೆನಿಸುವುದು.

"ನಿತ್ಯವೂ ಹತ್ತು ಹತ್ತೂವರೆ ಮೀರಿದರೆ ತೂಕಡಿಸುವವನು ಇಂದು ಹೀಗೇಕೆ?" ಎಂದೆನಿಸಿದರೂ ಹಾಗೆ ಹೇಳದೆ "ನಿನಗೂ ತಲೆನೋವು; ಕಣ್ಣು ಕೂಡ ಕೆಂಪಾಗಿವೆ; ಮುಖವೂ ಗದರಿಸುತಿದೆ; ಬೇಗ ಮಲಗುವುದೇ ಒಳಿತಲ್ಲವೆ?" ಎಂದಳವಳು.

ಮುಂದೆ ಹೇಗೆ ಸಾಗಬೇಕೆಂಬ ಯುಕ್ತಿಯನ್ನೆ ಹುಡುಕುತ್ತಿದ್ದ ಅವನು ತಾಳಲಾಗದ ತಲೆನೋವಿನ ಭಾವ ತೋರಿ, ಸುಶೀಲಾ! ಕೊಂಚ ತಲೆ ಉಜ್ಜುವಿಯಾ? ಎಂದವನೆ ಎದ್ದು ಅವಳ ಮಂಚದಲ್ಲೆ ಮೈ ಚಾಚಿದನು.

"ಅಮ್ಮಯ್ಯಾ! ನಿಜವಾಗಿ ಹಣೆಯು ಕೆಂಡವಾಗಿದೆ," ಎಂದು ಅವಳು ಮನಸಾ ನುಡಿದಳು

"ಊಂಹುಂ—ಕಣ್ಣಿಗೆ ಹಚ್ಚಬೇಡ ನಿನ್ನ ಅಮೃತಾಂಜನ, ತಲೆ ನೋವಿನ ಜೊತೆಗೆ ಕಣ್ಣುರಿಯು ಬೇಡ"

"ಇಲ್ಲ; ಕುಮಾರ! ಹೀಗೆ ಹುಚ್ಚನಂತೇಕೆ ಮಾಡುವೆ? ಕೊಂಚ ಮೆಲುಕಿನಲ್ಲಿ, ಕೊಂಚ ರೆಪ್ಪೆಗೆ ಹಚ್ಚಿದರೆ ಪಳಪಳ ನೀರು ಉದುರಿ ಶಾಂತಿ ಎನಿಸುವುದು."

ಅವಳ ಆಯುಷ್ಯದಲ್ಲಿ ಸುಮಾರು ಇಂಥಾದ್ದೊಂದು ಪ್ರಸಂಗ ನಡೆದಿದ್ದಿತಾದರೂ ಈ ಹೊಸ ಬಾಳಿನ ಶಿಕ್ಷಣ ಸಂಭ್ರಮದಲ್ಲಿ ಅದನ್ನು ಅಷ್ಟು ಗಮನಿಸಲಿಲ್ಲ.

"ಕುಮಾರ! ಈಗ ಹೇಗೆ?"

"ಸುಶೀಲಾ!"

"ಓ!"

ಅದಕ್ಕೆ ಉತ್ತರ ಏನು ಎಂಬುದು ಹೊಳೆಯದೆ ಒಳಗಿನ ಆತುರಕ್ಕೆ ಮತಿಗೆಟ್ಟು "ಸುಶೀಲಾ! ನಮ್ಮಿಬ್ಬರನ್ನು ಕುರಿತು ಜಗತ್ತು ಬಹಳ ಬಹಳ ಬಗೆ ಯುತ್ತಿರಬಹುದಲ್ಲವೆ?"

"ಕುಮಾರ!........"

"ಹಾಗಲ್ಲ ಸುಶೀಲೇ! ಜಗತ್ತಿಗೆ ನಾನು ಅಂಜುವೆನೆಂದಲ್ಲ. ಆದರೆ..... ಆ........"

ಇದೀಗ ಸುಶೀಲೆಯ ಹೃದಯವು ಚರ್ರೆಂದಿತು.

ಕಿಟಕಿಯ ಹೊರಗೆ ಮಿಂಚಿತು; ಕತ್ತಲೆಯು ತನ್ನ ಭಯಾನಕ ರೂಪವನ್ನು ತೋರಿತ್ತು. ಅಂದಿನ ಸೀನೀರಿನ ಬಾವಿ ಈಗ ಅವಳ ಕಣ್ಣೆದುರು ಬಂತು; ಆದರೆ ಇಂದು ಅವಳು ಅಂದಿನಂತೆ ಅದರಲ್ಲಿ ಹಾರಿದ ಬಾಲೆಯೂ ಅಲ್ಲ; ಅಬಲೆಯೂ ಅಲ್ಲ; ಇದೇ ಶರತನ ನೆರಳಲ್ಲಿ ಈ ಎರಡು ವರ್ಷಗಳಿಂದ ಸಬಲೆಯಾಗುವಂತೆ ಬೆಳೆದು ಮದಾಮು ಶಾರವರ ಕೌತುಕಕ್ಕೂ ಪಾತ್ರಳಾಗಿದ್ದಳು. "ಅಯ್ಯೋ! ಪುರುಷ ಜೀವವೇ! ಎಂದು ಇಂದು ಮರುಗಿದಳೇ ಹೊರತು ಅಂದಿನಂತೆ ಕರಗಲಿಲ್ಲ. ತನಗೆ ಪಾಠ ಹೇಳಲಿಕ್ಕೆ ಬಂದವನಿಗೇ ಪಾಠ ಹೇಳಲಿಕ್ಕೆ ಸಿದ್ಧಳಾದಳು.

"ಕುಮಾರ! ಪಿತ್ತ ಬೇರೆ ಆಗಿಲ್ಲವೇ ನಿನಗೆ? ಅಥವ ಕದಲಿದ ಚಿತ್ತದಿಂದ ಬೇರೆ ಈ ನಾಟಕವನ್ನು ನಡೆಸಿಲ್ಲವೇ?" ಎಂದು ನಕ್ಕಳಷ್ಟೆ.

ಇವಳ ದಿಟ್ಟತನವನ್ನೂ ತನ್ನ ಮುರ್ಖಾಳ ತನವನ್ನೂ ಅರಿತು ನಾಚಿದ ಕುಮಾರನು ಎದ್ದು ಕೂತನು. ತಾನು ಏನು ಕೇಳಿದ್ದಕ್ಕೂ ಇವಳು ಸರಲವಾಗಿ ಉತ್ತರ ಕೊಡ ವವಳು ಎಂದು ಮನಗಂಡನು; ಆದರೂ ಅವಳ ದಿಟ್ಟತನಕ್ಕೆ ಬೆರಗಾದ ಇವನು ಕೇಳಬೇಕೆಂದಿದ್ದರಲ್ಲಿನ ಬಹಳ ಮಾತು ಮರೆತೆನೆಂದು ಏನೋ ನುಡಿದನು.

"ಸುಶೀಲಾ! ಇನ್ನು ನನ್ನಲ್ಲಿ ನಿನ್ನ ನಂಬಿಗೆ ಉಳಿಯಲಾಗದು, ಅಲ್ಲವೆ?"

"ನನ್ನ ನಂಬಿಗೆ ಹಾಗಿರಲಿ; ನಿನ್ನಲ್ಲಿ ನಿನ್ನ ನಂಬಿಗೆಯಾದರೂ ಬೇರೂರಿದರೆ ನಾನು ಧನ್ಯಳು; ನಾವಿಬ್ಬರೂ ಜಗತ್ತಿಗೆ ಮಾನ್ಯರು.

"ಕುಮಾರ! ನಿನಗೆ ಈ ಬಗೆಯ ಮರುಳೆಂಬ ಕಲ್ಪನೆ ಕೂಡ ನನಗೆ ಇರಲಿಲ್ಲ. ನೀನು ಯುವಕನೇ ಹೌದು. ಅಂತೇ ನಿನ್ನಂಥ ಸಹೃದಯನಿಗೆ ಸಲ್ಲುವಂಥ ಸರಲೆಯ ಶೋಧನೆಯಲ್ಲೇ ನಾನು ಇರುವೆನು. ನಮ್ಮ ಕ್ಲಾಸಿನಲ್ಲಿ ಕೆಲವು ಕನ್ಯೆಯರಿಗೆ ಅಂಥ ಕಾಂತಿಯಿದೆ ಆದರೂ ನಿನ್ನ ಹೃದಯಮಾಧುರ್ಯವನ್ನು ನಾನು ಬಲ್ಲವಳು. ಅಂಥ ಮಾಧುರಿಯು ನನ್ನ ಗೆಳತಿಯರಲ್ಲಿ ಯಾರು ಎಂದು ಅದೆಂದಿನಿಂದ ಅರಸುತ್ತಿರುವೆನು. ಕುಮಾರ! ಉದಾತ್ತ ವಿಚಾರಗಳಿಂದ ಉದಯೋನ್ಮುಖನಾಗಿರುವ ನಿನಗೆ ಜೊತೆಗಾತಿಯಾಗಿ ಬರುವ ಉಷಾ ಸುಂದರಿಯನ್ನು ಕಾಣುವ ದಿವಸವೇ ನನಗೆ ಭಾಗ್ಯೋದಯ."

ಶರತನ ನಯನಗಳಲ್ಲಿ ಹನಿ ಮುತ್ತುಗಳು ಎಸೆದವು.

"ಆಮೇಲೆ ನೀನು?........"

"ನಿಮ್ಮಿಬ್ಬರ ಜೊತೆಯಲ್ಲೇ ಬಾಳಿ ನಾವೆಲ್ಲರೂ ಸೇರಿರುವ ಜೀವನದಲ್ಲಿ ನನ್ನ ಸವಿಯನ್ನು ಬೆರೆಸುವೆನು. ಇನ್ನು ಮಲಗು ಕುಮಾರ! ಕೊಂಚ ಇಲ್ಲೇ ಮಲಗು; ಅಸ್ವಸ್ಥವಾದ ನಿನ್ನ ತಲೆಯನ್ನು ಇನ್ನಿಷ್ಟು ಉಜ್ಜುವೆನು."

"ಇಲ್ಲ ಸುಶೀಲಾ! ನೀನೂ ಮಲಗು," ಎಂದಷ್ಟೆ ನುಡಿದು ಶರತನು ಅಲ್ಲಿಂದ ಎದ್ದನು.

ಇಡೀ ರಾತ್ರಿ ನಿದ್ರೆಯಿಲ್ಲವಾದರೂ ಆ ಮನನಾಮೋದದ ವಿಹಾರದಲ್ಲೇ ಅವನು ಬೆಳಗು ಕಾಣುವನು.

ಅದೇ ಆಗ ಎದ್ದಿದ್ದ ಸುಶೀಲೆಯ ಬಳಿಗೆ ಬಂದನು.

"ಸುಶೀಲಾ! ಈವರೆಗೆ ನನ್ನಲ್ಲಿ ನನಗೆ ನಂಬಿಗೆಯಿದ್ದಿಲ್ಲವೆಂದು ನಾನು ತಂದೆಯವರಿಗೆ ಪತ್ರ ಬರೆದಿಲ್ಲ; ಅವರಾದರೊ ಬಹಳ ಆಚಾರಶೀಲರು, ಭಾವಿಕರು; ತಮ್ಮ ತತ್ವಕ್ಕೆ ನಿಷ್ಠವಾದ ಈ ಭಾವಿಕರ ಹೃದಯವು ವಜ್ರದಂತೆ ಕಠಿಣವಿದ್ದರೂ ನೈಜ ತೀಳಿದರೆ ಅದು ಮೇಣಕ್ಕೂ ಮೃದುವಾಗಿರುವುದು. ಇಡೀ ನಮ್ಮ ಜಾಗೀರ ಹಳ್ಳಿಗೆ ಅವರು ತಂದೆಯ ಸಮಾನರಾಗಿರುವರು. ನೀನು ಇಂಥವಳೆಂದು ತಿಳಿದರೆ ಖಚಿತವಾಗಿ ನೀನು ಅವರಿಗೆ ದತ್ತಕ ಮಗಳಾಗುವೆ."

"ಈ ವಾತ್ಸಲ್ಯದ ಕರುಳಿಗೆ ನಾನು ಹೂವಾಗಿ ಅರಳುವೆನು."

"ಅಂತೇ ಇಂದು ನಾವು ಅವರಲ್ಲಿಗೆ ಹೋಗಿ ಅವರಿಗೆ ಅರಿಕೆ ಮಾಡಿಕೊಳ್ಳೋಣ."

"ಓ ಸಿದ್ಧಳು. ವಿಜಯದಶಮಿಯ ಬಂಗಾರವನ್ನು ಅವರ ಚರಣಗಳಲ್ಲೆ ಮುಡಿಯೋಣ."

## ಹಸ್ತಾಂದೋಲನ

ಸ್ವದೇಶಿ ಆಂದೋಲನವೆಂದೋ, ನಮ್ಮ ಭಾರತದಲ್ಲಿ ಕಾಗದದ ಗಿರಣಿಗಳು ಕಡಿಮೆಯೆಂದೋ, ನಮ್ಮ ಬಾಂಧವರಾದ ಮಹಾರಾಷ್ಟ್ರಿಯರ ನಾಡಿನ ಒಲುಮೆಯೆಂದೋ, ಈ ಪುಣೆಯ ಬಳಿಯಲ್ಲಿನ ಕಾರಖಾನೆಯ ಕಾಗದಗಳೆಲ್ಲ ಪುಣೆಯ ವ್ಯಾಪಾರ ವ್ಯವಹಾರಗಳಿಗೇ ಸರಿಹೋಗುವುವು ಪುಣೆಯ ಆಚೆಗಿನ ಮುಂಬಯಿಯಲ್ಲಿ ಈಚೆಗಿನ ಸೊಲ್ಲಾಪುರದಲ್ಲಿ ಕೂಡ ಅವು ಸಿಗುವುದು ದುರ್ಲಭ; ಈಗಲಂತೂ ಎಕ್ಸಪರ್ಟ್ ಸುಬ್ಬರಾಯರ ನೇತೃತ್ವದಲ್ಲಿ ಹೊರಡುವ ಕಾಗದ ಗಿರಣಿಯ ಸ್ಟೋರಿನಲ್ಲಿ ಮಾದರಿಗೆಂದು ನೋಡಲು ಕೂಡ ಅಪರೂಪವಾಗಿವೆ. ಹೀಗಿರುವಾಗ ನಮ್ಮ ಕರ್ನಾಟಕದಲ್ಲಿ ಅವು ಕಾಣುವುದು ಹೇಗೆ? ಆದರೂ ಸುಬ್ಬರಾಯರು ಕನ್ನಡಿಗರು ಎಂಬ ಹೆಮ್ಮೆಯಲ್ಲಿ ತೃಪ್ತಿಪಡಲಿಕ್ಕೆ ಯಾರ ಅಡ್ಡಿ ಏಕೆ? ಅಲ್ಲದೆ ಇಂಥ ಹೆಮ್ಮೆಯಲ್ಲಿ ನಾವು ಕೂಡ ಅಷ್ಟೇ ಉದಾತ್ತರು, ಅಲ್ಲವೇ?

ತ್ರಿಕಾಲಕ್ಕೂ ತಾಳಿಬಾಳುವ ಸುಂದರ ವಾಸ್ತುಶಿಲ್ಪಗಳ ನಿಲಯಗಳನ್ನು ನಿಲ್ಲಿಸಿ ಪ್ರಪಂಚದ ಮನ್ನಣೆಗೆ ಪಾತ್ರರಾಗಿರುವವರಲ್ಲದೆ, ಸಲಹೆಕೊಟ್ಟ ಮಾತ್ರಕ್ಕೆ ಸಾವಿರಾರು ರೂಪಾಯಿಗಳನ್ನುಗಳಿಸಬಲ್ಲ ಜಗದ್ವಿಖ್ಯಾತ ಆ ಇಂಜಿನಿಯರ ಜಗದೇವರಾಯರು ಅಚ್ಚ ಕನ್ನಡಿಗರೇ! ಓಹೋ! ಆ 'ತಾಯಿಯಡಿಯಲ್ಲಿ' (At the feet of the Mother) ಎಂಬ ತೆಲಗು ಚಿತ್ರಪಟದಲ್ಲಿ ಕೆಲಸಮಾಡಿ ಹೆಸರಾಗಿರುವ ಆ ಮಾಸ್ಟರ ಮೇಘದೂತರು ಕನ್ನಡಿಗರೇ! ಬೆಜವಾಡೆಯಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ಮೊದಲನೇ ತರಗತಿಯ ಬಹುಮಾನ ಪಡೆದು ಅಲ್ಲಿನವರು ತೆರದ ಕಲಾಶಾಲೆಗೆ ಪ್ರಿನ್ಸಿಪಾಲರಾಗಿರುವ ಕಲಾಧುರೀಣ ವೀರಭದ್ರಪ್ಪನವರು ನಮ್ಮ ಕನ್ನಡಿಗರೇ ಅಲ್ಲವೆ? ನಾಗಪುರದ ಸಂಗೀತ ಸಭೆಯಲ್ಲಿ ಗಂಧರ್ವ ಅವತಾರವೆಂದು ಬಿರುದು ಪಡೆದಿರುವ ಆ ಮಧುಸೂಧನರಾಯರು ನಮ್ಮ ಕರ್ನಾಟಕದವರೇ! ಒಂದೇ ಎರಡೇ! ಸರಸ್ವತಿಯ ನವಿಲಿಗೇಸು ಗರಿಗಳೋ ಅಷ್ಟೇ ವಿದ್ಯೆಯ ಶಾಖೆಗಳು, ಪ್ರತಿ ಶಾಖೆಯಲ್ಲಿಯೂ ಇತರರೊಂದಿಗೆ ಸರಿಸಮಾನಸ್ಕರಾದವರು ನಮ್ಮಲ್ಲಿಯೂ ಇದ್ದಾರೆ; ಆದರೆ

ನೂರಕ್ಕೆ ತೊಂಬತ್ತರಷ್ಟು ಇಂಥ ಗುಣವಂತರು ನಮ್ಮಲ್ಲಿ ಅವರಿಗೆ ಆಸ್ಪದವಿಲ್ಲದೆ ಕರ್ನಾಟಕದ ಹೊರಗಡೆಯಲ್ಲಿ; ನಮ್ಮ ನಾಡುತಾಯಿ ಕನ್ನಡತಿಯು ಮಾತ್ರ ಬಡ ಮುತ್ತೈದೆ ಎಂದು ನುಡಿಯುವವನು ನಮ್ಮವರಿಗೆ ಕಟುಭಾಷಣಿ; ನೆರೆಯವರಿಗೆ ದುರಭಿಮಾನಿ

"ಮಿಸ್ಟರ ಸುಬ್ಬರಾವ್! ನಿಮ್ಮ ನೈಪುಣ್ಯಕ್ಕೆ ನಮ್ಮ ಡಾಯ್ರೆಕ್ಟರ್ಸರಲ್ಲಿ ಭಿನ್ನಾಭಿಪ್ರಾಯವಿಲ್ಲವಾದರೂ ಕಾಗದದ ಉತ್ಪತ್ತಿಯಲ್ಲಿ ಈ ಮೂರು ವರ್ಷದಿಂದ ಬಹಳ ಕಡಿಮೆಯು ಪ್ರಮಾಣ ಎಂದು ಎಲ್ಲರೂ ವಿಷಾದವನ್ನು ಸೂಚಿಸಿಸಿದರು; ಕಾರಣ ಈಗಿನದಕ್ಕೆ ಎರಡಷ್ಟಾದರೂ ಮಾಲು ನಮ್ಮ ಗಿರಿಣಿಯಿಂದ ಹೊರಬೀಳಬೇಕೆಂದು ತಿಳಿಸಲು ಅಪ್ಪಣೆಯಾಗಿದೆ, ದಯವಿಟ್ಟು ಗಮನಿಸಬೇಕು." ಎಂದು ಮ್ಯಾನೇಜರರು ನುಡಿದರು.

"ಸಾಹೇಬ, ಹಾಗೆ ಮಾಡಬೇಕಾದರೆ ಕೂಲಿಯ ಜನರನ್ನು ಈಗಿನದಕ್ಕೆ ಎರಡಷ್ಟಾಗಿ ಬೆಳೆಸಬೇಕು. ಈಗ ಇದ್ದವರಿಂದ ಅಷ್ಟು ಕೆಲಸ ತೆಗೆಯಲು ಸಾಧ್ಯವಿಲ್ಲ."

"ಅದೇಕೆ? ನಿಮಗೂ ಮೊದಲಿನ ಮಹಾಶಯರು ಇದಕ್ಕೂ ಮೂರು ನಾಲ್ಕು ಪಾಲು ಉತ್ಪಾದನೆ ತೋರಿಸುತ್ತಿದ್ದರು."

"ಅದು ಸರಿಯೇ! ಸಾಹೇಬ! ಕೂಲಿಯುವರಾದರೊ ಗಿರಣಿಯ ಯಂತ್ರಗಳಲ್ಲವಷ್ಟೆ."

"ಛೆ; ಛೆ; ಇಲ್ಲಿ ನಿಮ್ಮ ನೋಕಾಲಿರುವಂದ ಪ್ರಯೋಗಕ್ಕೆ ಆರಂಭವಾದರೆ ನಮ್ಮ ಗಿರಿಣಿಗೆ ನಾಳೆಯೇ ಬೀಗ ಬೀಳುವುದು. We are businessmen. ಒಟ್ಟಿಗೆ ಡಾಯರೆಕ್ಟರುಗಳು ಬಯಸುವಂತೆ ತಾವು ಇದೇ ತಿಂಗಳಲ್ಲಿ ಆ ಪ್ರಗತಿಯನ್ನು ತೋರಿಸಬೇಕು."

"ಸಾಹೇಬ, efficiency, ಇಟ್ಟುಕೊಂಡು ಇಷ್ಟೇ ಜನರಿಂದ ಅಷ್ಟು ಪ್ರಗತಿಯನ್ನು ತೋರಿಸುವುದು ಅಸಾಧ್ಯವೇ ಸರಿ"

"I am sorry. ನಮಗೆ ಮತ್ತೊಬ್ಬ Expert ನನ್ನು ನೋಡಬೇಕಾಗುವುದು."

"That is all right, Thank you."

ಸಭ್ಯಾಚಾರಕ್ಕೆ ತಕ್ಕ ಹಸ್ತಾಂದೋಲನದಲ್ಲಿ ಇಬ್ಬರೂ ಹಸನ್ಮುಖರಾಗಿಯೇ ಕಂಡರು.

ಗಿರಣಿಯು ಸಿಳ್ಳು ಉಸುರಿತು.

---

## ೧೮

## ಮಿಲನ

ಎಚ್ಚತ್ತ ಕರ್ನಾಟಕ, ವಿಶಾಲಭಾರತ, ವಿಶ್ವಪ್ರಪಂಚ, ಇವುಗಳಲ್ಲೇ ಹಿಗ್ಗಿ ಹಾರಾಡುವ ಜೀವದ ಹಕ್ಕಿಗಳಿಗೆ ಹೈದರ ಗೂಡದಲ್ಲಿನ ಚಿಕ್ಕ ಹಳ್ಳಿಯು ಸಾಲದಾಯಿತೆಂದೋ, ಎಲ್ಲಕ್ಕೂ ಮಿಗಿಲಾಗಿ ಸತ್ಯನೀತಿಗಳಿರುವಲ್ಲಿ ಸಚ್ಚಿದಾನಂದನೆ ಸಹಾಯಕನೆಂದೋ, ಬಂಧು ಭಗಿನಿಯರ ಜೋಡಿಗಳು ಅಡವಿ ಹೋಗಿ ಊರಾಗಿರುವ ಬೇಗಂಪೇಟೆಯ ತಂಗಾಳಿಯ 'ತನಿಮನೆ' ಯಲ್ಲಿ ಪಟಾಂಗಣವು ವಿಶಾಲವಾಗಿದ್ದರೂ ಎಲ್ಲೆಲ್ಲಿಯೂ ಹಸಿರು ಹಾಸಿ ಬಂಣ ಬಂಣದ ಹೂಗಳಿಂದ ಹಬ್ಬಿದ ಬಳ್ಳಿಗಳ ಹುಟ್ಟು, ಮನೆಯ ಮುದ್ದು ಮಾಟದ ಕಟ್ಟು, ಇವುಗಳಿಂದ 'ತನಿಮನೆ' ಯೆಂದು ಆ ಮನೆಗೆ ಇಟ್ಟ ಹೆಸರು ತುಂಬಾ ಸಾರ್ಥಕವಾಗಿದೆ ಯಜಮಾನರಾದ ವಯೋವೃದ್ಧ ಜಾಗೀರುದಾರರು ಹೊಟ್ಟೆಯಲ್ಲಿ ಹುಟ್ಟದ ಮಗನನ್ನೂ ದತ್ತಕ ಮಗಳನ್ನೂ ಕಂಡು ಸಂತೃಪ್ತಿ ಹೊಂದಲು ಆಗಾಗ ಇಲ್ಲಿಗೆ ಬರುತ್ತಿರುವರು.

'ಕೂಸಿನ ಕಾಲು ತೊಟ್ಟಿಲಲ್ಲಿ' ಎಂಬಂತೆ ವಿದ್ಯಾರ್ಥಿಯಾಗಿದ್ದಾಗಿನಿಂದ ಶರತನಿಗೆ ಲೋಕಸಂಗ್ರಹದ ಹುಚ್ಚು; ಕಾಲೇಜಿನಲ್ಲಿ ಸೆಕ್ರೆಟರಿ, ಜನರಲ ಸೆಕ್ರೆಟರಿಯಾಗಿದ್ದನೆಂದು ಸಂಸ್ಥೆಯ ಸಂಘಟನೆಯಲ್ಲಿ ಇವನಿಗೆ ಒಳ್ಳೆ ಕೈಚಳಕ. ಈ ಎರಡು ವರ್ಷದಿಂದ ಹೈದ್ರಾಬಾದಿನ ಕರ್ನಾಟಕ ಸ.ಘಕ್ಕೆ ಇವನೆ ಕಾರ್ಯದರ್ಶಿ.

"ಇಂದು ಮುಂಜಾವಿನಿಂದ ತನ್ನ ಮೋಟಾರು ಸಾಯಕಲ್ಲ ಹತ್ತಿದವನೆ ಎಲ್ಲ ಪ್ರಮುಖ ಕನ್ನಡಿಗರ ಮನೆಗಳಿಗೆ ಪ್ರದಕ್ಷಿಣೆ ಹಾಕಿದನು. ನಾಳೆ ಪೇಪರ

ಎಕ್ಸಪರ್ಟ ಜಿ. ಎಸ್. ಸುಬ್ಬರಾಯರ ಶುಭಾಗಮನ; ತನ್ನ ಕರ್ನಾಟಕ ಸಂಘದಲ್ಲಿ ಅವರಿಗೆ ಸಂತೋಷಕೂಟ! ಕೇಳುವುದೇನು? "ನಾವು ಕನ್ನಡಿಗರು. ಡಿಲ್ಲಿಯ ಕುತುಬಮಿನಾರಕ್ಕೂ ಉನ್ನತವಾದ ಶಿಖರವನ್ನೇರಬೇಕು" ಎಂಬ ಕಲ್ಪನಾತರಂಗದಲ್ಲಿ ಕಾಲೇಜಿಗೆ ಹೊತ್ತಾಯಿತೆಂಬ ಅರಿವೂ ಇಲ್ಲದಾಯಿತು; ನೆನಪಾದೊಡನೆ ಊಟವಿಲ್ಲದೆ ಕಾಲೇಜಿಗೆ ನಡೆದನು

ಮರುದಿವಸ ರಥಸಪ್ತಮಿಯ ರಜೆಯೆಂದು ಮುಂಜಾನೆ ಎಂಟು ಗಂಟೆಗೆ ಜಮೀನ್ದಾರ ಸುಧೀರರಾಯರ ಭವನದಲ್ಲಿ ಸಂತೋಷಕೂಟವೆಂದು ಗೊತ್ತಾಗಿತ್ತು.

"ಸುಶೀಲೇ! ನಿನಗೂ ನಮ್ಮ ಸಂಘದವರು ಔತಣ ಕೊಟ್ಟಿಲ್ಲವೆ? ಏಳು ಹೊತ್ತಾಯಿತು ಹೊರಡೋಣ."

"ಕುಮಾರ! ಅದೇಕೊ ಒಲ್ಲೆನಿಸುವುದು; ಆದರೆ ಈ ಮಾನ್ಯ ಅತಿಥಿಗಳಿಗೆ ಇಂದು ಇಲ್ಲಿಗೇ ಊಟಕ್ಕೆ ಕರೆದು ತಾ."

"ಬೇಶ್!" ಎಂದು ಹುರುಪಿನಿಂದ ಸಭೆಗೆ ಮೊದಲು ಔತಣ ಕೊಡುವುದು ಲೇಸೆಂದು ಅವನು ಹೊರಟೇ ಬಿಟ್ಟನು.

ನಿಯಮಿತವಾದಂತೆ ಜಮೀನ್ದಾರರ ಮನೆಯಲ್ಲಿ ಯಂತ್ರವಾಹನಗಳು ಸಾಲಾಗಿ ನಿಂತವು ಸಂತೋಷಕೂಟವು ಸಡಗರದಲ್ಲಿ ಮುಕ್ತಾಯವಾಯಿತು.

ಔತಣವಿದ್ದಂತೆ ಸುಬ್ಬರಾಯರು ಶರತನ ಮೋಟಾರು ಸಾಯಕಲ್ಲಿನ ಬಾಕ್ಸದಲ್ಲಿ ಆರೂಢರಾದರು. ಅತಿಥಿಗಳ ಜೊತೆಗೆಂದು ಶರತನು ಒಬ್ಬಿಬ್ಬ ಗೆಳೆಯರಿಗೂ ಬಿನ್ನವಿಸಿದನು. ಆದರೆ ಅಂದು ಹಬ್ಬ, ಮನೆಯವರಿಗೆ ಊಟಕ್ಕಿಲ್ಲದಿದ್ದರೆ ಮನೆಯವರಿಗೆ ಅಸಮಾಧಾನ, ಎಂದು ಅವರು ಕ್ಷಮಾಪಣೆ ಬೇಡಿದರು.

ರಥಸಪ್ತಮಿಯ ಹಬ್ಬವೆಂದು ಯಜಮಾನ ಜಾಗೀರುದಾರರೂ ಅಂದೇ ಬಂದಿದ್ದರು. ಎಂದಿನಂತೆ ದೇವರ ಮನೆಯಲ್ಲಿ ಈಗಾಗಲೇ ತಮ್ಮ ಆಸನದಲ್ಲಿದ್ದರು. ಸುಶೀಲೆಯು ಶರತನ ಕೋಣೆಯಲ್ಲಿ.

ತನಿಮನೆಯ ತಲೆಬಾಗಿಲು ತೆರೆದಿತು.

ಮಾನ್ಯ ಅತಿಥಿಗಳು ಮನೆಯ ಅಂದವನ್ನು ನೋಡಲೆಂದು ದೃಷ್ಟಿ ಎತ್ತಿದ್ದರು; ಕೋಣೆಯಿಂದ ಬಂದ ಯುವತಿಯನ್ನು ಕಂಡು ಸದಾಚಾರಕ್ಕೆ ಸರಿಯಾಗಿ ದೃಷ್ಟಿ ಹೊರಳಿಸಿ ಕುಮಾರನೊಂದಿಗೆ ಪಾವಟಿಗೆ ಏರಿದರು.

"ಸುಬ್ಬರಾಯರೇ! ಇವಳು ನನ್ನ ತಂಗಿ ಸುಶೀಲೆ," ಎಂದು ಪರಿಚಯ ಮಾಡಿಕೊಡುವಷ್ಟರಲ್ಲಿ, ನಿಸರ್ಗವು ಅಲ್ಲಿ ಪುಟಿದು ಜಿಗಿದಿತು; ಹೊಸ ಗುರುತಿನಲ್ಲಿ ಹಳೆಯ ಕೆಳೆಯು ಬೆರೆದಿತು. ಹಸ್ತಾಂದೋಲನಕ್ಕೆಂದು ಎತ್ತಿದ ಇಬ್ಬರ ಕೈಗಳು ಪರಸ್ಪರ ಕೊರಳಲ್ಲಿ; ಇಬ್ಬರೂ ನೇತ್ರಗಂಗೆಯ ಪ್ರವಾಹದಲ್ಲಿ,

ಸುಶೀಲೆಯ ಜನ್ಮಚರಿತ್ರವನ್ನು ತಿಳಿದಿದ್ದ ಕುಮಾರನಿಗೆ ಇದೆಲ್ಲ ಆಗಲೇ ಹೊಳೆದಿತು; ಈ ಮಧುರ ಮಿಲನದಿಂದ ಅವನ ಕಂಗಳಲ್ಲಿಯೂ ಸ್ನೇಹ ಬಿಂದುಗಳು ಹೊಳೆದುವು; ಕೈಹಿಡಿದು ಮೆಲ್ಲಗೆ ಅವರಿಬ್ಬರೊಂದಿಗೆ ರೂಮಿನಲ್ಲಿ ಬಂದನು; ಕುಮಾರನು ತನ್ನ ತಂದೆಗೆ ಇದನ್ನು ತಿಳಿಸಲೆಂದೊ, ಒಡಹುಟ್ಟಿ ದವರ ಬೆಡಗಿನ ಆಪ್ತಭಾಷಣವು ಸಾಗಲೆಂದೋ ಕುಮಾರನು ಸದ್ದಿಲ್ಲದೆ ಹೊರಗೆ ಬಂದನು. ತಾವು ರೂಮಿನಲ್ಲಿ ಬಂದಿದ್ದರೆಂಬ ಅರಿವೂ ಇಲ್ಲದ ಅಂಣ ತಂಗಿಯರಿಗೆ ಇದು ಹೊಳೆಯುವುದು ಹೇಗೆ?

ಇಂದು ತನಿಮನೆ ತುಂಬಾ ಆನಂದದ ತೆರೆಗಳು. ಇವುಗಳ ತುಷಾರ ದಿಂದ ವಯಸ್ಕ ಜಾಗೀರದಾರರಿಗೂ ತಮ್ಮ ತಾರುಣ್ಯಾವಸ್ಥೆಯು ನೆನಪಾಗಿ ಅವರೂ ಇವರೊಳಗೆ ಬೆರೆತರು.

ರಾತ್ರಿಯ ಊಟವೂ ಆಯಿತು. ಕುಮಾರನ ರೂಮಿನಲ್ಲಿ ಎಲ್ಲರೂ ಸೇರಿ ಆಡಿದ ಮಾತುಗಳೇನೋ, ಹೇಳಿದ ಕಥೆಗಳೇನೋ ಬಂಣಿಸಲಾಗದು. ಬೆಳಗಿನಲ್ಲಿ ಏಳುವುದಕ್ಕೆ ತಡವಾದೀತೆಂದು ಜಾಗೀರದಾರರು ಮಗನ ಪರೋಪ ಕಾರ ಬುದ್ಧಿಯನ್ನು ಮನಸ್ಸಿನಲ್ಲಿ ಕೊಂಡಾಡುತ್ತ ಅಟ್ಟದ ಪಾವಟಿಗೆ ಏರಿದರು.

ಆಗ ತಾನೇ ಈ ಮೂವರ ಮಾತಿಗೆ ಉಕ್ಕು ಏರಿತು. ಬರಬರುತ್ತ ಅದು ವಾದದಲ್ಲಿ ಪರಿವರ್ತನವಾಯಿತು.

"ಸುಬ್ಬು:—ನಮ್ಮ ನಿಮ್ಮ ವಿಚಾರಸರಣಿಯಲ್ಲಿ ಇದೇ ವ್ಯತ್ಯಾಸ ನೋಡಿ, ಕುಮಾರ!........ಸುಶೀಲೆಯ ಪುನರ್ವಿವಾಹಕ್ಕೆ ತೋರುವ ಅಸಮ್ಮ

ತಿಗೆ ಇಷ್ಟು ಬೆಲೆ ಕೊಟ್ಟು ಇದೇ ಆದರ್ಶವೆಂದು ಹೇಳಿದರೆ ನಾನು ಒಪ್ಪಲಾರೆನು, ಇದರಿಂದ ನಮ್ಮನ್ನು ಬಿಗಿದಿರುವ ರೂಢಿರಾಕ್ಷಸನು ಇನ್ನಿಷ್ಟು ತಲೆಗೇರುವನು. ಸುಶೀಲೇ! ನಿಜವಾಗಿ ಹೇಳು, ನೀನು ಒಂಟಿಗಳಾಗಿ ಇರಬೇಕೆನ್ನುವೆಯೇನು?

ಸುಶೀಲೆ:—ಖಂಡಿತವಾಗಿ.

ಸುಬ್ಬು:—ಇರಬಹುದೆ? ಚೆನ್ನಾಗಿ ವಿಚಾರಮಾಡಿದೆಯಾ?

ಕುಮಾರ:—ಸುಬ್ಬರಾಯರೇ! ಇದಕ್ಕೆ ನನ್ನ ಉತ್ತರ ಕೇಳಿ; ಸುಶೀಲೆ ಅನಾಥೆಯೇನೋ ಹೌದು, ಆದರೆ ಇಡೀ ಆಯುಷ್ಯ ಬ್ರಹ್ಮಚಾರಿಗಳಾಗಿ ಇಂದಿಗೂ ವಂದ್ಯನಾಗಿರುವ ಪುರುಷಜೀವಿಗಳು ನಮ್ಮ ಭಾರತದಲ್ಲಿ ಹುಟ್ಟಿಲ್ಲವೆ? ಹುಟ್ಟುತ್ತಿಲ್ಲವೆ? ಇಂತೇ ನಮ್ಮ ಸುಶೀಲೆಯಂತ ಯುವತಿಯರು ನಮ್ಮ ಸಮಾಜಕ್ಕೆ ಆದರ್ಶವಾಗಿರುವುದಾದರೆ ಒಳಿತಲ್ಲವೆ?

ಸುಬ್ಬು:—ಕುಮಾರ! ನೀವೇ ಹೇಳುವಂತೆ ಇಂದು ನೂರಕ್ಕೆ ಮೂವರಾದರೂ ಹಾಗೆ ನಡೆಯಬಯಸುವರೇ? ಆದರ್ಶವಾದುದು ಅಪರೂಪವಾಗಿಯೂ ಇರುವುದಲ್ಲವೆ? ಆ ಅಪರೂಪಕ್ಕೂ ಜೀವನದ ಆ ಸಾಮಾನ್ಯವಾದ ಆವೇಶಕ್ಕೂ ತಳಕು ಹಾಕಿ ಅದಕ್ಕೆ ದೇವರ ಭಯ, ಧರ್ಮದ ಕಟ್ಟಳೆ, ತೋರುವುದರಲ್ಲಿಯೇ ಅನರ್ಥಕ್ಕೆ ಜನ್ಮವಲ್ಲವೆ? ಈ ಅನರ್ಥದ ಹಾವಳಿಯಲ್ಲಿ ನಮ್ಮ ಜನಾಂಗವು ಹಾಳಾಗುತ್ತಿದೆಯಲ್ಲವೆ?

ಸುಶೀಲೆ:—ಹಾಗಾಗದರೆ ಸುಬ್ಬು! ನೀನು ಆದರ್ಶವನ್ನು ಒಪ್ಪುವುದಿಲ್ಲವೆ?

ಸುಬ್ಬು:—ಹಾಗಲ್ಲ, ಸುಶೀಲೇ! ನಮಗೆ ಆದರ್ಶವೂ ಬೇಕು, ದೇಶಕಾಲ ಪರಿಸ್ಥಿತಿಗಳ ಸೂಕ್ಷ್ಮದರ್ಶನವೂ ಬೇಕು. ಉದಾಹರಣಾರ್ಥ: ಸ್ತ್ರೀಯು ಪುರುಷನೆಡೆಗೆ ನೋಡಬಾರದು ಎಂಬ ಆದರ್ಶವನ್ನೇ ಇಟ್ಟುಕೊಳ್ಳೋಣ. ಹೀಗೆಂದ ಮಾತ್ರಕ್ಕೆ, ಎರಡು ಕಣ್ಣುಗಳನ್ನು ಕಟ್ಟಿಕೊಂಡು ನಡೆದರೆ ಅವಳು ಎಡವಿಯೂ ಬೀಳಬಹುದು; ಆದರ್ಶಕ್ಕೆ ವಿರುದ್ಧವಾಗಿ ಪರಪುರುಷನನ್ನೇ ಅಪ್ಪಿಕೊಳ್ಳಬಹುದು. ಅವಳು ಪರಪುರುಷನೆಡೆಗೆ ನೋಡಬಾರದು ಎಂದರೆ ತನ್ನ ಪತಿಯನ್ನು ನೋಡುವ ದೃಷ್ಟಿಯಿಂದ ನೋಡಬಾರದೇ ಹೊರತು ಅಣ್ಣ, ತಮ್ಮ ಎಂದು ತಿಳಿದು ಕೂಡ ನೋಡಕೂಡದೆ?

ಕುಮಾರ:—ನೀವು ಹೇಳುವಂತೆ ದೇಶ ಕಾಲ ಪರಿಸ್ಥಿತಿಗಳಿಗೆ ತಕ್ಕಂತೆ ಪೂರ್ವಜರು ಹಾಕಿಟ್ಟ ಕಟ್ಟಳೆಗಳನ್ನು ನಾವು ಬದಲಾಯಿಸುತ್ತ ನಡೆದರೆ ಈ 'ರೆಕರಿಂಗ' ಮುಗಿಯಬೇಕೆಂದು?

ಸುಬ್ಬು:—ಅದೇಕೆ? ಅವರು ತಮ್ಮ ಪರಿಸ್ಥಿತಿಗೆ ತಕ್ಕಂತೆ ಹೇಳಿದ ಮಾತು ನಮಗೆ ಈಗ ಸರಿಹೋಗುತ್ತದೆಯೋ ಇಲ್ಲವೋ ಎಂಬುದನ್ನು ನಾವೂ ನೋಡಬಾರದೆ?

ಕುಮಾರ:—ಅದರ ಬಗೆ ಹೇಗೆ? ವ್ಯಕ್ತಿವ್ಯಕ್ತಿಯೂ ಅದನ್ನು ನೋಡಿಕೊಂಡು ತನ್ನ ಮಟ್ಟಿಗಷ್ಟೇ ತೋರಿದಂತೆ ನಡೆಯುವುದೋ? ಈ ವ್ಯಕ್ತಿ ಸಮುದಾಯದಿಂದ ಆರಿಸಲಾಗುವ ತಜ್ಞರು ನಿರ್ಣಯಿಸುವಂತೆಯೋ?

ಸುಬ್ಬು:—ಖಂಡಿತವಾಗಿ, ತಜ್ಞರು ನಿರ್ಣಯಿಸುವ ಆದರ್ಶವೇ ನಮಗೆ ಬೇಕು. ಆದರೆ ಈ ತಜ್ಞರನ್ನು ಆರಿಸುವ ವ್ಯಕ್ತಿಸಮೂಹವು ಕೂಡ ಎಂತಹದಿರಬೇಕು ಗೊತ್ತೆ? ನೂರಕ್ಕೆ ನೂರು ಶಿಕ್ಷಣ ಪಡೆದವರು ಇರಬೇಕು.

ಕುಮಾರ:—ಹಾಗಾದರೆ ಎಲ್ಲರೂ ತಜ್ಞರೇ ಆಗುವರು........

ಸುಬ್ಬು:—ಅದು ಹೇಗೆ? ಎಲ್ಲರೂ ಎಲ್ಲಾ ವಿಷಯಗಳಲ್ಲಿ ತಜ್ಞರಾಗುವುದುಂಟೆ? ಆದರೆ ಎಲ್ಲರೂ ಸುಶಿಕ್ಷಿತರಾಗಬಹುದು. ಈ ಶಿಕ್ಷಣ ಬಲದಿಂದ ತಮತಮಗೆ ಬೇಕಿರುವಂತೆ ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ತಜ್ಞರೆನಿಸುವರು; ಇಲ್ಲಿ 'ಅವರು ಹೆಚ್ಚು ಇವರು ಕಡಿಮೆ' ಎಂಬ ಭೇದವೇ ಇರುವುದಿಲ್ಲ. ಇದೇ ನಮ್ಮ ಪ್ರೊಲಿಟೆರೇಟರ ಗುರಿ. ಡೇಮಾಕ್ರೇಟರಂತೆ ವಾಚಾಳತನದ ಬಲದಿಂದ ಪ್ರಜೆಯನ್ನು ಒಲಿಸಿಕೊಂಡು ಪ್ರತಿನಿಧಿಗಳಾಗಿ ರಾಷ್ಟ್ರದ ಸೂತ್ರಗಳನ್ನಷ್ಟು ಪಡೆದು ಮೆರೆಯುವುದು ನಮಗೆ ಬೇಕಿಲ್ಲ. ನಮ್ಮ ಒಕ್ಕಲಿಗರೂ ಕೂಲಿಕಾರರೂ ಎಷ್ಟರ ಮಟ್ಟಿಗೆ ಇನ್ನೂ ಅಶಿಕ್ಷಿತರಾಗಿ ಉಳಿದಿದ್ದಾರೆ, ಒಬ್ಬನು ಶ್ರೀಮಂತನಾಗುವಷ್ಟರಲ್ಲಿ ಎಷ್ಟು ಜನ ರೈತರು ಬಡತನದಲ್ಲಿ ಬೆಂದುಹೋಗುತ್ತಾರೆ ಎಂಬುದನ್ನು ಅರಸುವ ಸೋಶಾಲಿಝಂ ವಿನಾ ಬೇರೆ ಯಾವ ತರುಣೋಪಾಯವೇ ಇಲ್ಲ.

ಕುಮಾರ:—ಕ್ಷಮಿಸಬೇಕು, ಕುಮಾರರೇ! ಇದೂ ಒಂದು ಹೊಸ ಹುಚ್ಚು ಎಂದೆನಿಸುವುದು ನನಗೆ. ಇದೀಗ ತಾನೇ ಜರ್ಮನಿ ಮತ್ತು ಸೋವಿ

ಯೆಟ್ ರಶಿಯಾ ಪ್ಯಾಕ್ಟ ನೋಡಿ ಇಡೀ ಜಗತ್ತು ಬೆಟ್ಟು ಕಚ್ಚಿದೆಯಲ್ಲವೆ? ಇಪ್ಪತ್ತು ವರ್ಷಕ್ಕೆ ಮೀರಿದ ಉತ್ಕ್ರಾಂತಿಯನ್ನು ಹೊಂದಿಯೂ ಕೇವಲ ಐದಾರು ವರ್ಷದ ಬಾಲಕನಾದ ಜರ್ಮನಿಯ ನ್ಯಾಶನಲ್ ಸೋಶಾಲಿಝ್ಮ ದೊಂದಿಗೆ ಹಸ್ತಾಂದೋಲನ ಮಾಡಿದ ಸೋವಿಯೆಟ್ ಈಗ ಎತ್ತ ಸಾಗಿದೆ? ಹಾಗಂತೂ ಜರ್ಮನಿಯ ನ್ಯಾಶನಲ್ ಸೋಶಾಲಿಝ್ಮದ ಆದಿಬುನಾದಿಯು ಸೋವಿಯೆಟ ತತ್ವಗಳ ವೈರದಲ್ಲಿ; ಆದರೂ ಈ ಪ್ಯಾಕ್ಟ ನೋಡಿ ಇವರಿಬ್ಬರಲ್ಲಿ ಅಂತರ ಬಹಳವಿರದೆ ಸಾಮ್ಯವೇ ಬಹಳ ಎಂದೆನಿಸುವುದಿಲ್ಲವೆ? ಹಾಗೆ ಇರುವುದೂ ಸತ್ಯ.

ಸುಬ್ಬು:—ಕುಮಾರ! ಪ್ಯಾಕ್ಟ ಕಂಡ ಮಾತ್ರಕ್ಕೆ ರಾಜಕಾರ್ಯದ ಇತರ ಯಾವ ಉದ್ದೇಶವನ್ನು ಗಮನಿಸದೆ ಈ ಆರೋಪ ಮಾಡುವುದು ಸಾಹಸವೇ ಸರಿ.

ಕುಮಾರ:—ಅದೇಕೆ? ಸಾಧಾರಣವಾಗಿ ಹೇಳುವೆನು; ಸಾಮಾನ್ಯವಾದ ಪ್ರಜಾಜನರ ದೃಷ್ಟಿಯಲ್ಲಿ ಇವೆರಡೂ ರಾಜ್ಯಘಟನೆಯಲ್ಲಿ ಸಾಕಷ್ಟು ಸಾಮ್ಯವು ಒಡೆದು ಕಾಣುವುದು. ಎರಡೂ ರಾಷ್ಟ್ರಗಳಿಗೆ ಅವರವರ ಸರ್ವಾಧಿಕಾರಿಗಳು ಸರ್ವ ಸ್ವತಂತ್ರರು; ಎರಡೂ ದೇಶಗಳಲ್ಲಿ ರೂಢವಾದ ಅವರವರ ಪಕ್ಷಗಳಿಗೆ ರಾಜ್ಯವನ್ನು ನಡೆಸುವ ಹುಮ್ಮು ಗುತ್ತಿಗೆ. ಇವರಿಗೆ ತಾನೇ ಮಾನವ ಜೀವನದ ಎಲ್ಲ ಬಗೆಗಳಿಗೂ ಲಗಾಮು ಬಿಗಿದು ತಮಗೆ ಬೇಕಿರುವಲ್ಲಿಗೆ ಜಗ್ಗುವ ಸ್ವಾತಂತ್ರ್ಯ. ತನಗೆನಿಸುವ ಯಾವ ಅಭಿಪ್ರಾಯವನ್ನೂ ವೈಯಕ್ತಿವಾಗಿ ತಾಳಲಿಕ್ಕೆ ಯಾವ ವ್ಯಕ್ತಿಯೂ ಬಾಧ್ಯಸ್ಥನಲ್ಲ. ಒಂದೋ ಎರಡೋ ರಾಜಕೀಯ, ಆರ್ಥಿಕ, ಹಾಗೂ ಸಾಮಾಜಿಕವಾದ ಇವರ ಜೀವನಗಳ ತುಲನೆ ಮಾಡುತ್ತ ಹೋದರೆ ನಿಮ್ಮ ಸೋವಿಯೆಟ ಸೋಶಾಲಿಝ್ಮದಲ್ಲಿಯೂ ಸಾಕಷ್ಟು ದೋಷಗಳಿವೆ; ಅಲ್ಲದೆ ಇದು ಇನ್ನೂ ೨೦ ವರ್ಷದ ಹರೆಯದ ಹುಡುಗ; ಇವನನ್ನು ಅನುಸರಿಸುವಾಗಂತೂ ಹಿರಿಯರು ಹೇಳುವ "Look before you leap" ಎಂಬ ಗಾದೆಯನ್ನು ಬಹಳ ಲಕ್ಷ್ಯದಲ್ಲಿಡಬೇಕಲ್ಲವೆ?

ಸುಶೀಲೆ:—ಸುಬ್ಬು! ಕುಮಾರ! ಈ ವಾದದಲ್ಲಿ ಹೊತ್ತು ಎಷ್ಟಾಗಿದೆ ಗೊತ್ತೆ? ಇನ್ನು ಅರ್ಧ ತಾಸಿಗೆ ರಾಯರು ಸ್ನಾನಕ್ಕೆಂದು ಕೆಳಗಿಳಿಯುವರು.

ನಿಮ್ಮಿಬ್ಬರ ವಾದದ ಇತ್ಯರ್ಥವನ್ನು ನಾನು ಮಾಡಲೆ? ಈ ಇರ್ಮಂಗಳ ಗುರುತು ನನಗೆ ಬಹಳ ಇಲ್ಲವಾದರೂ ಆಗಾಗ ಕುಮಾರನೆ ಮಾಡಿಕೊಟ್ಟ ಪರಿಚಯದಿಂದ ಹೇಳಬಲ್ಲೆನಷ್ಟೆ. ಹಾಗಂತೂ ಯಾವ ರಾಷ್ಟ್ರದ ಕಟ್ಟು ಇನ್ನೂ ಪೂರ್ಣವಾಗಿ ಎಲ್ಲಿಯೂ ಮುಗಿದಿಲ್ಲವೆಂದು ನನ್ನ ಮತ; ಎಲ್ಲ ಕಡೆಯಲ್ಲಿಯೂ ಈ ಕಟ್ಟಡವಿನ್ನೂ ಏರುತ್ತಲೇ ಇದೆ ಇಂಥ ಕಾಲದಲ್ಲಿ ಭಾರತೀಯರಾದ ನಾವು ನಮ್ಮದೇ ಒಂದು ಇರ್ಮವನ್ನು ಯೋಚಿಸುವುದು ಇಷ್ಟವಲ್ಲವೆ? ಆ ಕಾರ್ಯವನ್ನು ನಮ್ಮ ಇಂಡಿಯನ್ ನ್ಯಾಶನಲ್ ಕಾಂಗ್ರೆಸು ನಡೆಸಿದೆ. ಆದರೆ ಪೂರ್ಣ ಸ್ವಾತಂತ್ರ್ಯ ಪಡೆಯುವ ವಿನಾ ಇದೇ ಖಂಡಿತವಾದ ಮಾರ್ಗ ಎಂದು ಹೇಳಲಿಕ್ಕೆ ಅದು ಕೂಡ ಅಷ್ಟೇ ಅಸಮರ್ಥ; ಇಂಥ ಪರಿಸ್ಥಿತಿಯಲ್ಲಿ ನಮ್ಮ ನಮ್ಮ ಮತಗಳೇನಿದ್ದರೂ ನಾವೆಲ್ಲರೂ ಅದರಲ್ಲಿ ಸೇರಬೇಕು, ನಮ್ಮ ನಮ್ಮ ಮತಗಳ ಪುರಸ್ಕಾರದಿಂದ ಅದರ ಬೆಳವಣಿಗೆ ಎಂದೆನಿಸಿದಲ್ಲಿ ನಾವು ಹಾಗೂ ಮಾಡಬೇಕು. ಪ್ರಸಂಗೋಚಿತವಾಗಿ ಅವನ್ನು ಬದಿಗೊತ್ತಲೂ ಸಿದ್ಧರಾಗಬೇಕು ಒಟ್ಟಿಗೆ ನಾವೆಲ್ಲರೂ ಒಂದಾಗಿ ಅದರ ಬಲವನ್ನು ಬೆಳೆಸಬೇಕು.

ಸುಬ್ಬು:—ಇದನ್ನು ಯಾವ ಭಾರತಪುತ್ರನು ತಾನೇ ಒಪ್ಪಲಿಕ್ಕಿಲ್ಲ? ಅಂತೂ ಕುಮಾರ! ನಿಮ್ಮ ಶ್ರಮಕ್ಕೆ ಈಡಿಲ್ಲ. ಒಂದೇ ಐದಾರು ವರ್ಷಗಳಲ್ಲಿ ಇವಳು ಎಚ್. ಎಸ್. ಎಲ್. ಸಿ ಪಾಸು ಮಾಡಿದ್ದಲ್ಲದೆ ಈ ರೀತಿ ಪ್ರಪಂಚದ ಪರಿಚಯ ಪಡೆದ ಶ್ರೇಯವೆಲ್ಲವೂ ನಿಮ್ಮದು

ಕುಮಾರ:—ಅದು ಹಾಗಿರಲಿ, ಶಿಕ್ಷಣವನ್ನು ಪಡೆಯುವುದರಲ್ಲಿ ಇವಳು ತೋರಿದ ಆಸಕ್ತಿ ಇಡೀ ಸ್ತ್ರೀಜಾತಿಗೆ ಆದರ್ಶ; ಬಾಲ್ಯವೆಲ್ಲ ದಕ್ಕಮುಗುಡಗಳಲ್ಲಿ; ಯೌವ್ವನವೆಲ್ಲ ವ್ಯಾಸಂಗದಲ್ಲಿ ಇನ್ನು ಮುಂದೆ ಸ್ತ್ರೀಜಾತಿಯ ಸೇವೆಯಲ್ಲಿ ತನ್ನ ಬಾಳು ವಿನಾಸಲಿಡುವ ಇವಳ ಧ್ಯೇಯವು ಕೂಡ ಅಷ್ಟೇ ಪ್ರಶಂಸನೀಯ....

ಸುಶೀಲೆ:—ನಗರವಾಸಿಯಾದ ಸ್ತ್ರೀವರ್ಗಕ್ಕಿಂತಲೂ ಹಳ್ಳಿಗಳಲ್ಲಿನ ನಮ್ಮ ಭಗಿನಿವರ್ಗದ ಏಳಿಗೆಯೇ ಮುಖ್ಯವೆಂದು ನನ್ನ ಭಾವನೆ. ಇದಕ್ಕೆ ತಕ್ಕಷ್ಟು ಶಿಕ್ಷಣವು ನನಗಿಲ್ಲ, ಎಂದೂ ಎನಿಸುವುದು; ಅವನ್ನು ಪಡೆಯು

ಬೇಕೆಂದರೆ ಈಗಾಗಲೇ ನಾಕಷ್ಟು ವಯಸ್ಸಾಗಿದೆ ಆದರೆ ಈ ಮಹತ್ಕಾರ್ಯಕ್ಕೆ ತಕ್ಕ ಶಿಕ್ಷಣಬಲವೂ ಅತ್ಯವಶ್ಯ. ಅಲ್ಲದೆ ಈ ಕಾರ್ಯವು ಕೂಡ ಒಂದು ರೀತಿಯಲ್ಲಿ ಗ್ರಾಮಸಂಘಟನೆಯೇ ಸರಿ. ನಾನು ಇದೇ ಶಿಕ್ಷಣ ಪಡೆಯಲು ಶಾಂತಿನಿಕೇತನದ ಶಾಖೆಯಾದ ಶ್ರೀನಿಕೇತನಕ್ಕೆ ಹೋಗಬೇಕೆಂದು ಕುಮಾರನ ಸೂಚನೆ; 'ತಥಾಸ್ತು' ಎಂದ ಹಿರಿಯರಾದ ಜಾಗೀರದಾರರ ಬೆಂಬಲ. ಈಗಾಗಲೇ ನಾನು ಹೋಗಬೇಕಾಗಿತ್ತು; ಆದರೆ ಕುಮಾರನ ಶುಭಮಂಗಳವನ್ನು ನೋಡಿ ಹೊರಡಬೇಕೆಂದು ತಡೆದಿರುವೆನಷ್ಟೆ.

ಕುಮಾರ:—ಸುಬ್ಬರಾಯರೇ! ತಡೆದಷ್ಟು ಇವಳಿಗೆ ತಡವೇ ಆಗುವುದು. ಸಮಾಜಕಾರ್ಯ, ಇದರಿಂದ ಬೆಳೆಯುವ ಉದಾತ್ತ ಜೀವನ ಇವುಗಳ ಹುಮ್ಮಗುತ್ತಿಗೆ ಇವಳಿಗಷ್ಟೇ ಏಕೆ? ವಿಜ್ಞಾನ ಶೋಧನ, ಇದರಿಂದ ಬೆಳೆಯುವ ದೇಶೋನ್ನತಿ, ಇವನ್ನು ಸಾಧಿಸಬೇಕೆಂದು ನನಗೂ ಅಷ್ಟೇ ಹುರುಪು ಹುಮ್ಮಸ; ದೊಡ್ಡ ಶಾಸ್ತ್ರವಾದ ವಿಜ್ಞಾನಶೋಧನಕ್ಕೆ ಏಸು ಜನ್ಮ ಎತ್ತಿದರೂ ಕಡಿಮೆ. ಹೀಗಿರುವಾಗ ಬಾಸಿಂಗಕ್ಕೆಂದು ನಾನು ತಲೆಬಾಗಬೇಕಂತೆ. ಈ ಪಂದ್ಯದಲ್ಲಿ ನಿನಗೆ ಗೆಲುವಿಲ್ಲ, ಕಂಡಿಯಾ!

ಎಲ್ಲರೂ ಒಮ್ಮನಸ್ಸಿನಿಂದ ನಗುವರು

ಕುಮಾರ:—ಅದಿರಲಿ, ಸುಬ್ಬರಾಯರೇ! ಇನ್ನು ತಮ್ಮ ಕಾರ್ಯಕ್ಷೇತ್ರವೆಲ್ಲಿ?

ಸುಬ್ಬು:—ಅದೇಕೆ? ನನ್ನ ಭಾರತದಲ್ಲಿ; ನಮ್ಮ ತ್ರಿವರ್ಣದ ಪತಾಕೆಯ ನೆರಳಲ್ಲಿ; ನಮ್ಮ ರಾಷ್ಟ್ರಧುರೀಣರ ಜೊತೆಯಲ್ಲಿ. ನಮ್ಮ ದೇಶದಲ್ಲಿ ಕಾಗದದ ಕಾರ್ಯನಿಲಯಗಳು ಅಲ್ಲೊಂದು ಇಲ್ಲೊಂದು ಇವೆಯಾದರೂ ಅವುಗಳ ಒಡೆಯರ ತಿಜೋರಿಗಳನ್ನು ತುಂಬಲಿಕ್ಕಷ್ಟೆ, ಎಂಬುದನ್ನು ಈಗಾಗಲೇ ಮನಗಂಡಿದ್ದೇನೆ. ಇದೀಗ ನಮ್ಮ ಧುರೀಣರು ಯೋಚಿಸಬೇಕಾದ ರಾಷ್ಟ್ರೀಯ ಉದ್ಯಮಗಳ ವಿಷಯವಾದ ಧೋರಣೆಯ ಕಾಲ; ಈ ಧೋರಣೆಯನ್ನು ಅನುಸರಿಸಿ ನಾವು ತೆರೆಯುವ ಕಾರ್ಯನಿಲಯವು ನಮ್ಮ ಕಾಂಗ್ರೆಸ್ಸಿನ ಸೊತ್ತು ಆಗಿರಬೇಕು; ಇದನ್ನು ಸಾಧಿಸುವುದೇ ನನ್ನ ಹೆಗ್ಗುರಿ.

ಬೆಳಗಿನ ನಾಲ್ಕು ಗಂಟೆಯ ತೋಪು ಕೇಳಿ, ಜಾಗೀರದಾರರು ಕೆಳಗಿಳಿದು ಬಂದರು.

"ಏನಯ್ಯಾ ಇದು! ನಮ್ಮ ಯುವಕರು ಇರುಳನ್ನು ಹಗಲು ಮಾಡಿದರು," ಎನ್ನುತ್ತ ಅಷ್ಟೆ ಉಲ್ಲಾಸದಿಂದ ತಮ್ಮ ಪೀಠಕ್ಕೆ ಬಂದರು.

ನಡೆದ ವಾದದ ಫಲಿತಾಂಶವನ್ನು ಅವರಿಗೂ ತಿಳಿಸಿದ್ದಾಯಿತು.

ರಾಯರು ಮಗನ ಸಮಾಚಾರಕ್ಕೆ ಇದು ಯೋಗ್ಯ ಸಮಯವೆಂದು ಹುರುಪು ತಾಳಿದರು.

"ಸುಬ್ಬರಾಯರೇ! ಈ ಸಮಾಜಕಾರ್ಯ, ದೇಶಕಾರ್ಯ, ಕಾರ್ಯಧೋರಣ, ಇವೆಲ್ಲ ನಿಮ್ಮಂಥ ಹೊಸನೆತ್ತರದ ಯುವಕರ ಮಾತು. ಶ್ರೀಹರೀ! ಸರ್ವಸ್ವವು ನಿನ್ನದೆಂಬ ನನ್ನಂಥ ವಯೋವೃದ್ಧನಿಗೆ ಇವುಗಳಲ್ಲಿ ಅಷ್ಟು ಹುರುಪು ಎಲ್ಲಿ? ಕೈಗೆ ಬಂದ ಮಗನಿಗೆ ನಾಲ್ಕು ಕೈಗಳಾದುದನ್ನು ನೋಡಿದರೆ ನನಗೆ ಶಾಂತಿ, ಅಲ್ಲವೆ ಸುಬ್ಬರಾಯರೇ! ಆದರೆ ನಮ್ಮ ಕುಮಾರನು ಎಷ್ಟು ಯುಕ್ತವಾದಿಯೋ ಅಷ್ಟೇ ಹಠವಾದಿ; ತಾವೇ ಹೇಳಿ; ಈ ವಿಷಯವಾಗಿ ಅವನಿಗಿಷ್ಟು ತಿಳಿಹೇಳಿ" ಎಂದು ಗೆಲುವಿನ ನೋಟದಿಂದ ಮಗನೆಡೆಗೆ ನೋಡಿದರು.

ಇಂಥ ಉಭಯ ಸಂಕಟ ಸಮಯದಲ್ಲಿ ಸುಬ್ಬರಾಯರು ಯಥಾರ್ಥ ಹಿರಿಯರಿಗೆ ತೋರಬೇಕಾದ ಗೌರವಕ್ಕೆ ಯುಕ್ತವಾಗಿ "ಹೌದು ಕುಮಾರ! ಇಂದಿನ ವಾದದಲ್ಲಿ ಇದನ್ನು ಕುರಿತು ನಾವು ನಾಕಷ್ಟು ವಿಚಾರ ಮಾಡಲಿಲ್ಲ. ಇನ್ನೊಮ್ಮೆ ಹೆಚ್ಚು ವಿರಳವಾಗಿ ಯೋಚನೆ ಮಾಡುವುದು ಅತ್ಯವಶ್ಯ" ಎಂದರು.

"ಬೇಶ್! ನಮ್ಮ ಕುಮಾರನಿಗೆ ಚನ್ನಾಗಿ ತಿಳಿಹೇಳಿ" ಎಂದು ಸ್ನಾನದ ಮನೆಗೆ ನಡೆದರು.

ಪ್ರಾತಃಕಾಲದ ವಿಹಾರಕ್ಕೆಂದು ಈ ಮೂವರು ಬೀದಿಗೆ ಬಂದರು.

ತಿಂಗಳೊಳಗಾಗಿಯೇ ಕರ್ನಾಟಕ ಸಂಘದಲ್ಲಿ ಮತ್ತೊಂದು ಆನಂದ ಕೂಟದ ಸಮಾರಂಭ.

ಜಮೀನ್ದಾರ ಸುಧೀರರಾಯರ ಕನ್ನಡ ಪ್ರೇಮವು ಇತರ ಲಕ್ಷ್ಮೀ ಪುತ್ರರಿಗೆ ಮಾದರಿಯಾಗಿದೆ ಎಂದರೂ ತಪ್ಪಲ್ಲ. ಕನ್ನಡಿಗರ ಚಟುವಟಿಕೆಗಳಿಗೆ ಅವರ ಭವನವು ಮುಕ್ತದ್ವಾರವಾಗಿರುವುದು.

ಕನ್ನಡಿಗರಿಗಷ್ಟೆ ಅಲ್ಲದೆ ಇತರ ಪ್ರಾಂತೀಯ ಬಂಧುಭಗಿನಿಯರಿಗೆ ಔತಣವಿದ್ದಿತೆಂದು ಭವನದಲ್ಲಿ ಇಂದು ಉಲ್ಲಾಸವೇ ವ್ಯೈದಾಳಿತ್ತು. ಇಬ್ಬರೂ ಅಣ್ಣಂದಿರೊಂದಿಗೆ ಸುಶೀಲೆಯು ಬಂದಾಗ ನೆರೆದವರ ಕರತಾಡನದಲ್ಲಿ ಕನ್ನಡಿಗರ ಕಾಂತಿಯೆ ಎಸೆದಿತು. ಸಂಘದ ಅಧ್ಯಕ್ಷರಾದ ಜಮೀನ್ದಾರರೇ ಸಮಯಕ್ಕೆ ಉಚಿತವಾದ ಆನಂದವನ್ನು ವ್ಯಕ್ತಮಾಡಿದರು. ಸಭಿಕರೆಲ್ಲರೂ ಅವರ ಆನಂದದಲ್ಲಿ ಬೆರೆತರು.

"ನನ್ನ ಜಾತಿ ಬಾಂಧವರೇ! ಅಕ್ಕರದ ಅಕ್ಕತಂಗಿಯರೇ! ತಮ್ಮೆಲ್ಲರಿಗೂ ಸಾಧ್ಯವಾಗಿರುವ ಶಿಕ್ಷಣಪ್ರಭಾವದ ಬೆಳಕು ನನ್ನ ಬಾಳಿಗೂ ಬೇಕೆಂದು ನಾನೂ ಅದನ್ನು ಅರಸಿ ಹೊರಟಿರುವೆನಷ್ಟೆ. ಸರಸ್ವತಿಯ ಆರಾಧನೆಯಲ್ಲಿ ಈತ ಪುರುಷ, ಈಕೆ ಸ್ತ್ರೀ ಎಂಬ ಭೇದಕ್ಕೆ ಎಡೆಯುಂಟೇ? ಅದಿಲ್ಲ ಎಂತಲೇ ಈ ಭವನದಲ್ಲಿ ನನ್ನ ಸೋದರ ಸೋದರಿಯರ ಗುಂಪು. "Education is the manifestation of perfection" ಎಂದು ಹೇಳಿದ ಸ್ವಾಮಿ ವಿವೇಕಾನಂದರ ನಲ್ನುಡಿಯು ಗಂಡಸರಿಗೂ ಹೆಂಗಸರಿಗೂ ಅಷ್ಟೇ ಮಾರ್ಗದರ್ಶಿಯಾಗಿದೆಯಲ್ಲವೆ? ಜ್ಞಾನದ ತಿಳಿಗನ್ನಡಿಯಲ್ಲಿ ನಮ್ಮ ರೂಪವನ್ನು ಕಾಣುವುದು, ಕಂಡು ಕಮನೀಯ ಕಾಂತಿಯನ್ನು ಪಡೆಯುವುದು, ಇಬ್ಬರಿಗೂ ಅಷ್ಟೇ ಜೀವ ಜೀವಾಳದ ವಿಷಯವಲ್ಲವೆ? ಹೀಗಿರುವಾಗ ನಮ್ಮ ಜನಾಂಗದಲ್ಲಿ ಸ್ತ್ರೀಶಿಕ್ಷಣದ ಪ್ರಮಾಣವನ್ನು ನೋಡಿದರೆ ಜೀವವು ಮರುಗುವುದು; ಶಿಕ್ಷಣದ ಸಂಸ್ಕಾರವಿಲ್ಲದೆ ರೂಢಿಯ ರಕ್ಕಸನಿಗೆ ಅಂಕಿತವಾದ ಹೆಣ್ಣಿನ ಬಣ್ಣವನ್ನು ಕಂಡರೆ ಹೃದಯವು ಕುಗ್ಗುವುದು. ಕುಗ್ಗಿದರೆ ಜೀವನವು ಸಾಗುವುದೆಂತು? ಇಂದಿನ ಮುಂದಿನ ಭಾರತಿಯ ಸಂತಾನ ಬೆಳೆಯುವುದೆಂತು? ಬೆಳೆದರೂ ಬಾಳುವುದೆಂತು? ಬಾಳಿದರೂ ಬದುಕುವುದೆಂತು? ಕಂಡ ಕೊರತೆಯನ್ನು ಕಳೆಯಬೇಕು; ತಪ್ಪಿದ ಅಡಿಯನ್ನು ತಿದ್ದಬೇಕು; ಕುಂದು ಅಳಿಸಿ ಅಂದವನ್ನು ಕಾಣಲೆಂದು ಮುಂದಡಿಯಿಡಬೇಕು; ನುಗ್ಗಬೇಕು;" ಎಂದು ಅವಳ ಭಾಷಣವು ಅದೊಂದು ಅಮೃತವಾಹಿನಿ. ಅವಳ ವ್ಯಾಸಂಗ ಪ್ರೇಮವು ಶಬ್ದಶಬ್ದಗಳಲ್ಲಿ ಮೂಡಿತ್ತು. ಅವಳ ಮುಖದಲ್ಲಿನ ಒಂದೊಂದು ಭಾವವೂ ಅವಳು ಬಗೆದ ಸಮಾಜ ಸೇವಾ ವೃತ್ತಿಗೆ ಸಾಕ್ಷಿಯಾಗಿತ್ತು. "ಇರುಳು ಕಂಡ ಬಾವಿಯನ್ನು ಹಗಲು ಹಾರದಂತೆ ಎಚ್ಚರಿಕೆಯಿದ್ದರೆ ಸಾಕು,

ಗಂಡಸೇನು? ಹೆಂಗಸೇನು? ಇಬ್ಬರಿಗೂ ಜೀವಕಳೆಯು ಕಟ್ಟಿಟ್ಟದ್ದು," ಎಂದು ಅವಳು ಮತ್ತೊಮ್ಮೆ ಹೇಳಿದಾಗ ಅವಳ ಆತ್ಮವಿಶ್ವಾಸವು ವಿಶ್ವವನ್ನೇ ಗೆಲ್ಲುವಂತಿದ್ದಿತು. "ತಾವುಗಳು ಒಲುಮೆಯಿಂದ ನೀಡುವ ಈ ಚಂದವನ್ನು ಉಂಡು ತಮ್ಮ ತಂಗಿಯು ಈಗ ಶಾಂತಿನಿಕೇತನಕ್ಕೆ ಹೊರಡುವಳು; ಕವಿ ರವೀಂದ್ರರಡಿಯಲ್ಲಿ ಶಾಂತಿಯನ್ನು ಸವಿದು ಇನ್ನಿಷ್ಟು ಪುಷ್ಟಿಯನ್ನು ತಾಳಿ ಬೇಗ ತಮ್ಮೆಲ್ಲರ ಸೇವೆಯಲ್ಲೇ ತುಷ್ಟಿಯನ್ನು ಹೊಂದಲೆಂದು ಹಾರೈಸುವಳು. ಎಲ್ಲರೂ ಆನಂದದಿಂದ ಆಶೀರ್ವಾದಗಳನ್ನು ಕರೆಯಬೇಕೆಂದು ಬಿನ್ನಹ" ಎಂದು ತಾನೂ ನೆರೆದವರಿಗೆ ಇಂಪನ್ನು ಉಣಿಸಿದಳು.